
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 17
ಸಂಚಿಕೆ 09
ರೂ. 2.00

ಐಕ್ಯರಂಗ

26 ಫೆಬ್ರವರಿ 1995



ಜಡ, ಅರ್ಥಹೀನ ರಾಷ್ಟ್ರಪತಿ ಭಾಷಣ

ಸಂಸತ್ತಿನ ಬಜೆಟ್ ಅಧಿವೇಶನವನ್ನುದ್ದೇಶಿಸಿ ರಾಷ್ಟ್ರಪತಿಗಳು ಮಾಡಿರುವ ಭಾಷಣ ಜಡವಾದ ಉತ್ಸಾಹಹೀನ, ಅರ್ಥಹೀನ ಭಾಷಣ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ವರ್ಣಿಸಿದ್ದಾರೆ.

"ಕಳೆದ ವರ್ಷ ಕಂಡು ಬಂದ ಆಶಾವಾದ, ಆತ್ಮವಿಶ್ವಾಸ ಸರಿಯೆಂದು ಸಾಬೀತಾಗಿದೆ. ಆಗ ನೀಡಿದ ಅಂದಾಜುಗಳು ಬಹುಮಟ್ಟಿಗೆ ನೆರವೇರಿವೆ....ಜನತೆ ಅತ್ಯುತ್ತಮ ರೀತಿಯಲ್ಲಿ ಸ್ಪಂದಿಸಿದ್ದಾರೆ, ಸಾಮಾಜಿಕ ಸ್ಥಿರತೆಯಲ್ಲಿ ತಮ್ಮ ನಂಬಿಕೆಯನ್ನು ಮತ್ತೆ ಒತ್ತಿ ಹೇಳಿದ್ದಾರೆ" ಹೀಗೇ ರಾಷ್ಟ್ರಪತಿಗಳ ಭಾಷಣ ಆರಂಭವಾಗಿದೆ! ಇತ್ತೀಚಿನ ಚುನಾವಣಾ ಫಲಿತಾಂಶಗಳ, ಬೆಲೆಯೇರಿಕೆ ಮತ್ತೆ ನಾಗಲೋಟ ಆರಂಭಿಸಿರುವುದನ್ನು ಉದಾರೀಕರಣದ ಕಟ್ಟಾ ಬೆಂಬಲಿಗರೂ ಆತಂಕದಿಂದ ಗಮನಿಸುತ್ತಿರುವ, ಭ್ರಷ್ಟಾಚಾರದ ತಾಂಡವ ಕಂಡು ಭ್ರಷ್ಟಾಚಾರವೆಂಬುದು ಉದಾರೀಕರಣದ ಇನ್ನೊಂದು ಹೆಸರೇನೋ ಎಂದು ಜನ ಸಂಶಯಪಡುವಂತಹ ಸಂದರ್ಭದಲ್ಲಿ ರಾಷ್ಟ್ರಪತಿಗಳ ಈ ಮಾತಿಗೆ ಏನು ಅರ್ಥವಿದೆ? ಆದ್ದರಿಂದ ಕಾಂಗ್ರೆಸ್(ಐ) ಜನಗಳಿಂದ ಎಷ್ಟು ದೂರ ಸಾಗಿದೆ ಎಂಬುದನ್ನು ಒಟ್ಟಾರೆಯಾಗಿ ಪ್ರತಿಬಿಂಬಿಸುವ ಭಾಷಣ ಇದು ಎಂದು ಸುರ್ಜಿತ್ ಬಲವಾಗಿ ಖಂಡಿಸಿದ್ದಾರೆ.

ಸರಕಾರದ ಆರ್ಥಿಕ ನೀತಿಗಳು "ಪ್ರಯೋಜನಕಾರಿ ಬದಲಾವಣೆಗಳನ್ನು ತಂದಿವೆ" ಮತ್ತು "ವಿದೇಶಗಳಲ್ಲಿ, ಅತ್ಯುತ್ತಮ ಸ್ಪಂದನಗಳಿಸಿದೆ" ಇದು ನರಸಿಂಹರಾವ್ ಸರ್ಕಾರದ 'ಸಾಧನೆ' ಎಂದು ರಾಷ್ಟ್ರಪತಿಗಳು ಹೇಳಿಕೊಂಡಿದ್ದಾರೆ. ವಿದೇಶಗಳಲ್ಲಿ ಮಾತ್ರವಲ್ಲ, ಭಾರತದ ಗುತ್ತೇದಾರಿಗಳಿಗೂ ಸರ್ಕಾರದ ಆರ್ಥಿಕ ನೀತಿಗಳು ಸಂತಸ ತಂದಿವೆ. ಅದು ಸಹಜವೇ ಆಗಿದೆ. ಹೇಗೆಂದರೆ ಐ.ಎಂ.ಎಫ್.-ವಿಶ್ವಬ್ಯಾಂಕ್ ಹೇರಿದ ಆ ನೀತಿಗಳ ನಿಜ ಉದ್ದೇಶವೇ ಅದು. ಸಿಪಿಐ(ಎಂ)ನ 15ನೇ ಮಹಾಧಿವೇಶನದ ಕರಡು ನಿರ್ಣಯ ಗಮನಿಸಿದಂತೆ "ಈ ಮಾರಕ ನೀತಿಗಳ ಪ್ರಯೋಜನ ಈ ದೇಶದಲ್ಲಿ ದೊರಕಿದ್ದು ನಗರಗಳ ಮತ್ತು ಗ್ರಾಮೀಣ ಶ್ರೀಮಂತರಿಗೆ ಮಾತ್ರ. ಏಕೆಂದರೆ ಇಡೀ ಆರ್ಥಿಕ ನೀತಿಯನ್ನೇ ಮೇಲ್ವರ್ಗದ ಶೇ. 10 ಶ್ರೀಮಂತರ ಹಾಗೂ ಅವರು ಒದಗಿಸುವ ಮಾರುಕಟ್ಟೆಯ ಅಗತ್ಯಗಳನ್ನು ಪೂರೈಸಲೆಂದೇ ರೂಪಿಸಲಾಗಿದೆ".

ಆದರೆ ರಾಷ್ಟ್ರಪತಿಗಳ ಭಾಷಣ "ಜನರು, ಅದರಲ್ಲೂ ಬಡಜನರು ಈ ಆರ್ಥಿಕ ನೀತಿಗಳನ್ನು ಒಪ್ಪಿಕೊಳ್ಳುವಂತೆ ಮಾಡಿ, ವಿದೇಶೀಯರು ತೋರಿದ ಭರವಸೆಯನ್ನು ಹಾಳುಗೆಡಹುವಂತದ್ದೇನೂ ಮಾಡಬೇಡಿ" ಎಂದು ಸಂಸತ್ ಸದಸ್ಯರಿಗೆ ಉಪದೇಶ ನೀಡಿದೆ! ವಿದೇಶೀಯರ ಭರವಸೆ, ಸರ್ಟಿಫಿಕೇಟ್‌ಗಳ ಬಗ್ಗೆ ಮಾತನಾಡಿರುವ ಈ ಭಾಷಣ ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮ -ಯು.ಎನ್.ಡಿ.ಪಿ.ಯ 1994ರ 'ಮಾನವ ಅಭಿವೃದ್ಧಿ ವರದಿ' ಏನು ಹೇಳಿದೆ ಎಂಬುದನ್ನು ಮಾತ್ರ ಗಮನಿಸಿದಂತಿಲ್ಲ, ಅದು ಭಾರತ ಸರ್ಕಾರದ ಉದಾರೀಕರಣ ನೀತಿಯ ಬಗ್ಗೆ ಟಿಪ್ಪಣಿ ಮಾಡುತ್ತಾ 'ಸುಧಾರಣೆ'ಗಳಿಗೆ ಭಾರೀ ಬೆಲೆ ತೆರುತ್ತಿರುವವರು ಜನಸಂಖ್ಯೆಯ ಮೂರನೇ ಒಂದು ಭಾಗಕ್ಕಿಂತಲೂ ಹೆಚ್ಚು ಇರುವ ಬಡ ಗ್ರಾಮೀಣ ಬಡಜನರು, ಆದರೆ ಅವರು ಪ್ರಯೋಜನಗಳನ್ನೇನೂ ಇನ್ನೂ ಕಾಣುತ್ತಿಲ್ಲ ಎಂದಿದೆ. ವಿದೇಶೀ ಬಂಡವಾಳ ಹೂಡಿಕೆದಾರರ, ಅಮೇರಿಕನ್, ಬ್ರಿಟಿಷ್, ಆಸ್ಟ್ರೇಲಿಯಾ, ಜಪಾನಿನ ಗುತ್ತೇದಾರರ ಸರ್ಟಿಫಿಕೇಟ್‌ಗಳನ್ನು ನೋಡಿಯಾದರೂ ಭಾರತದ ಕೋಟ್ಯಂತರ ಬಡವರು ತಮ್ಮ ಆರ್ಥಿಕ ನೀತಿಗಳನ್ನು ಒಪ್ಪಿಕೊಳ್ಳಲೇಬೇಕು ಎಂದು ಈ ನರಸಿಂಹರಾವ್ ಸರ್ಕಾರ ಬಯಸುತ್ತಿದೆಯೇ? ಈ ಸರ್ಕಾರ ಇರುವುದು ದೇಶದ ಬಹುಪಾಲು ಜನರಿಗಾಗಿಯೇ ಅಥವಾ ವಿದೇಶೀ ಬಂಡವಾಳ ಹೂಡಿಕೆದಾರರಿಗಾಗಿಯೇ?

- ಸುರ್ಜಿತ್

ಸಂಸತ್ತಿನ ಒಳಗೆ, ಹೊರಗೆ ತೀವ್ರ ಟೀಕೆಗೊಳಗಾದ, ಸರಕಾರವನ್ನು ಅಲುಗಾಡಿಸಿದ ಭ್ರಷ್ಟಾಚಾರದ ಪ್ರಕರಣಗಳ ಬಗ್ಗೆ ರಾಷ್ಟ್ರಪತಿ ಭಾಷಣ ಸಂಪೂರ್ಣ ಮೌನತಾಳಿದೆ. ಅಲ್ಪಸಂಖ್ಯಾತರಲ್ಲಿ ತಾವು ಪರಕೀಯರೇನು ಎಂಬ ಅನುಮಾನ ಮೂಡಿರುವ ಬಗ್ಗೆ, ಜನಸಾಮಾನ್ಯರ ಮೇಲೆ ಆರ್ಥಿಕ ನೀತಿಗಳು ಬೀರುತ್ತಿರುವ ಪರಿಣಾಮಗಳ ಬಗ್ಗೆ ಈ ರಾಷ್ಟ್ರಪತಿ ಭಾಷಣ ಸಂಪೂರ್ಣ ಮೌನವಾಗಿದೆ ಎಂದು ಸುರ್ಜಿತ್ ಟೀಕಿಸಿದ್ದಾರೆ. ನಿಜ, ಬೆಲೆಯೇರಿಕೆಯ ಬಗ್ಗೆ, ಅದರಲ್ಲೂ ಸಾಮೂಹಿಕ ಬಳಕೆಯ ವಸ್ತುಗಳ ತೀವ್ರ ಬೆಲೆಯೇರಿಕೆಯ ಬಗ್ಗೆ ಭಾಷಣ ಆತಂಕ ವ್ಯಕ್ತಪಡಿಸಿದೆ. ಏನು ಮಾಡುವುದು? ಎಷ್ಟೇ ಬಯಸಿದರೂ ನಿರ್ಲಕ್ಷಿಸಲಾಗದ ರೀತಿಯಲ್ಲಿ ಬೆಲೆಯೇರಿಕೆ, ಹಣದುಬ್ಬರ ಕಣ್ಣಿಗೆ ರಾಚುತ್ತಿದೆಯಲ್ಲ! ಆದರೆ ಅದನ್ನು ಪರಿಹರಿಸಲು ಸರಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂಬುದರ ಸಂಕೇತವನ್ನಾದರೂ ನೀಡಿಲ್ಲ, ಆದರೂ ಜನ ಸರಕಾರದ ಆರ್ಥಿಕ ನೀತಿಗಳನ್ನು ಬೆಂಬಲಿಸಬೇಕಂತೆ- ದೇಶೀ-ವಿದೇಶೀ ಗುತ್ತೇದಾರಿಗಳ ಸ್ವಾರ್ಥದ ಸರ್ಟಿಫಿಕೇಟ್ ನೋಡಿಕೊಂಡು!

ಅಯೋಧ್ಯೆಯ ಪರಿಹಾರ ಕುರಿತಂತೆ ಬಹುಸಂಖ್ಯಾಕ ಕೋಮುವಾದಿಗಳೊಡನೆ ಸ್ಪರ್ಧೆಗಿಳಿದ ರಾವ್ ಸರಕಾರದ ನೀತಿಗೆ ಸುಪ್ರೀಂ ಕೋರ್ಟ್ ನೀಡಿದ ಪ್ರಹಾರದ ಬಗ್ಗೆ ಹೇಳಿಕೊಳ್ಳಲಾಗದ ಈ ಭಾಷಣ ಮುಂದಾದರೂ ಇಂತಹ ಸಮಯಸಾಧಕ ನೀತಿ ಕೈಬಿಡಲಾಗುವುದು ಎಂಬ ಬಗ್ಗೆ ಭರವಸೆಯನ್ನೇನೂ ನೀಡಿಲ್ಲ.

ಒಟ್ಟಿನಲ್ಲಿ ಕಾಂಗ್ರೆಸ್(ಐ) ಆಂಧ್ರಪ್ರದೇಶ, ಕರ್ನಾಟಕಗಳಲ್ಲಾದ ಭಾರೀ ಪರಾಭವದಿಂದಲೂ ಏನೂ ಪಾಠ ಕಲಿತಂತಿಲ್ಲ ಎಂದು ರಾಷ್ಟ್ರಪತಿಗಳ ಭಾಷಣದ ಬಗ್ಗೆ ಪ್ರತಿಕ್ರಿಯಿಸುತ್ತಾ ಸುರ್ಜಿತ್ ಖೇದ ವ್ಯಕ್ತಪಡಿಸಿದ್ದಾರೆ.

ಮೀಸಲಾತಿ: ಕಾಂಗ್ರೆ-ಬಿಜೆಪಿಗಳ ಸಂದರ್ಭಸಾಧಕ ರಾಜಕೀಯ

ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಕ್ಷೇತ್ರಗಳ ಮೀಸಲಾತಿ ಕುರಿತು

ರಾಜ್ಯದಲ್ಲಿ ಕಾಂಗ್ರೆಸ್(ಐ) ಮತ್ತು ಬಿಜೆಪಿ ವಿಪರೀತ ರಾದ್ಧಾಂತ ಮಾಡುತ್ತಿವೆ. ಆಶ್ಚರ್ಯವೇನೆಂದರೆ, ಈ ಪಕ್ಷಗಳು ಅಧಿಕಾರದಲ್ಲಿರುವಾಗ ಒಂದು ರೀತಿ ಮತ್ತು ಅಧಿಕಾರದಲ್ಲಿರುವಾಗ ಇನ್ನೊಂದು ರೀತಿ ವರ್ತಿಸುತ್ತವೆ. ಒಂದು ರಾಜ್ಯದಲ್ಲಿ ಒಂದು ರೀತಿ, ಇನ್ನೊಂದು ರಾಜ್ಯದಲ್ಲಿ ಇನ್ನೊಂದು ರೀತಿ ಧೋರಣೆಗಳನ್ನು ಸಂದರ್ಭಸಾಧಕ ರೀತಿಯಲ್ಲಿ ನಿರೂಪಿಸಿಕೊಳ್ಳುತ್ತವೆ.

ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮೀಸಲಾತಿಗೆ ಸಂಬಂಧ ಪಟ್ಟ ನಿಯಮ ಜನಸಂಖ್ಯೆಯ ಶೇಕಡಾವಾರು. ಈ ತತ್ವವನ್ನು ಕರ್ನಾಟಕ ರಾಜ್ಯದ ಸರಕಾರವು ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಕ್ಷೇತ್ರಗಳ ಚುನಾವಣೆಗೆ ಸಂಬಂಧಪಟ್ಟು ಒಪ್ಪಿಕೊಂಡು ಸುಗ್ರೀವಾಜ್ಞೆಯನ್ನು ಹೊರಡಿಸಿದೆ. ಅದೇ ಸಮಯದಲ್ಲಿ ಸುಪ್ರೀಂ ಕೋರ್ಟು ಎಲ್ಲಾ ಮೀಸಲಾತಿ ಶೇಕಡಾ 50ಕ್ಕಿಂತ ಹೆಚ್ಚಾಗಬಾರದೆಂದಿದೆ ಎಂಬುದನ್ನು ಬಿಜೆಪಿ ಮತ್ತು ಕಾಂಗ್ರೆಸ್ (ಐ) ಪಕ್ಷಗಳು,

-ಪಿ. ರಾಮಚಂದ್ರರಾವ್

ರಾಷ್ಟ್ರೀಯ ಪಕ್ಷಗಳಾಗಿದ್ದೂ ಸಂಪೂರ್ಣ ಉಲ್ಲಂಘಿಸಿಯೇ ಪ್ರೋತ್ಸಾಹ ಕೊಡುತ್ತಿವೆ.

ಮನಬಂದಂತೆ ಮೀಸಲಾತಿ ಶೇಕಡಾವನ್ನು ಹೆಚ್ಚು ಕಡಿಮೆ ಮಾಡಿದ ಕಾಂಗ್ರೆಸ್(ಐ) ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರ ಸರಕಾರವನ್ನು ಸುಪ್ರೀಂ ಕೋರ್ಟು ಹೇಗೆ ಪೇಚಿಗೆ ಸಿಲುಕಿಸಿತ್ತು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ ತಾನೆ.

ಈ ಎರಡು ಪಕ್ಷಗಳ ಇಚ್ಛೆ ಜನತಾದಳದ ಸರಕಾರವನ್ನು ಅದೇ ರೀತಿ ಪೇಚಿಗೆ ಸಿಲುಕಿಸಿ, ಸುಪ್ರೀಂ ಕೋರ್ಟಿನಿಂದ ಛೀ ಹೇಳಿಸಿ, ಚುನಾವಣೆಗಳನ್ನು ಹೇಗಾದರೂ ಮಾಡಿ ಮುಂದೆ ಹಾಕುವಂತೆ ಮಾಡುವುದಾಗಿದೆ. ಇದೇ ಅವರ ಹುನ್ನಾರ ಎಂದು ಕಾಣುತ್ತದೆ.

ಸುಪ್ರೀಂಕೋರ್ಟಿನ ತೀರ್ಪು ಶೇಕಡಾ 50ಕ್ಕೆ ಮೀಸಲಾತಿ ಸೀಮಿತವಾಗಿರಬೇಕೆಂದಿದ್ದರೂ, ಜನತಾದಳದ ಸರಕಾರವು ಅದನ್ನು ಬಿಟ್ಟು ಶೇಕಡಾ 56 ಕ್ಕೆ ಸೀಮಿತ ಮಾಡಿ (6 ಶೇಕಡಾ ಹೆಚ್ಚಿಸಿದ್ದು) ನಿಜವಾಗಿಯೂ ಪ್ರಾಯೋಗಿಕ ಮುತ್ಸದ್ದಿತನವನ್ನು ವ್ಯಕ್ತಪಡಿಸಿದಂತಾಗಿದೆ.

ಆದಕಾರಣ, ಕಾಂಗ್ರೆಸ್(ಐ) ಪಕ್ಷದವರು ಮತ್ತು ಬಿಜೆಪಿಯವರ ಈ ಕಣ್ಣುಮುಚ್ಚಾಲೆ ಆಟ ಹಾಗೂ ಮೀಸಲಾತಿಯ ಭಾರಿ ಬೆಂಬಲಿಗರೆಂದು ಕುಣಿದಾಡುವ ನಾಟಕವನ್ನು ಜನತೆ ಬಹಿರಂಗಗೊಳಿಸಬೇಕು.

ನಾವು ಹಿಂದೆ ಸೂಚಿಸಿದಂತೆ, ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಚುನಾವಣೆಗಳು ಈಗ ಸೂಚಿಸಿದ ತಾರೀಕುಗಳಲ್ಲಿ ನಡೆಯುವುದಕ್ಕೆ ಎಲ್ಲಾ ಪಕ್ಷಗಳು ಬೆಂಬಲಿಸಿ ಸಹಕಾರ ನೀಡಬೇಕೆಂದು ನಾವು ರಾಜ್ಯದ ಜನತೆಯ ಪರವಾಗಿ, ರಾಜ್ಯದ ವಿಕೇಂದ್ರೀಕರಣ ಪ್ರಜಾಪ್ರಭುತ್ವದ ಪರವಾಗಿ ವಿನಂತಿಸಿಕೊಳ್ಳುತ್ತೇವೆ.

ಮೂಲಭೂತವಾಗಿ ಬಿಜೆಪಿ ಮಾತ್ರ ಕಾಂಗ್ರೆಸ್ ವಿಕೇಂದ್ರೀಕರಣ ತತ್ವಕ್ಕೂ ಮೀಸಲಾತಿಗೂ ವಿರೋಧವಾಗಿವೆ ಎಂಬುದನ್ನು ಇಲ್ಲಿ ನೆನಪಿಸಬಹುದು.

ಗುಜರಾತ್ ದಲ್ಲಿ ಹಿಂದೆ ಪರಿಶಿಷ್ಟ ಜಾತಿಗಳ ಮೀಸಲಾತಿಯ ವಿರುದ್ಧ ತೀವ್ರ ಚಳುವಳಿ ಮಾಡಿ ಹಲವಾರು ಸಾವುನೋವುಗಳಿಗೆ ಕಾರಣೀಭೂತವಾಗಿತ್ತುದ್ದು ಇದೇ ಬಿಜೆಪಿ ಎಂಬುದನ್ನು ಯಾರು ಮರೆಯಲು ಸಾಧ್ಯ?

ವಿ.ಪಿ. ಸಿಂಗರು ದಿಲ್ಲಿಯಲ್ಲಿ ಮಂಡಲ್ ವರದಿ ಜ್ಯಾರಿ ಮಾಡಿದಾಗ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಅದನ್ನು ಯಾವ ರೀತಿಯಲ್ಲಿ ಹಿಂಸಾತ್ಮಕವಾಗಿ ವಿರೋಧಿಸಿದ್ದರು ಎಂಬುದನ್ನು ಇಲ್ಲಿ ನೆನಪು ಮಾಡಿದರೆ, ಈ ಎರಡೂ ಪಕ್ಷಗಳ ಸಂದರ್ಭಸಾಧಕ ರಾಜಕೀಯ ಸ್ಪಷ್ಟವಾಗುವುದು.

ವಾರದ ವ್ಯಂಗ್ಯಚಿತ್ರ

ಟೈಮ್ಸ್ ಆಫ್ ಇಂಡಿಯಾದಲ್ಲಿ ಆರ್.ಲಕ್ಷ್ಮಣ್



ಗುಲ್ಬರ್ಗಾದತ್ತ ಸಾಗೋಣ ಬನ್ನಿ....... 3
ಮೆಕ್ಸಿಕೋಗೆ ಕಗ್ಗತ್ತಲು ಕವಿದ ಕತೆ 4
ಮೂತ್ರಪಿಂಡಗಳ ಕಳ್ಳತನದ ಉದಾರೀಕರಣ 5
ರಥಯಾತ್ರೆಯೋ, ಕೋಮು ದಳ್ಳುರಿಯ ಜಾತ್ರೆಯೋ 6
ಸೋವಿಯತ್ ಒಕ್ಕೂಟ ಪುನಃ ಕಟ್ಟುವ ಪಣ 7
ಶೇಷನ್‌ರವರ ಮಹಾ ಅಜ್ಞಾನ 8
ಅರ್ಜುನ್ ಸಿಂಗ್ ವಜಾ ಬಗ್ಗೆ ಸುರ್ಜಿತ್


ವಾರದ ನುಡಿ

ನಮಗೆ ಜ್ವಾಲೆಯನ್ನು ನಂದಿಸುವವರು ಬೇಕೇ ಹೊರತು ಕೋಮು ದಳ್ಳುರಿ ಹೆಚ್ಚಿಸುವಂತೆ ಮಾಡುವವರು ಬೇಕಿಲ್ಲ. ಡಾ. ಜೋಷಿ ಹಾಗೂ ಅವರಂತಹ ವ್ಯಕ್ತಿಗಳು ಹುಬ್ಬಳ್ಳಿಯಿಂದ ದೂರವಿರಬೇಕು ಎಂಬುದೇ ನಗರದ ಜನತೆಯ ಆಶಯ.

-ಪಾಟೀಲ್ ಪುಟ್ಟಪ್ಪ
ಹಿರಿಯ ಪತ್ರಕರ್ತರು

ವರ್ತಮಾನ
ಇತಿಹಾಸ

ಮತ್ತೊಂದು ಕೆಂಪು ನಕ್ಷತ್ರ ಅಸ್ತಮಿಸಿತು!



ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಸುಪ್ರಸಿದ್ಧ ಅಧ್ಯಾಯ -ಚಿತ್ತಗಾಂಗ್ ಹೋರಾಟ. ಬ್ರಿಟಿಷ್ ಸಾಮ್ರಾಜ್ಯಶಾಹಿ ಶಸ್ತ್ರಾಗಾರವನ್ನು ಭಾರತದ ಸ್ವಾತಂತ್ರ್ಯ ಹೋರಾಟಗಾರರು 'ಮಾಸ್ಟರ್ ದಾ' ಎಂದು ಅಕ್ಕರೆಯಿಂದ ಕರೆಯುತ್ತಿದ್ದ ಸೂರ್ಯ ಸೇನ್‌ರವರ ನೇತೃತ್ವದಲ್ಲಿ ಲೂಟಿ ಮಾಡಿದರು. ಆ ಸಾಹಸ ಕಾರ್ಯದಲ್ಲಿ ಭಾಗವಹಿಸಿದ್ದ ಕಾಂ. ಕಲ್ಪನ ಜೋಷಿರವರು ತಮ್ಮ 81ನೇ ವಯಸ್ಸಿನಲ್ಲಿ ಫೆಬ್ರವರಿ 8 ರಂದು ನಿಧನರಾದರು. ಕ್ರಾಂತಿಕಾರಿಗಳಿಗೂ, ವಿಮೋಚನೆ ಬಯಸುವ ಮಾನವ ಕುಲಕ್ಕೂ ಆದರ್ಶ ತುಂಬಿದ ಹೆಸರು ಕಲ್ಪನ. ಇಂದಿಗೂ ಕೂಡ ಕಮ್ಯುನಿಸ್ಟ್ ಕುಟುಂಬಗಳಲ್ಲಿ ಜನಿಸುವ ಹೆಣ್ಮು ಮಕ್ಕಳಿಗೆ ಕಲ್ಪನ ಎಂದು ಹೆಸರಿಡಲಾಗುತ್ತದೆ. ಎಂದೆಂದೂ ಪ್ರಜ್ವಲಿಸುವ ಆ ವೀರ ಮಹಿಳೆ ಇನ್ನಿಲ್ಲ.

ಚರಿತ್ರೆಯನ್ನು ಸೃಷ್ಟಿಸಿದ ಚಿತ್ತಗಾಂಗ್ ವೀರಾಂಗನೆ ಕಲ್ಪನ ಅವರ ಧೀರ ಚರಿತ್ರೆ ಎಂದೆಂದಿಗೂ ನಿರಂತರವಾಗಿ ನಮ್ಮ ಹೃದಯದಲ್ಲಿ ನಿಂತು ಕ್ರಾಂತಿ ಜ್ವಾಲೆಯನ್ನು ಬಂದು ಬೀಸುತ್ತಿರುತ್ತದೆ.

ಈಗ ಬಾಂಗ್ಲಾದೇಶದಲ್ಲಿರುವ ಬಂದರು ಪಟ್ಟಣ ಚಿತ್ತಗಾಂಗ್‌ನದಕ್ಷಿಣದಲ್ಲಿ ಹರಿಯುವ ಕರ್ಣಫೂಲಿ ನದಿಯ ತೀರದಲ್ಲಿ ಇರುವ ಶ್ರೀಪೂರ್ ಎನ್ನುವ ಗ್ರಾಮದಲ್ಲಿ ಒಂದು ಜಮೀನುದಾರ ಕುಟುಂಬದಲ್ಲಿ ಜನಿಸಿದವರು ಕಲ್ಪನ. ತಂದೆ ರಮೇಶ್ ಚಂದ್ರ ಸೇನ್ ತಾಯಿ ಶೋಬಾನ ದೇವಿ. ಈ ದಂಪತಿಗಳಿಗೆ ೧೯೧೪ರ ಆಗಸ್ಟ್ 17 ರಂದು ಕಲ್ಪನ ಜನಿಸಿದರು. ತನ್ನ ನಾಲ್ಕನೆ ವಯಸ್ಸಿನಲ್ಲಿ ಪುಸ್ತಕಗಳನ್ನು ಓದಲು ಪ್ರಾರಂಭಿಸಿದ ಕಲ್ಪನ ತನ್ನ 11ನೇ ವಯಸ್ಸಿನಲ್ಲಿ ಕ್ರಾಂತಿ ವೀರರ ಚರಿತ್ರೆಗಳನ್ನು ಹುಡುಕಾಡಿ ಓದಿದರು. ಅವರ ಇಬ್ಬರು ಚಿಕ್ಕಪ್ಪಂದಿರರು 1920ನೇ ವರ್ಷದಲ್ಲಿ ನಡೆದ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿ ಜೈಲಿಗೆ ಹೋಗಿದ್ದು ಅವರಿಗೆ ದೊಡ್ಡ ಸ್ಫೂರ್ತಿಯನ್ನು ಕೊಟ್ಟಿತು. ಅವರು ಸಣ್ಣ ಹುಡುಗಿಯಾಗಿದ್ದಾಗ ದೊಡ್ಡ ವಿಜ್ಞಾನಿಯಾಗಬೇಕೆಂದು ಆಶೆ ಪಟ್ಟಿದ್ದರು. ಆದರೆ ಸ್ವಾತಂತ್ರ್ಯ ಯಜ್ಞ ಕಲ್ಪನರವರನ್ನು ಆಕರ್ಷಿಸಿತು.

ತನ್ನ 7ನೇ ವಯಸ್ಸಿನಲ್ಲಿ ಮಹಾತ್ಮ ಗಾಂಧಿಯವರನ್ನು ಭೇಟಿಯಾಗಿ ಭಾವೋದ್ರೇಕಗೊಂಡು ತನ್ನ ಹತ್ತಿರವಿದ್ದ ಚಿನ್ನದ ಒಡವೆಗಳನ್ನು ಗಾಂಧೀಜಿಯವರಿಗೆ ಬಿಚ್ಚಿಕೊಟ್ಟರು ಕಲ್ಪನ. ಆದರೆ ಏನೂ ಅರಿಯದ ಬಾಲಕಿಯಿಂದ ಒಡವೆಗಳನ್ನು ತೆಗೆದುಕೊಳ್ಳಲು ಗಾಂಧೀಜಿ ನಿರಾಕರಿಸಿದರು.

ಶಾಲೆಯಲ್ಲಿ ಓದುವಾಗ ತನ್ನ ಚಿಕ್ಕಪ್ಪಂದಿರು ಬರೆದು ಕೊಡುವ ವಿಷಯಗಳನ್ನು ಓದಿ ಮನನ ಮಾಡಿಕೊಂಡು ವೀರಧೀರವಾಗಿ ಮಾತನಾಡುತ್ತಿದ್ದಳು. ಅದೇ ಸಂದರ್ಭದಲ್ಲಿ ಚಿತ್ತಗಾಂಗ್‌ನಲ್ಲಿ ಚಿಗುರುತ್ತಿದ್ದ ಯುವ ಸ್ವಾತಂತ್ರ್ಯ ಹೋರಾಟಗಾರರಾದ ಸೂರ್ಯಸೇನ್, ಆನಂತ್ ಸಿಂಗ್ ಹಾಗೂ ಗಣೇಶ್ ಘೋಷ್ ಇವರ ಜೊತೆ ಕಲ್ಪನರವರಿಗೆ ಪರಿಚಯವಿತ್ತು.

ಗುಲಾಮಗಿರಿಯಲ್ಲಿ ಮಲಗಿದ್ದ ಯುವ ಸಮುದಾಯವನ್ನು ಸ್ವಾತಂತ್ರ್ಯ ಎನ್ನುವ ಸಂಗ್ರಾಮದಲ್ಲಿ ಎದ್ದೇಳಿಸುವ ಕೆಲಸದಲ್ಲಿ ಕಲ್ಪನರವರು ಸೇರಿದರು. ಬಾಲಕಿಯಾದರೂ ಹಲವಾರು ವ್ಯಾಯಾಮಗಳನ್ನು ಮಾಡಿ ಒಬ್ಬ ಕ್ರಾಂತಿಕಾರಿಗಿರಬೇಕಾದ ದೇಹದಾರ್ಢ್ಯವನ್ನು ಪಡೆದುಕೊಂಡರು.

ಹೇರಳವಾದ ಪುಸ್ತಕಗಳನ್ನು ಓದಿದರು ಭೂಗತ ಕ್ರಾಂತಿಕಾರಿಗಳಿಂದ ತುಫಾಕಿ ಬಳಸುವ ತರಬೇತು ಪಡೆದರು. ಸೂರ್ಯಸೇನ್ ನೇತೃತ್ವದಲ್ಲಿ ನಡೆದ ಚಿತ್ತಗಾಂಗ್ ಧಾಳಿಯೂ ಸೇರಿದಂತೆ ಹಲವಾರು ಹೋರಾಟಗಳಲ್ಲಿ ಭಾಗಿಯಾದರು. ಚಿತ್ತಗಾಂಗ್ ವೀರರನ್ನು ಬಂಧಿಸಿ ವಿಚಾರಣೆ ನಡೆಸಿತು ಬ್ರಿಟಿಷ್ ಸಾಮ್ರಾಜ್ಯಶಾಹಿ. ಸೂರ್ಯಸೇನ್, ಆನಂತ್ ಸಿಂಗ್ ಮತ್ತು ಕಲ್ಪನ ಈ ಮೂವರಿಗೂ ನೇಣುಗಂಬ ಕಾಯುತ್ತಿತ್ತು. ಆದರೆ ವಿಚಾರಣೆಯ ಅಂತಿಮ ಘಟ್ಟದಲ್ಲಿ ಸೂರ್ಯಸೇನ್ ಮತ್ತು ಆನಂತ್ ಸಿಂಗ್ ರವರಿಗೆ ಮರಣದಂಡನೆ ವಿಧಿಸಲಾಯ್ತು. ಕಲ್ಪನ 17ರ ವಯಸ್ಸಿನ ಬಾಲಕಿಯೆಂದು ಅವರಿಗೆ ಮರಣ ದಂಡನೆ ವಿಧಿಸದೆ ಜೀವಾವಧಿ ಶಿಕ್ಷೆ ವಿಧಿಸಿದರು.


ಈ ಹೋರಾಟಗಾರರನ್ನು ಬಿಡುಗಡೆ ಮಾಡಬೇಕೆಂದು ತೀವ್ರವಾದ ಚಳುವಳಿಯ ಒತ್ತಾಯಕ್ಕೆ ಮಣಿದ ಬ್ರಿಟಿಷ್ ಸರಕಾರ ಮಹಿಳೆಯರನ್ನು ಮಾತ್ರ ಬಿಡುಗಡೆ ಮಾಡಲು ತೀರ್ಮಾನಿಸಿತು. 1939ರ ಮೇ 1 ರಂದು ಕಲ್ಪನ ಬಿಡುಗಡೆಯಾದರು. ನಂತರ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದರು. 1943 ರ ಆಗಸ್ಟ್‌ನಲ್ಲಿ ಆಗ ಭಾರತ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಕಾಂ. ಪಿ.ಸಿ. ಜೋಶಿಯವರನ್ನು ಮದುವೆಯಾದರು. ಸ್ವಾತಂತ್ರ್ಯಕ್ಕೆ ಮೊದಲು ನಂತರ ಅನೇಕ ಹೋರಾಟಗಳಲ್ಲಿ ಭಾಗವಹಿಸಿದ್ದ ಈ ವೀರಾಂಗನೆ ತನ್ನ ಅಂತಿಮಕಾಲದವರೆಗೆ ಕಮ್ಯುನಿಸ್ಟ್ ಧ್ಯೇಯಕ್ಕಾಗಿ ಅಚಲವಾದ ನಂಬಿಕೆಯಿಂದ ದುಡಿದರು.

ಜೀವಾವಧಿ ಶಿಕ್ಷೆ ಅನುಭವಿಸಿ ಬಿಡುಗಡೆ ಆದ ನಂತರ ಮಹಾಕವಿ ರವೀಂದ್ರನಾಥ ಠಾಗೂರ್ ಕಲ್ಪನರವರಿಗೆ ಒಂದು ಪತ್ರ ಬರೆದರು -"ಸುಮಾರು ದಿನಗಳ ನಂತರ ನೀನು ಬಿಡುಗಡೆಯಾಗಿದ್ದೀಯೆ. ಪ್ರತಿದಿನವು ಶಾಂತಿ ಮತ್ತು ಕ್ರಿಯಾ ಶೀಲತೆಯನ್ನು ಪಡೆದು ನೀನು ಬೆಳೆಯಬೇಕು. ನಮ್ಮ ದೇಶದಲ್ಲಿ ಇನ್ನೂ ಮಹತ್ತರ ಕಾರ್ಯಗಳನ್ನು ಮಾಡಬೇಕಾಗಿದೆ. ಅದಕ್ಕಾಗಿ ಯಾವುದಕ್ಕೂ ಹಿಂಜರಿಯದೆ ದೃಢ ಚಿಂತನೆಯುಳ್ಳ ಮನಸ್ಸನ್ನು ನೀನು ಪಡೆಯಬೇಕು. ನೀನು ಪಡೆದ ಯಾತನಾಮಯ ಅನುಭವ ನಿನ್ನ ಬಾಳಿಗೆ ಪೂರ್ಣವಾದ ತೇಜಸ್ಸನ್ನು ಕೊಡಲಿ ಇದು ನನ್ನ ಆಶೀರ್ವಾದ"

ಠಾಗೂರ್‌ರವರ ಈ ಪತ್ರವನ್ನು ಓದುವಾಗ ನಮಗೆ ಇಂದಿಗೂ ಕಣ್ಣಿನಲ್ಲಿ ನೀರು ತುಂಬುತ್ತದೆ. ಆ ವೀರಾಂಗನೆ ಕಲ್ಪನರವರ ಧೀರ ಮತ್ತು ತ್ಯಾಗ ನಮ್ಮ ಎದೆಗಳಲ್ಲಿ ನೆಲಸಿರಲಿ. ಆ ವೀರ ನೆನಪುಗಳು ಯುವಕರಿಗೆ ಎಂದೆಂದಿಗೂ ದಾರಿ ತೋರಿಸಿ ಬೆಳಕನ್ನು ಹರಿಸಲಿ.

ಕೆಂಪು ವಂದನೆ, ಕೆಂಪು ವಂದನೆ ಲಾಲ್ ಸಲಾಮ್!

ಸಂಗ್ರಹ ಅನುವಾದ: ಮೀನಾಕ್ಷಿ-ಜಯರಾಂ



ಅಧ್ಯಾಯ 20

1980ರ ದಶಕ ಕೊನೆಗೊಳ್ಳುತ್ತಿದ್ದಂತೆ......

ಸಾಮ್ರಾಜ್ಯಶಾಹಿ ಮತ್ತು ಬಹುರಾಷ್ಟ್ರೀಯ ನಿಗಮ(ಎಂಎನ್‌ಸಿ)ಗಳ ಹಿಡಿತಕ್ಕೆ ಸಿಕ್ಕಿ ಇನ್ನಷ್ಟು ನಲುಗಲು ಕಾರಣವಾಗುವ ಹೊಸ ಆರ್ಥಿಕ ಉದಾರೀಕರಣ ನೀತಿ ವಿ.ಪಿ.ಸಿಂಗ್ ಸರಕಾರದ ಅವಧಿಯಲ್ಲೂ ಮುಂದುವರಿಯಿತು. ಇದು ರಾಜೀವ್ ಗಾಂಧಿ ಆಳವಡಿಸಿದ್ದ ಆರ್ಥಿಕ ನೀತಿಯ ತಾರ್ಕಿಕ ಮುಂದುವರಿಕೆಯಾಗಿತ್ತು.

ಇದೇ ನೀತಿಯನ್ನು ಶಿರಸಾವಹಿಸಿ ಮುಂದುವರಿಸಿಕೊಂಡು ಹೋದ ಪಿ.ವಿ. ನರಸಿಂಹ ರಾವ್ ಸರಕಾರ ಅಂತರ್ರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್)ಒತ್ತಡ ಹಾಗೂ ಷರತ್ತುಗಳಿಗೆ ನಾಚಿಕೆಯಿಲ್ಲದೆ ಶರಣಾಯಿತು. ಆ ಆತ್ಮಘಾತುಕ ಕೃತ್ಯವನ್ನು ಸಿಪಿಐ(ಎಂ) ಸತತವಾಗಿ ವಿರೋಧಿಸಿತು. ನಮ್ಮ ಪಕ್ಷ ಆಸಕ್ತಿ ವಹಿಸಿ ನಡೆಸಿದ ಎಡ ಪಕ್ಷಗಳ ರಾಷ್ಟ್ರೀಯ ಸಮಾವೇಶದಲ್ಲಿ ಅನೇಕ ಆರ್ಥಿಕ ತಜ್ಞರು ಭಾಗವಹಿಸಿದರು. ಇದಕ್ಕೂ ಮುಂಚೆ ಚಂದ್ರಶೇಖರ್ ಸರಕಾರ ಅಧಿಕಾರದಲ್ಲಿದ್ದಾಗ ಎಡ ಪಕ್ಷಗಳು ಆರ್ಥಿಕ ತಜ್ಞರ ವಿಚಾರ ಸಂಕಿರಣವೊಂದನ್ನು ವ್ಯವಸ್ಥೆಗೊಳಿಸಿತ್ತು. ಆಮದು -ರಫ್ತು ಅಸಮತೋಲನದಿಂದ (Balance of payment) ಉದ್ಭವಿಸುವ ಸಂಕಷ್ಟದಿಂದ ಭಾರತದ ಆರ್ಥಿಕತೆಯನ್ನು ಪಾರು ಮಾಡಲು ಪರ್ಯಾಯವೊಂದು ಇದೆ ಎಂದು ಈ ಗೋಷ್ಠಿ ಸಲಹೆ ಮಾಡಿತು. ಐಎಂಎಫ್ ಷರತ್ತುಗಳಿಗೆ ಶರಣಾಗುವುದನ್ನು ಪ್ರತಿಭಟಿಸಲು 1991 ಸೆಪ್ಟಂಬರ್ 27ರಂದು ನವದೆಹಲಿಯ ಬೋಟ್ ಕ್ಲಬ್ ನಲ್ಲಿ ನಡೆದ ಬೃಹತ್ ರ‍್ಯಾಲಿ ಮತ್ತು ಅದೇ ವರ್ಷ ನವಂಬರ್ 29 ರಂದು ನಡೆದ ರಾಷ್ಟ್ರವ್ಯಾಪಿ ಯಶಸ್ವಿ ಕೈಗಾರಿಕಾ ಮುಷ್ಕರಕ್ಕೆ ಸಿಪಿಐ(ಎಂ) ಬೆಂಬಲ ನೀಡಿತ್ತು.

ರಾಜೀವ್-ಲೋಂಗೋವಾಲ್ ಒಪ್ಪಂದದ ಆಧಾರದಲ್ಲಿ ಪಂಜಾಬ್ ಸಮಸ್ಯೆಗೆ ರಾಜಕೀಯ ಪರಿಹಾರವನ್ನು ಕಂಡು ಹಿಡಿಯಲು ಪಕ್ಷ ಗಂಭೀರ ಪ್ರಯತ್ನ ಮಾಡಿತು. 1991 ಮಾರ್ಚ್ ನಲ್ಲಿ ಎಡ ಪಕ್ಷಗಳ ಬೃಹತ್ ಧರಣಿ ನಡೆಯಿತು. ಮತ್ತು ಅದೇ ವರ್ಷ ಮೇ ತಿಂಗಳಲ್ಲಿ ಸಾಮೂಹಿಕವಾಗಿ ಬಂಧನಕ್ಕೊಳಗಾಗುವ ಕಾರ್ಯಕ್ರಮಗಳನ್ನು ನಮ್ಮ ಪಕ್ಷ ಸಿಪಿಐ ಜೊತೆ ಸೇರಿ ನಡೆಸಿತು. ಅದೇ ರೀತಿ, ಕಾನೂನು ಮತ್ತು ಸುವ್ಯವಸ್ಥೆಯ ಧೋರಣೆ ಕಾಶ್ಮೀರ ಸಮಸ್ಯೆಯನ್ನು ಪರಿಹರಿಸುವುದಿಲ್ಲ ಎಂಬ ತನ್ನ ನಿಲುವನ್ನು ಸಿಪಿಐ(ಎಂ) ಪದೇ ಪದೇ ಪುನರುಚ್ಚರಿಸಿತು. ರಾಜಕೀಯ ಇತ್ಯರ್ಥಕ್ಕೆ ಆಧಾರವಾಗುವಂಥ ಕ್ರಮಗಳನ್ನು ಪಕ್ಷ ಸಲಹೆ ಮಾಡಿತು. ಆದರೆ ರಾಷ್ಟ್ರೀಯ ರಂಗ ಮತ್ತು ಕಾಂಗ್ರೆಸ್(ಐ) ಸರಕಾರಗಳು ಸಮಸ್ಯೆಯನ್ನು ಖಾಯಾಂ ಆಗಿ ಪರಿಹರಿಸುವ ಗೋಜಿಗೆ ಹೋಗಲಿಲ್ಲ ಅವುಗಳು ತಾತ್ಕಲಿಕ ನಿಲುವುಗಳನ್ನಷ್ಟೇ ತಳೆದವು. ಅಸ್ಸಾಂ ಸಂಯುಕ್ತರಂಗ ವಿಮೋಚನಾ ರಂಗ (ಉಲ್ಫಾ)ದ ಪ್ರತ್ಯೇಕತಾವಾದಿ ಚಟುವಟಿಕೆಗಳ ವಿರುದ್ಧ ದೃಢ ಕ್ರಮಗಳನ್ನು ಕೈ ಗೊಳ್ಳುವಂತೆ ಎ.ಜಿ.ಪಿ. ಮತ್ತು ಕೇಂದ್ರ ಸರಕಾರವನ್ನು ಸಿಪಿಐ(ಎಂ) 1989 ರಲ್ಲಿ ಒತ್ತಾಯಿಸಿತು. ಅಸ್ಥಿರಗೊಳಿಸಲು ಉಲ್ಫಾ ನಡೆಸುವ ಪ್ರಯತ್ನಗಳ ವಿರುದ್ಧ ಎಲ್ಲಾ ದೇಶಪ್ರೇಮಿಶಕ್ತಿಗಳು ಒಗ್ಗೂಡುವಂತೆಯೂ ಕರೆ ನೀಡಿತು. ಪ್ರತ್ಯೇಕ ಬೋಡೊ ರಾಜ್ಯ ಬೇಡಿಕೆಗೆ ಸಂಬಂಧಿಸಿದಂತೆ ನಮ್ಮ ಪಕ್ಷದ ಪಾಲಿಟ್ ಬ್ಯೂರೋ ರಾಜ್ಯ ಸಮಿತಿಯೊಂದಿಗೆ ಸಮಾಲೋಚಿಸಿ ಬೋಡೊಗಳಿಗಾಗಿ ಪ್ರತ್ಯೇಕ ಸ್ವಾಯುತ್ತ ಮಂಡಳಿಯನ್ನು ಸ್ಥಾಪಿಸಬೇಕೆಂಬ ಹೇಳಿಕೆಯನ್ನು ಮುಂದಿಟ್ಟಿತು.

ತ್ರಿಪುರಾದಲ್ಲಿಯೂ ಕಾಂಗ್ರೆಸ್ (ಐ) ಉದ್ದಕ್ಕೂ ದೌರ್ಜನ್ಯವನ್ನು ಅವಲಂಬಿಸಿದ್ದು ಜನರಿಂದ ಪ್ರತ್ಯೇಕಗೊಂಡಿತು. ಅದು ಎಲ್ಲಾ ಚುನಾವಣೆಗಳಲ್ಲಿ ಅಕ್ರಮಗಳನ್ನು ನಡೆಸಿತು. ಅದರ ಹಿಂಸಾಚಾರ ಎಷ್ಟಿತ್ತೆಂದರೆ ಕಳೆದ ಲೋಕಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಸ್ಪರ್ಧಾ ಕಣದಿಂದ ಹಿಂದೆ ಸರಿಯಬೇಕಾಯಿತು.

ಪಶ್ಚಿಮ ಬಂಗಾಳದ ಸಿಪಿಐ(ಎಂ) ನೇತೃತ್ವದ ಎಡರಂಗ ಸರಕಾರ ಅಧಿಕಾರ ವಿಕೇಂದ್ರೀಕರಣ ಮತ್ತು ಭೂ ಸುದಾರಣೆಗಳಲ್ಲಿ ಪ್ರತ್ಯೇಕವಾಗಿ ಎದ್ದು ಕಾಣುವಂಥ ಸಾಧನೆಗಳನ್ನು ಮಾಡಿತು. ಮೂರು ಹಂತದ ಪಂಚಾಯತಿ ವ್ಯವಸ್ಥೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಸ್ಥಳೀಯರು ಪಾಲ್ಗೊಳ್ಳುವಲ್ಲಿ ಪರಿಣಾಮಕಾರಿಯಾಗಿ ನೆರವಾಯಿತು. ದೇಶದ ಇತರ ಯಾವುದೇ ಭಾಗದಲ್ಲಿ ಕಂಡು ಕೇಳರಿಯದ ರೀತಿಯಲ್ಲಿ ಜನರು ಪ್ರಜಾಸತ್ತಾತ್ಮಕವಾಗಿ ಪಾಲ್ಗೊಳ್ಳಲು ಸಾಧ್ಯವಾಯಿತು. ಯೋಜನೆಯ ಶೇಕಡ 50 ರಷ್ಟು ಹಣವನ್ನು ಪಂಚಾಯತಿಗಳಿಗೆ ಕೊಡಲಾಯಿತು.

1990 ಮಾರ್ಚ್ ವೇಳಗೆ ಎಡರಂಗ ಸರಕಾರ 913 ಮಿಲಿಯ ಎಕರೆ ಜಮೀನನ್ನು 1.994 ಮಿಲಿಯ ಗ್ರಾಮೀಣ ಬಡ ಜನರಿಗೆ ವಿತರಿಸಿತ್ತು. ಈ. ಪೈಕಿ ಶೇ.37 ಜನರು ಪರಿಶಿಷ್ಟ ಜಾತಿ ಮತ್ತು ಶೇ.19 ಜನರು ಪರಿಶಿಷ್ಟ ಬುಡಕಟ್ಟಿಗೆ ಸೇರಿದರು.ಪಶ್ಚಿಮ ಬಂಗಾಳದಲ್ಲಿ ಅಳವಡಿಸಲಾದ ಅಧಿಕಾರ ವಿಕೇಂದ್ರಿಕರಣ ಪದ್ಧತಿಗೆ ಸರಿಸಮವಾದುದು ಕೆಲವೇ ಕೆಲವು ಮಾತ್ರ ಇದ್ದೀತು. ಎಂದು ದೇಶ-ವಿದೇಶಗಳ ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ಈ ಪದ್ಧತಿ ಸಾಮಾಜಿಕ -ಆರ್ಥಿಕ ನ್ಯಾಯವನ್ನು ಖಾತರಿಪಡಿಸುವುದು ಹಾಗೂ ತಳಮಟ್ಟದಲ್ಲಿ ಜನರ ಸೃಜನ ಶೀಲ ಭಾಗವಹಿಸುವಿಕೆಗೆ ಪ್ರೇರಣೆ ಕೊಡುವುದು ಮಾತ್ರವೇ ಅಲ್ಲದೆ ಅನೇಕ ಅಭಿವೃದ್ಧಿಶೀಲ ದೇಶಗಳಿಗೆ ಪ್ರಸ್ತುತವಾಗುವ ಕೃಷಿ ಅಭಿವೃದ್ಧಿಯ ಪರ್ಯಾಯ ಹಾಗೂ ಉತ್ಪಾದಕ ಮಾದರಿಯ ಸಾಧ್ಯತೆಯನ್ನು ಒಳಗೊಂಡಿದೆ. 1.434 ಮಿಲಿಯ ಬಗರ್ ದಾರರನ್ನು ನೊಂದಾಯಿಸಲಾಗಿದೆ. ಇದು ಅವರಿಗೆ ಜಮೀನಿನ ಮಾಲಿಕತ್ವವನ್ನು ಖಾತರಿಪಡಿಸುವುದರತ್ತ ಪ್ರಮುಖ ಹೆಜ್ಜೆಯಾಗಿದೆ. ಎಡರಂಗ ಸರಕಾರ ಕೃಷಿ ಕಾರ್ಮಿಕರ ದಿನದ ಕೂಲಿಯನ್ನು ರೂ 5.60 ರಿಂದ 20 ರೂಪಾಯಿಗೆ ಏರಿಸಿದೆ.

ಕೇರಳದಲ್ಲಿ 1982- 87 ರಅವಧಿಯಲ್ಲಿ ಕಾಂಗ್ರೆ ಸರಕಾರವಿದ್ದಾಗ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಬೆಳವಣಿಗೆ ದರ ಶೇ 1.13 ಆಗಿತ್ತು. ಇದು ಎಡ ಪ್ರಜಾಸತ್ತಾತ್ಮಕ ರಂಗ (ಎಲ್ ಡಿ,ಎಫ್) ಸರಕಾರದ ಆಡಳಿತ ಅವಧಿಯಲ್ಲಿ ಶೇ. 5.7 ಕ್ಕೆ ಏರಿತು. ಕೃಷಿ ಉತ್ಪನ್ನಗಳ ಬೆಳವಣಿಗೆ ದರ ಶೇ 9.08 ಕ್ಕೆ ಏರಿತು. ಕೈಗಾರಿಕೆ ಉತ್ಪಾದನೆ ಬೆಳವಣಿಗೆ ದರ ಅಭೂತಪೂರ್ವ (ಶೇ 18.7) ಏರಿಕೆಯನ್ನು ದಾಖಲಿಸಿತು. ಇಲ್ಲಿ ಇತರ ಅನೇಕ ಕ್ಷೇತ್ರಗಳಲ್ಲೂ ಪ್ರಮುಖ ಸಾಧನೆಗಳನ್ನು ಮಾಡಿದ ಪಕ್ಷ ಆಡಳಿತದಲ್ಲಿ ಪ್ರಗತಿಪರ ವಿಕೇಂದ್ರೀಕರಣ ಕ್ರಮವನ್ನು ಅಳವಡಿಸಿತು. ಎಲ್ ಡಿಎಫ್ ಸರಕಾರ ಕೇರಳದಲ್ಲಿ ಸಂಪೂರ್ಣ ಸಾಕ್ಷರತೆ ಗುರಿಯನ್ನು ಸಾಧಿಸಿತು.

ಪಶ್ಚಿಮ ಬಂಗಾಳಮತ್ತು ಕೇರಳಗಳ ಸಿಪಿಐ(ಎಂ) ನೇತೃತ್ವದ ಸರಕಾರಗಳು ಇಡೀ ದೇಶದ ಎಡ ಹಾಗೂ ಪ್ರಜಾಸತ್ತಾತ್ಮಕ ಆಂದೋಲನದ ಕಾವಲು ಗೋಪುರಗಳಾಗಿಯೇ ಮುಂದುವರಿದವು. 1991 ರಲ್ಲಿ ಕೇರಳ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಅಲ್ಪ ಅಂತರದಿಂದ ನಾವು ಸೋತೆವು. ರಾಜೀವ್ ಗಾಂಧಿ ಹತ್ಯೆಯಿಂದ ಉದ್ಭವಿಸಿದ ಸಹಾನುಭೂತಿ ಹಾಗೂ ಬಿಜೆಪಿ ರಹಸ್ಯವಾಗಿ ಕಾಂಗ್ರೆಗೆ ಮತವನ್ನು ವರ್ಗಾಯಿಸಿದ್ದು ಇದಕ್ಕೆ ಪ್ರಮುಖ ಕಾರಣಗಳು.

ಜನರನ್ನು ಕಾಡುವ ದೈನಂದಿನ ಹಾಗೂ ದೀರ್ಘಕಾಲದ ಸಮಸ್ಯೆಗಳ ವಿರುದ್ಧ ಸಿಪಿಐ(ಎಂ) ನೇತೃತ್ವದ ಸಾಮೂಹಿಕ ಸಂಘಟನೆಗಳು ಜನತೆಯನ್ನು ಹೋರಾಟದ ಕಣಕ್ಕೆ ಇಳಿಸಿದವು. ಸರಕಾರಗಳ ಆರ್ಥಿಕ ನೀತಿಗಳ ವಿರುದ್ಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಸಿಐಟಿಯು ಕೋಮುವಾದ ವಿರೋಧಿ ಪ್ರಚಾರಂದೋಲನವನ್ನು ನಡೆಸಿತು. ಅದು ಅನೇಕ ರಾಜ್ಯಗಳಲ್ಲಿ ದುಡಿಯುವ ಮಹಿಳೆಯರ ಹೋರಾಟಗಳನ್ನು ಸಂಘಟಿಸಿತು. ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ನೇತೃತ್ವದಲ್ಲಿ ಹೋರಾಟ ನಡೆಸಿ ಹೆಚ್ಚುವರಿ ಜಮೀನನ್ನು ಆಕ್ರಮಿಸಲಾಯಿತು. ಅಥವಾ ಗುರುತಿಸಲಾಯಿತು. ಪಶ್ಚಿಮ ಬಂಗಾಳ,ಕೇರಳ, ಆಂಧ್ರ ಪ್ರದೇಶ, ಬಿಹಾರ, ಒರಿಸ್ಸಾ, ಉತ್ತರ ಪ್ರದೇಶ, ಕರ್ನಾಟಕ, ತಮಿಳುನಾಡು, ಮತ್ತು ಹರ್ಯಾಣಗಳಲ್ಲಿ ತೀಕ್ಷ್ಣವಾದ ಭೂ ಸ್ವಾಧೀನ ಹೋರಾಟಗಳು ನಡೆದವು. ಅಲ್ಲೆಲ್ಲ ಒಟ್ಟು ಸುಮಾರು ಒಂದು ಲಕ್ಷ ಎಕರೆ ಜಮೀನು ಹೆಚ್ಚುವರಿಯಾಗಿರುವುದನ್ನು ಗುರುತಿಸಲಾಯಿತು. ಪಂಜಾಬ್ ಹಾಗೂ ಜಮ್ಮು ಕಾಶ್ಮೀರದಲ್ಲಿನ ವಿಶಿಷ್ಟ ಪರಿಸ್ಥಿತಿಯಿಂದಾಗಿ ಅಲ್ಲಿ ಇಂಥ ನೇರ ಕಾರ್ಯಚರಣೆ ಸಾಧ್ಯವಾಗಲಿಲ್ಲ. ಯುವಜನ, ವಿದ್ಯಾರ್ಥಿ ಮತ್ತು ಮಹಿಳಾ ರಂಗಗಳು ಆಯಾ ವಿಭಾಗಗಳ ಬೇಡಿಕೆಗಳ ಆಧಾರದಲ್ಲಿ ಕ್ರಿಯಾಶೀಲರಾಗಿದ್ದವು. ರಾಜಕೀಯ ವಿದ್ಯಾಮಾನಗಳ ವಿಚಾರದಲ್ಲೂ ಅವು ಸಕ್ರಿಯವಾಗಿದ್ದವು.

(ಇನ್ನೂ ಇದೆ)

ಕರ್ನಾಟಕ ಸುದ್ದಿ ಸಮಾಚಾರ

ಸಿಪಿಐ(ಎಂ)ನ 15ನೇ ರಾಜ್ಯ ಸಮ್ಮೇಳನ

ಬನ್ನಿರೆಲ್ಲಾ ಸಾಗೋಣ ಗುಲ್ಬರ್ಗದತ್ತ.....

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ 15ನೇ ರಾಜ್ಯ ಸಮ್ಮೇಳನ 24-27ಫೆಬ್ರವರಿ 1995ರಂದು ಗುಲ್ಬರ್ಗದ ಬಸ್ ನಿಲ್ದಾಣದ ಸಮೀಪವಿರುವ ಶಾನುಭಾಗ ಫೆಸ್ಟಿವಲ್ ಪ್ಯಾಲೇಸಿನಲ್ಲಿ ನಡೆಯಲಿದೆ. ಕರ್ನಾಟಕ, ಆಂಧ್ರ ರಾಜ್ಯಗಳಲ್ಲಿ ಕಾಂಗ್ರೆಪಕ್ಷ ದೇಶಕ್ಕೆ ಸ್ವಾತಂತ್ರ್ಯಗಳಿಸಿದ ನಂತರ ನಡೆದ ಚುನಾವಣೆಗಳಲ್ಲಿ ಹಿಂದೆ ಎಂದಿಗೂ ಎದುರಿಸದಂತಹ ಹೀನಾಯವಾದ ಸೋಲನ್ನನುಭವಿಸಿ ನೆಲ ಕಚ್ಚಿದ ಸಂದರ್ಭದಲ್ಲಿ ಈ ಸಮ್ಮೇಳನ ಸೇರುತ್ತಿದೆ. ಕಾಂಗ್ರೆಸ್ಸಿನ ಭ್ರಷ್ಟ, ಸುಳ್ಳಿನ ಸರಮಾಲೆಗಳ ಲಾಭ ಪಡೆದು ಅಧಿಕಾರ ಗದ್ದುಗೆಗೇರುವ ಬಿಜೆಪಿಯ ಹಗಲು ಕನಸು ನನಸಾಗದಿದ್ದರೂ ವಿಧಾನ ಸಭೆಯಲ್ಲಿ ಹಿಂದಿನ 4ರ ಬದಲಾಗಿ 40 ಸ್ಥಾನ ಗಿಟ್ಟಿಸಿ ವಿರೋಧ ಪಕ್ಷದ ಸ್ಥಾನ "ಅಲಂಕರಿಸಿ" ತನ್ನ ಕೋಮು ಶಕ್ತಿಯನ್ನು ಪ್ರದರ್ಶಿಸಿದ ಬಿಜೆಪಿಯ ಗೆಲುವಿನ ಹಿನ್ನೆಲೆಯಲ್ಲಿ ಈ ಸಮಾವೇಶ ಸೇರಲಿದೆ. ತಮ್ಮ ಮುಖಂಡತ್ವ ಹೊರಗಿನ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಸ್ವಲ್ಪ ಮಟ್ಟಿಗೆ ಐಕ್ಯತೆಯನ್ನು ತೋರಿಸುವ ಮೂಲಕ ಜನರಲ್ಲಿ ವಿಶ್ವಾಸ ಮೂಡಿಸಿ ಕಾಂಗ್ರೆವಿರೋಧಿ, ಬಿಜೆಪಿ ವಿರೋಧಿ ಮತಗಳನ್ನು ಗಳಿಸಿ ಅಧಿಕಾರಕ್ಕೆ ಬಂದಿರುವ ಜನತಾದಳದ ವಿಜಯದ ಹಿನ್ನಲೆಯಲ್ಲಿ ಈ ಸಮಾವೇಶ ಸೇರುತ್ತಿದೆ. ಸಿಪಿಐ(ಎಂ) ಪಕ್ಷದ 14ನೇ ಕಾಂಗ್ರೆಸ್ ಹಾಗೆಯೇ 14ನೆ ರಾಜ್ಯ ಸಮ್ಮೇಳನಗಳ ನಿರ್ಣಯಗಳನ್ನು ತನ್ನ ಶಕ್ತಿ ಮೀರಿ ರಾಜ್ಯದಲ್ಲಿ ಅನುಷ್ಠಾನದಲ್ಲಿ ತಂದು ಕಳೆದ ಮೂರುವರೆ ವರ್ಷಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ನೇತ್ರದ ಸಾಮೂಹಿಕ ಸಂಘಟನೆಗಳು ಜಂಟಿಯಾಗಿ, ಸ್ವತಂತ್ರವಾಗಿಯೂ ಕೇಂದ್ರ ಮತ್ತು ರಾಜ್ಯದ ಜನ ವಿರೋಧಿ ನೀತಿಗಳ ವಿರುದ್ಧ ಐಎಂ.ಎಫ್, ವಿಶ್ವಬ್ಯಾಂಕ್ ಮತ್ತು ಗ್ಯಾಟ್ ಒಪ್ಪಂದಗಳನ್ನು ವಿರೋಧಿಸಿ ಕೋಮುವಾದದ ವಿರುದ್ಧ ದೇಶದ ಐಕ್ಯತೆ ಸಮಗ್ರತೆ, ಸಾರ್ವಭೌಮತ್ವದ ರಕ್ಷಣೆಗಾಗಿ ಪರಿಣಾಮಕಾರಿಯಾಗಿಯೇ ಹೋರಾಟಗಳನ್ನು ನಡೆಸಿ,ಹೋದ ಸೆಪ್ಟಂಬರ್ ತಿಂಗಳಲ್ಲಿ 32 ಸಾವಿರಕ್ಕೂ ಮೇಲ್ಪಟ್ಟು ಜನರು ಜೈಲಿಗೆ ಸೇರುವಂತೆ ಮಾಡಿ, ತನ್ನ ಸ್ವತಂತ್ರ ಅಸ್ತಿತ್ವವನ್ನು ಪ್ರದರ್ಶಿಸಿದ ಹಿನ್ನೆಲೆಯಲ್ಲಿ ಈ ಸಮ್ಮೇಳನ ಸಮಾವೇಶಗೊಳ್ಳುತ್ತಿದೆ.

ಕಳೆದ ಮೂರೂವರೆ ವರ್ಷಗಳಲ್ಲಿ ದೇಶದ ರಾಜ್ಯ ಜನರ ಸಮಸ್ಯೆಗಳಿಗೆಸ್ಪಂದಿಸಿ ಹೋರಾಟಮಾಡಿದ ಹಿನ್ನಲೆಯಲ್ಲಿ ಸಿಪಿಐ (ಎಂ) ಪಕ್ಷದ ಹಾಗೆಯೇ ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳ ಸದಸ್ಯತ್ವ ಹೆಚ್ಚಾದ ಹಿನ್ನಲೆಯಲ್ಲಿ ಈ ಸಮ್ಮೇಳನ ಸೇರುತ್ತಿದೆ. ಹೋದ ವಿಧಾನ ಸಭೆಯಲ್ಲಿ ಜನತಾದಳದೊಡನೆ ಹೊಂದಾಣಿಕೆ ಇದ್ದೂ ಪ್ರಾತಿನಿಧ್ಯವನ್ನು ಪಡೆಯಲು ವಿಫಲವಾಗಿದ್ದು ಈ ಸಲ ಜನತಾದಳದೊಡನೆ ಹೊಂದಾಣಿಕೆ ಇಲ್ಲದಿದ್ದರೂ ಒಂದು ಸ್ಥಾನ ಗೆದ್ದು ವಿಧಾನ ಸಭೆಯಲ್ಲಿ ಪ್ರಾತಿನಿಧ್ಯ ಪಡೆದು ಮೂರು ಕ್ಷೇತ್ರಗಳಲ್ಲಿ ಗಣನೀಯ ಮತ ಪಡೆಯಲು ಸಾಧ್ಯವಾದ ಹಿನ್ನಲೆಯಲ್ಲಿ ಈ ಸಮ್ಮೇಳನ ನಡೆಯುತ್ತಿದೆ. ಈ ಎಲ್ಲೋದೃಷ್ಟಿಯಿಂದಲೂ ಗುಲ್ಬರ್ಗದಲ್ಲಿ ಸೇರುವ ಸಮ್ಮೇಳನಕ್ಕೆ ಮಹತ್ವವಿದೆ.

ಹೋರಾಟದ ಪರಂಪರೆಯ ಗುಲ್ಬರ್ಗಾ

ಭಾರತ ದೇಶಕ್ಕೆ 1947 ಆಗಸ್ಟ್ 15 ರಂದು ಸ್ವಾತಂತ್ರ್ಯ ಸಿಕ್ಕರೆ, ಹೈದರಾಬಾದ್ ಕರ್ನಾಟಕ್ಕೆ 1948 ಸೆಪ್ಟಂಬರ್ 18ರಂದು ಸ್ವಾತಂತ್ರ್ಯ ಲಭಿಸಿತ್ತು. ಹೈದರಾಬಾದ್ ಕರ್ನಾಟಕದ ಒಂದು ಜಿಲ್ಲೆಯಾದ ಗುಲ್ಬರ್ಗ ದೇಶ ಸ್ವಾತಂತ್ರ್ಯ ಪಡೆದ ಒಂದು ವರ್ಷದ ಒಂದುತಿಂಗಳು ಮೂರು ದಿವಸಗಳ ನಂತರ ಹೈದರಾಬಾದ್ ನಿಝಾಮನ ವಿರುದ್ಧ ರಜಾಕಾರರ ಕ್ರೂರದಬ್ಬಾಳಿಕೆಯ ವಿರುದ್ಧ ಸೆಣೆಸಿದ ಶಕ್ತಿಗಳ ಜೊತೆ ಸೇರಿ ಹೋರಾಟ ನಡೆಸಿತ್ತು. ತೆಲಂಗಾಣದಲ್ಲಿ ಸ್ಫೂರ್ತಿ ಪಡೆದ ಗುಲ್ಬರ್ಗ ಸಂಗಾತಿಗಳು ಗುಲ್ಬರ್ಗ ಜಿಲ್ಲೆಯಲ್ಲಿಯೂ ಕಾರ್ಮಿಕ, ರೈತರನ್ನು ಸಂಘಟಿಸಿ ಹೋರಾಟ ನಡೆಸಿದ್ದರು. ಸ್ವಾತಂತ್ರ್ಯ ಗಳಿಸಿದ ನಂತರ ಭಾಷಾವಾರು ಪ್ರಾಂತ ರಚನೆಯಾಗಿ ನಡೆಸಿದ ಚಳುವಳಿಯಲ್ಲಿಯೂ ನಮ್ಮ ಸಂಗಾತಿಗಳು ಪಾಲ್ಗೊಂಡಿದ್ದರು. ತೆಲಂಗಾಣ ಚಳುವಳಿಯ ಸಮಯದಲ್ಲಿಯೇ 1944 -45ರಲ್ಲಿಯೇ ಗುಲ್ಬರ್ಗಾ ಸಂಗಾತಿಗಳು-ಗಂಗಾಧರ ನಮೋಶಿ, ಶ್ರೀನಿವಾಸ ಗುಡಿ, ಗೋಪಾಲರಾವ್ ಅಬ್ದುಲ್ ಕರೀಮ್, ಕಾದಂಬರಿ ದೇಶಮುಖ ಅವರ ಇಡೀ ಮನೆತನ, ಕೇಶವರಾವ್ ತಿಳಗುಳ, ನರಸಿಂಹರಾವ್ ಕುಲಕರ್ಣಿ, ಶಹಾಬಾದಿನ ಆಜಾದ, ಶಂಕರಪ್ಪ ಮೊದಲಾದವರು ಬಿಜಾಪುರ-ಬೆಂಗಳೂರುಗಳಲ್ಲಿ ಕಮ್ಯುನಿಸ್ಟ್ ಪಾರ್ಟಿ ಮುಖಂಡರನ್ನು ಸಂಪರ್ಕಿಸಿ ಹೈದರಾಬಾದಿನ ಮತ್ತು ಕರ್ನಾಟಕದ ಕಮ್ಯುನಿಸ್ಟರ ಸಹಾಯದಿಂದ ಗುಲ್ಬರ್ಗ, ಶಹಾಬಾದ್, ಹಟ್ಟಿಗಳಲ್ಲಿಕಾರ್ಮಿಕ ಸಂಘಟನೆಗಳನ್ನು ಕಟ್ಟಿದರು. ರಜಾಕಾರಣ ವಿರುದ್ಧ ನಿಝಾಮ್ ಶಾಹಿಯ ಆಡಳಿತ ಕೊನೆಗೊಳಿಸಲು ಧೀಮಂತ ಹೋರಾಟನಡೆಸಿದರು. ಸೋಲಾಪುರ- ಬಿಜಾಪುರಗಳಲ್ಲಿ ಶಿಬಿರಗಳನ್ನು ತೆರೆದು ಸ್ವಯಂ ಸೇವಕರನ್ನು ಒದಗಿಸಿ ಹಣ ಸಹಾಯ ನೀಡಿ, ಪ್ರಚಾರ ಪಕ್ಕೋಭೆ ನಡೆಸಿ ಸಹಾಯ ನೀಡಿದೆವರು. ಆ ಹಿನ್ನೆಲೆಯಲ್ಲಿಯೇ ಗುಲ್ಬರ್ಗದ ಎಂ.ಎಸ್.ಕೆ ಮಿಲ್, ಶಹಾಬಾದಿನ ಎಸಿಸಿ ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿಗಳಲ್ಲಿ ಬಲಿಷ್ಟವಾದ ಕಾರ್ಮಿಕ ಸಂಘಟನೆಗಳನ್ನು ರೈತ, ವಿದ್ಯಾರ್ಥಿ, ಸಂಘಟನೆಗಳನ್ನು ಕಟ್ಟಲು ಸಾಧ್ಯವಾಗಿತ್ತು. ಅವುಗಳ ಹಿನ್ನಲೆಯಲ್ಲಿ 1962ರಲ್ಲಿ ಗುಲ್ಬರ್ಗ ನಗರ ಮತ ಕ್ಷೇತ್ರದಿಂದ ಒಬ್ಬ ಶಾಸಕನನ್ನು ಆರಿಸಿ ತರಲು ಸಾಧ್ಯವಾಗಿತ್ತು. ಅಂಥ ಹೋರಾಟಗಳ ಅನುಭವದಿಂದಲೇ 1971 ಡಿಸೆಂಬರ್ ತಿಂಗಳಲ್ಲಿ ಸಿಪಿಐ(ಎಂ) ಪಕ್ಷದ 9ನೆ ರಾಜ್ಯ ಸಮ್ಮೇಳನ ಗುಲ್ಬರ್ಗದಲ್ಲಿ ಸೇರಿತ್ತು. 1964ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಪರಿಷ್ಕರಣವಾದಿಗಳ ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗದ ನಿಲುಮೆಯನ್ನು ತೊರೆದು ಜನತಾ ಪ್ರಜಾಪ್ರಭುತ್ವ ರಂಗದ ಮೂಲಕ ಅಧಿಕಾರಕ್ಕೆ ಬರುವ ಕಾರ್ಯಕ್ರಮವನ್ನು ಸ್ವೀಕರಿಸಿದ ಹಿನ್ನಲೆಯಲ್ಲಿ ಅಂದು 9ನೇ ಸಮ್ಮೇಳನ ನಡೆದಿತ್ತು. ಕೆಲವು ಹಿರಿಯ ಮುಖಂಡರು ಪರಿಷ್ಕರಣವಾದವನ್ನು ಸ್ವೀಕರಿಸಿ ಪಕ್ಷವನ್ನು ಬಿಟ್ಟು ಹೋದರೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ರೈತ-ಕಾರ್ಮಿಕರ ಮಧ್ಯೆ ಭದ್ರವಾಗಿ ಉಳಿದಿದ್ದ ಪಕ್ಷ 9ನೇ ಸಮ್ಮೇಳನದ ಜವಾಬ್ದಾರಿ ಹೊತ್ತಿತ್ತು. 15 ಅಡಿ 20 ಅಡಿ ಉದ್ದದ ವಿಶಾಲವಾದ ಸಭಾಮಂಟಪ 9 ಕೆಂಪು ಧ್ವಜಗಳ ಹಾರಾಟದಿಂದಾಗಿ ಟೌನ್ ಹಾಲ್ ಮೈದಾನದಲ್ಲಿ ಕಂಗೊಳಿಸುತ್ತಿತ್ತು. ಪಕ್ಷದ ಅಂದಿನ ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ನಂಬೂದಿರಿಪಾಡ್ ಮತ್ತು ಲೋಕಸಭಾ ಸದಸ್ಯ

ಪುಟ 8 ನೋಡಿ

ಸಿಪಿಐ(ಎಂ) ಜಿಲ್ಲಾ ಸಮ್ಮೇಳನಗಳು

ವಿಜಾಪುರ: ಸಿಪಿಐ(ಎಂ) ವಿಜಾಪುರ ಜಿಲ್ಲಾ 15ನೇ ಸಮ್ಮೇಳನ ಫೆಬ್ರವರಿ 1 ಮತ್ತು 2 ರಂದು ಸಫ್ದರ್ ಹಾಶ್ಮಿ ನಗರದಲ್ಲಿ ನಡೆಯಿತು.

ಈ ಸಮ್ಮೇಳನದ ಅಧ್ಯಕ್ಷತೆಯನ್ನು ಜಿಲ್ಲಾ ಕಾರ್ಯದರ್ಶಿ ಭೀಮ್‌ಸಿ ಕಲಾದಗಿ ವಹಿಸಿದ್ದರು. 2ದಿನ ನಡೆದ ಈ ಸಮ್ಮೇಳನದಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು. ಸಂಜೆ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ವಿ.ಜಿ.ಕೆ. ನಾಯರ್ ಮಾತನಾಡಿ ಮೈಸೂರು ಸೋಪ್ ಫ್ಯಾಕ್ಟರಿ, ಮೈಸೂರು ಲ್ಯಾಂಪ್ಸ್, ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆಗಳನ್ನು ಖಾಸಗಿಯವರಿಗೆ ಕೊಡಬೇಕೆನ್ನುವ ಸರ್ಕಾರದ ನೀತಿಯನ್ನು ಖಂಡಿಸಿದರು.

ಧ್ವಜಾರೋಹಣ ನೆರವೇರಿಸಿದ ಕಾಂ. ಎನ್.ಕೆ.ಉಪಾಧ್ಯಾಯರು ಜಾತಿ ಧರ್ಮದ ಹೆಸರಲ್ಲಿ ಜನರ ಐಕ್ಯತೆ ಒಡೆಯುವ ಕುತಂತ್ರದ ಬಗ್ಗೆ ಜಾಗ್ರತೆ ಅಗತ್ಯವೆಂದರು.

ಕಾಂ.ಮನ್ನುಸಾಬ ಕಲಾದಗಿ ಕಾಂ. ಅಣ್ಣಾರಾಯ ಈಳಗೇರ ಕಾಂ. ಶ್ರೀಧರ ಕುಲಕರ್ಣಿ ಮುಂತಾದವರು ಮಾತನಾಡಿದರು ಈ ಸಂದರ್ಭದಲ್ಲಿ ಕಾಂ. ಬಸಂತಪ್ಪ ಕಲ್ಲೊಳ್ಳಿ ಮುಂತಾದವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಎರಡು ದಿನಗಳವರಗೆ ನಡೆದ ಈ ಜಿಲ್ಲಾ ಸಮ್ಮೇಳನದಲ್ಲಿ 12 ಜನ ಸದಸ್ಯರು ನೂತನ ಜಿಲ್ಲಾ ಸಮಿತಿಗೆ ಆಯ್ಕೆಯಾದರು ಅಲ್ಲದೆ ಈ ಸಮಿತಿಗೆ ಕಾಂ. ಭೀಮ್ಸಿ ಕಲಾದಗಿಯವರು ಕಾರ್ಯದರ್ಶಿಯಾಗಿ ಆಯ್ಕೆಯಾದರು ಅಲ್ಲದೆ ಗುಲ್ಬರ್ಗಾದಲ್ಲಿ ನಡೆಯಲಿರುವ ರಾಜ್ಯ ಸಮ್ಮೇಳನಕ್ಕೆ 11 ಜನ ಪ್ರತಿನಿಧಿಗಳು ಆಯ್ಕೆಯಾದರು.

ಮಳವಳ್ಳಿ

ಕಾಗೇಪುರ: ಮಂಡ್ಯ ಜಿಲ್ಲಾ ಶಾಖೆಗಳ ಸಮ್ಮೇಳನವು ಕಾಗೇಪುರದಲ್ಲಿ ಫೆಬ್ರವರಿ5-6 ರಂದು ಕಾಂ.ಜಯಶೇಖರಪ್ಪ ರವರು ಧ್ವಜಾರೋಹಣ ಮಾಡುವ ಮೂಲಕ ಉದ್ಘಾಟನೆಯಾಯಿತು. ನಂತರ ಕಾಂ.ಜಿ.ಎನ್.ನಾಗರಾಜುರವರು 'ಪಕ್ಷದ ಸಂಘಟನೆ ಮತ್ತು ಪಾತ್ರ' ಕುರಿತು ಮಾತನಾಡಿದರು. ಪ್ರಪಂಚದ ಕ್ರಾಂತಿಕಾರಿ ಮುಂಚೂಣಿಯ ಮಹತ್ವದ ಗ್ರಂಥ "ಕಮ್ಯುನಿಸ್ಟ್ ಮ್ಯಾನಿಫೆಸ್ಟೋ"ಎಂದು ಹೇಳಿದರು. ಎಂ.ಎಸ್.ಉಗ್ರಪ್ಪ ಮತ್ತು ಜಿ.ಸಿ.ಬಯ್ಯಾರೆಡ್ಡಿ ಉಪಸ್ಥಿತರಿದ್ದರು. ಪಕ್ಷದ ಸಂಘಟನೆಗೆ ಸಹಕಾರಿಯಾಗುವಂತೆ ವಿದ್ಯಾರ್ಥಿ ಶಾಖೆ, ಯುವಜನಶಾಖೆ, ರೈತ ಕೃಷಿಕೂಲಿಕಾರರ ಶಾಖೆ ಮತ್ತು ವಿಜ್ಞಾನ ಶಾಖೆಗಳಾಗಿ ವಿಂಗಡಿಸಲಾಯಿತು. ವಿದ್ಯಾರ್ಥಿ ಶಾಖೆಯ ಕಾರ್ಯದರ್ಶಿ ಡಿ.ಪ್ರಕಾಶ್, ಯುವಜನ ಶಾಖೆಯ ಕಾರ್ಯದರ್ಶಿಯಾಗಿ ಕೆ.ಎಂ. ಪುಟ್ಟಮಾದು, ರೈತ -ಕೃಷಿಕೂಲಿಕಾರರ ಶಾಖೆಯ ಕಾರ್ಯದರ್ಶಿಯಾಗಿ ಜಿ. ರಾಮಕೃಷ್ಣ ಆಯ್ಕೆಯಾದರು. ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿ ಹಾಗೂ ವೀಕ್ಷಕರಾಗಿ ಜಿ. ರಾಮಕೃಷ್ಣ, ಲತೀಫ್, ಪುಟ್ಟಮಾದಯ್ಯ ಮತ್ತು ಡಿ.ಪ್ರಕಾಶ್ ಆಯ್ಕೆಯಾದರು. ಸಮ್ಮೇಳನದ ಅಧ್ಯಕ್ಷತೆಯನ್ನು ಕಾಂ. ಪುಟ್ಟಮಾದಯ್ಯ ವಹಿಸಿದ್ದರು. ಜಿ. ರಾಮಕೃಷ್ಣ ವರದಿ ಮಂಡಿಸಿದರು. ಸಮ್ಮೇಳನವು ಕೆಲವು ನಿರ್ಣಯಗಳನ್ನು ಕೈ ಗೊಂಡಿತು.

ಸಂಜೆ ಬಹಿರಂಗ ಸಮಾರಂಭ ನಡೆಯಿತು ಈ ಸಭೆಯಲ್ಲಿ ಬಯ್ಯಾರೆಡ್ಡಿ ಯವರು ಮಾತನಾಡಿ ಪ್ರಸ್ತುತ ರಾಜಕೀಯ ಸನ್ನಿವೇಶ ತಿಳಿಸಿದರು. ನಂತರ ಉಗ್ರಪ್ಪನವರು ಮಾತನಾಡಿ ಸ್ವಾತಂತ್ರ್ಯ ಹೋರಾಟ ಮತ್ತು ಈಗ ಪಕ್ಷದ ಹೋರಾಟ ಕುರಿತು ವಿವರಿಸಿದರು. ಕಾಂ. ಜಿ.ಎನ್. ನಾಗರಾಜ್, ಹನುಮಂತ, ಪುಟ್ಟಮಾದು, ಜಿ. ರಾಮಕೃಷ್ಣ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಕಾಂ. ಜಯಶೇಖರಪ್ಪ ವಹಿಸಿದ್ದರು.

ಬೀಡಿ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮ ಸಿದ್ಧಪಡಿಸಿ

ರಾಜ್ಯ ಸರಕಾರಕ್ಕೆ ಬೀಡಿ ಕಾರ್ಮಿಕರ ಒಕ್ಕೂಟದ ಮನವಿ

ಬೀಡಿ ಕಾರ್ಮಿಕರ ಸರ್ವೆಯ ಆಧಾರದಲ್ಲಿ ಗುರುತಿಸಲಾದ ಬೀಡಿ ಕಾರ್ಮಿಕರಿಗೆ ಕಾರ್ಮಿಕ ಸಂಘಗಳೊಂದಿಗೆ ಸಮಾಲೋಚಿಸಿ ಕಲ್ಯಾಣ ಕಾರ್ಯಕ್ರಮದ ಯೋಜನೆ ಸಿದ್ಧಪಡಿಸಬೇಕು ಎಂದು ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಒಕ್ಕೂಟ ರಾಜ್ಯ ಸರಕಾರವನ್ನು ಆಗ್ರಹಪಡಿಸಿದೆ. ಇದಲ್ಲದೆ ಬೀಡಿ ಕಾರ್ಮಿಕರ ಜೀವನ ಪರಿಸ್ಥಿತಿ ಕುರಿತು ಅಧ್ಯಯನ ನಡೆಸಿದ ಸಂಸದೀಯ ಸಮಿತಿಯ ವರದಿ ಜ್ಯಾರಿಯಾಗಬೇಕು, ತಾತ್ಕಾಲಿಕ ಪರಿಹಾರವಾಗಿ ರೂ. 50 ಕನಿಷ್ಟ ವೇತನ ದೊರೆಯಬೇಕು. ಕೂಲಿ ಮತ್ತು ಸೌಲಭ್ಯಗಳ ಕುರಿತಾದ ವಿವಿಧ ಕಾಯ್ದೆಗಳನ್ನೆಲ್ಲಾ ಕಡ್ಡಾಯ ಮಾಡಿ ಜ್ಯಾರಿಗೊಳಿಸಬೇಕು, ಸಣ್ಣ ಸಿಗರೇಟಿಗೆ ಸುಂಕ ಕಡಿತ ಮಾಡಿದ್ದನ್ನು ರದ್ದು ಮಾಡಬೇಕೆಂದು ಕೇಂದ್ರವನ್ನು ರಾಜ್ಯ ಸರಕಾರ ಒತ್ತಾಯಿಸಬೇಕು ಹಾಗೂ ಸರ್ವೋಚ್ಛ ನ್ಯಾಯಾಲಯ ಬೀಡಿ ಕಾರ್ಮಿಕರ ಬಗ್ಗೆ ರಾಜಾಂಗಂ ಕೇಸಿನಲ್ಲಿ ತೆಗೆದು ಕೊಂಡಿರುವ ನಿರ್ಧಾರಗಳನ್ನು ಕರ್ನಾಟಕ ರಾಜ್ಯದಲ್ಲೂ ಜಾರಿಗೊಳಿಸಲು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಒಕ್ಕೂಟ ಫೆಬ್ರವರಿ 13ರಂದು ರಾಜ್ಯದ ಕಾರ್ಮಿಕ ಸಚಿವರಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ಒತ್ತಾಯಿಸಿದೆ.

ಕರ್ನಾಟಕ ರಾಜ್ಯದಲ್ಲಿ 3 ಲಕ್ಷ 55 ಸಾವಿರ ಬೀಡಿ ಕಾರ್ಮಿಕರು ಇರುವುದಾಗಿ ಬೀಡಿ ಕಾರ್ಮಿಕರ ಕಲ್ಯಾಣ ಆಯುಕ್ತರ ವರದಿ ತಿಳಿಸುತ್ತದೆ. ಆದರೆ ಈ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳು ಸರಿಯಾಗಿ ಜಾರಿಯಾಗಿರುವುದಿಲ್ಲ, ಬೀಡಿ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಕ್ಕಾಗಿ 30 ಕೋಟಿಯ ಮೇಲ್ಪಟ್ಟು ನಮ್ಮ ರಾಜ್ಯದಿಂದ ವಸೂಲಾದ ಹಣ ಕೇಂದ್ರ ಸರ್ಕಾರದ ಹಿಡಿತದಲ್ಲಿದ್ದು ಇಲ್ಲಿನ ಕಾರ್ಮಿಕರ ಕಲ್ಯಾಣ ಯೋಜನೆಗಳನ್ನು ರಾಜ್ಯ ಸರ್ಕಾರ ಸಿದ್ಧಪಡಿಸದೆ ಇರುವುದರಿಂದ ನಿಧಿಯ ಬಹುಪಾಲು ಖರ್ಚಾಗದೆ ಕೂಡಿಸಿ ಇಟ್ಟಿರುವುದು ದುರ್ದೈವ ಸಂಗತಿ ಎಂದು ಬೀಡಿ ಕಾರ್ಮಿಕರ ಒಕ್ಕೂಟ ಖೇದ ವ್ಯಕ್ತಪಡಿಸಿದೆ.

ಬೀಡಿ ಕಾರ್ಮಿಕರು ವಾಸಿಸುವ ಪ್ರದೇಶದಲ್ಲಿ ಸರ್ವೆ ನಡೆಸಿ ಬೀಡಿ ಕಾರ್ಮಿಕರ ಪಟ್ಟಿ ತಯಾರಿಸುವುದು ರಾಜ್ಯ ಸರ್ಕಾರದ ಮತ್ತು ಸ್ಥಳೀಯ ಸಂಸ್ಥೆಗಳ ಕರ್ತವ್ಯವಾಗಿರುತ್ತದೆ. ಬೀಡಿ ಕಾರ್ಮಿಕರ ಕಲ್ಯಾಣ ನಿಧಿ ಕಾನೂನು ಕಲಂ 40(2)/(ಅ) & (ಬ) ಅನುಸರಿಸಿ ರಾಜ್ಯ ಸರ್ಕಾರ ಅಥವಾಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಮಟ್ಟದಲ್ಲಿ ಬೀಡಿ ಕಾರ್ಮಿಕರ ನೊಂದಣಿ ಮಾಡಿ ಗುರ್ತಿನ ಚೀಟಿ ಕೊಡುವುದು ಅಗತ್ಯವಾಗಿದೆ ಎಂದು ಬೀಡಿ ಕಾರ್ಮಿಕರ ಒಕ್ಕೂಟದ ಮನವಿ ಪತ್ರ ಹೇಳಿದೆ.

ಸಂಸದೀಯ ಸಮಿತಿಯ ವರದಿ ಜಾರಿಯಾಗಲಿ

ಬೀಡಿ ಕಾರ್ಮಿಕರ ಜೀವನ ಪರಿಸ್ಥಿತಿಯ ಕುರಿತು ಅಧ್ಯಯನ ಮಾಡಿದ ಶ್ರೀಮತಿ ಚಂದ್ರ ಪ್ರಭಾ ಅರಸರ ನಾಯಕತ್ವದ ಸಂಸದೀಯ ಸಮಿತಿಯ ವರದಿಯನ್ನು ರಾಜ್ಯ ಸರ್ಕಾರ ಕೂಡಲೇ ಅಂಗೀಕರಿಸಬೇಕು ಎಂದೂ ಮನವಿ ಒತ್ತಾಯಿಸಿದೆ. ಈ ವರದಿಯು ಕಾರ್ಮಿಕರ ಕೂಲಿ, ಕಲ್ಯಾಣ ವ್ಯವಸ್ಥೆ, ESI, P.F. ಮುಂತಾದ ವಿಷಯಗಳನ್ನು ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಂಡಿರುತ್ತದೆ. ಇದರಲ್ಲಿ ಮುಖ್ಯವಾಗಿ ಕಾರ್ಮಿಕರಿಗೆ ಸಿಗಬೇಕಾದ ಕೂಲಿಯ ಬಗ್ಗೆ ಅವಶ್ಯ ಆಧಾರಿತ (Need based minimum wage) ಕನಿಷ್ಟ ಕೂಲಿ ಸಿಗಬೇಕೆಂದು ಶಿಫಾರಸು ಮಾಡಲಾಗಿದೆ. ಒಬ್ಬರಿಗೆ 2700 ಕ್ಯಾಲರಿ ಆಹಾರದಂತೆ ಸದಸ್ಯರನ್ನು ಒಳಗೊಂಡ ಕುಟುಂಬಕ್ಕೆ ಅಗತ್ಯವಾದ ಆಹಾರ ಪದಾರ್ಥಗಳ ವೆಚ್ಚ, ವರ್ಷಕ್ಕೆ 125 ಗಜ ಬಟ್ಟೆಗೆ ಆಗುವ ವೆಚ್ಚ, ಸಾಧಾರಣ ಮಟ್ಟದ ಮನೆಬಾಡಿಗೆ ವೆಚ್ಚ, ಮೇಲಾಗಿ ಇತರ ಖರ್ಚಿಗೆ ಶೇ. 25 ರಷ್ಟು ಒದಗಿಸಬೇಕೆಂದು ಅಖಿಲ ಭಾರತ ಕಾರ್ಮಿಕ ಸಚಿವರ ಸಭೆಯಲ್ಲಿ ಅಂಗೀಕಾರವಾದ ಈ ಸೂತ್ರದ ಆಧಾರಲ್ಲಿ ಕೂಲಿಯನ್ನು ನಿಗದಿ ಪಡಿಸಬೇಕೆಂದು ಸಂಸದೀಯ ಸಮಿತಿ ಸರ್ವಾನುಮತದಿಂದ ಶಿಫಾರಸು ಮಾಡಿದೆ. ಕರ್ನಾಟಕ ರಾಜ್ಯದ ಬೀಡಿ ಕಾರ್ಮಿಕರ ಜೀವನ ರೀತಿಯನ್ನು ಅಧ್ಯಯನ ಮಾಡಿ ಈ ಸೂತ್ರದ ಆಧಾರದಲ್ಲಿ 1000 ಬೀಡಿಗೆ ಎಷ್ಟು ಕೂಲಿ ಇರಬೇಕೆಂದು ನಿರ್ಧರಿಸಲು ಒಂದು ಪರಿಣಿತರ ಸಮಿತಿಯನ್ನು ಕೂಡಲೇ ನೇಮಿಸಬೇಕೆಂದು ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಒಕ್ಕೂಟವು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ತಾತ್ಕಾಲಿಕ ಪರಿಹಾರವಾಗಿ ರೂ. 50 ಕನಿಷ್ಟ ವೇತನ

ಮೇಲೆ ವಿವರಿಸಿದ ಅವಶ್ಯ ಆಧಾರಿತ ಕನಿಷ್ಟ ವೇತನ ಎಷ್ಟಿರಬೇಕೆಂದು ಪರಿಣಿತರ ಸಮಿತಿ ನೇಮಕವಾಗಿ ಸಲ್ಲಿಸುವ ವರದಿ ಒಪ್ಪುವವರೆಗೆ ದಕ್ಷಿಣ ವಲಯದ ರಾಜ್ಯಗಳಲ್ಲಿ ಒಂದೇ ಕೂಲಿ ತರುವ ಅವಶ್ಯಕತೆಯನ್ನು ಬೀಡಿ ಕಾರ್ಮಿಕರ ಒಕ್ಕೂಟದ ಮನವಿ ಒತ್ತಿ ಹೇಳಿದೆ.

ಕೇರಳದ ಬೀಡಿ ಕಾರ್ಮಿಕರ ಕನಿಷ್ಟ ಕೂಲಿ 7ನೇ ದಿವಸದ ವೇತನ ಸಿಗುವುದು ಸೇರಿ 1000 ಬೀಡಿ ಒಟ್ಟಾರೆ 55 ರೂ. ಕರ್ನಾಟಕದಲ್ಲಿ ಕರ್ನಾಟಕದ ಬೀಡಿ ಕಾರ್ಮಿಕರ ಕೂಲಿ ಇದರ ಅರ್ಧದಷ್ಟು ಅಂದರೆ ರೂ. 28.01ಇರುವುದು ಸರಿಯಲ್ಲ, ಆಂಧ್ರ ಪ್ರದೇಶ, ತಮಿಳುನಾಡು, ಕೇರಳ ಮತ್ತು ಕರ್ನಾಟಕ ಈ 4 ರಾಜ್ಯಗಳಲ್ಲಿ ಕನಿಷ್ಟ ಕೂಲಿ ಬೇಡಿಕೆಗೆ ನೀಡಲಾಗಿದೆ. ಆದುದರಿಂದ ನಮ್ಮರಾಜ್ಯದ ಬೀಡಿ ಕಾರ್ಮಿಕರಿಗೆ 1300 ಸೂಚ್ಯಂಕಕ್ಕೆ 50 ರೂ. ಕನಿಷ್ಟ ವೇತನ ನಿಗದಿ ಮಾಡುವ ಕರುಡು ಪ್ರಕಟಣೆಯನ್ನು ಕೂಡಲೇ ಹೊರಡಿಸಬೇಕೆಂದು ಒಕ್ಕೂಟ ಒತ್ತಾಯಿಸಿದೆ.

ನಿಗದಿತ ಕೂಲಿ ಮತ್ತು ಸೌಲಭ್ಯಗಳ ಜಾರಿಯ ಕುರಿತು

ನಮ್ಮ ರಾಜ್ಯದ ಬೀಡಿ ಕಾರ್ಮಿಕರಿಗೆ ನಿಗದಿ ಪಡಿಸಲಾದ 28 ರೂ. 1 ಪೈಸೆ ಕೂಲಿ ಕೂಡಾ ಹಲವಾರು ಕಡೆ ಜಾರಿಯಲ್ಲಿರುವುದಿಲ್ಲ. ನಿಗದಿತ ಕೂಲಿಯನ್ನು ಜಾರಿ ಮಾಡಿಸುವುದು ರಾಜ್ಯ ಸರ್ಕಾರದ ಕನಿಷ್ಟ ಕರ್ತವ್ಯ. ಬೀಡಿ ಕಾರ್ಮಿಕರ ಕನಿಷ್ಟ ಕೂಲಿ ಜಾರಿ ಮಾಡಿಸಲು ವಹಿಸಬೇಕಾದ ಅಗತ್ಯ ಕರ್ತವ್ಯ ಯಾವುದೆಂದರೆ ಕನಿಷ್ಟ ಕೂಲಿ ಕಾಯಿದೆ ಪ್ರಕಾರ ಪ್ರತಿಯೊಬ್ಬ ಕಾರ್ಮಿಕನಿಗೂ ನೀಡಬೇಕಾಗುವ ಕೂಲಿಯ ಚೀಟಿ ಕೊಡಿಸುವುದು. ಬೀಡಿ ಕಾರ್ಮಿಕರ ಕೂಲಿಯನ್ನು ಕನಿಷ್ಟ ಕೂಲಿ ಕಾಯಿದೆ ಅನುಸರಿಸಿ ನಿರ್ಧರಿಸಲಾಗಿರುವುದರಿಂದ ಆ ಕಾಯಿದೆಯ ಕಲಂ 26(2) ಅನುಸರಿಸಿ ಫಾರಂ 'ವಿ'ನಲ್ಲಿ ನಮೂದಿಸಲಾದ ರೀತಿಯಲ್ಲಿ ಒಂದು ದಿನವಾದರೂ ಕೆಲಸ ಮಾಡಿದ ಕಾರ್ಮಿಕರಿಗೆ ವೇತನ ನೀಡುತ್ತಿರುವಾಗ ಕೂಲಿಯ ಚೀಟಿ ನೀಡುವುದು ಕಡ್ಡಾಯವಾಗಿರುತ್ತದೆ. ಕಾರ್ಮಿಕರ ಹೆಸರು/ ಮಾಡಿದ ಕೆಲಸ/ ಪಡೆದ ಕೂಲಿಯ ಮೊತ್ತ ತೋರಿಸಬೇಕಾದ ಈ ಚೀಟಿಯಿಂದ ಮಾತ್ರ ತಮಗೆ ಬರಬೇಕಾದ ಕೂಲಿಯ ವಿವರ ಕಾರ್ಮಿಕರಿಗೆ ಸಿಗಲು ಸಾಧ್ಯ. ಯಾವುದೇ ಕಾರ್ಮಿಕರಿಗೆ ಬೀಡಿ ಮತ್ತು ಸಿಗಾರ್

ಪುಟ 8 ನೋಡಿ

26/02/1995

ವಿಶೇಷ ಲೇಖನ

ಮೆಕ್ಸಿಕೊ ಎಂದವರ ಕಣ್ಣಿಗೆ ಕಗ್ಗತ್ತಲು ಕವಿದ ಕತೆ

ಫಂಡ್ ಬ್ಯಾಂಕ್ ಎಂಬ ಎರಡು ಅಂತರ್‍ರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಮೂರನೇ ಜಗತ್ತಿನ ಜನರನ್ನು ದೊಡ್ಡ ಪ್ರಮಾಣದಲ್ಲಿ ವಂಚಿಸುತ್ತಿವೆ. ರಚನಾತ್ಮಕ ಹೊಂದಾಣಿಕೆ ಆರ್ಥಿಕದ ಸ್ಥಿರೀಕರಣ ಎಂಬೆಲ್ಲ ದೊಡ್ಡ ದೊಡ್ಡ ಮಾತುಗಳನ್ನಾಡುವ ಇವು ನಿಜದಲ್ಲಿ ಮೂರನೇ ಜಗತ್ತಿನ ಜನರನ್ನು ಹಿಂಡಿ ಆ ರಾಷ್ಟ್ರಗಳ ಸಂಪತ್ತನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ವರ್ಗಾಯಿಸುವ ಕೆಲಸ ಮಾಡುತ್ತಿವೆ. ಇದು ಆಯಾ ದೇಶಗಳ ಸ್ಥಳೀಯ ಜನರಿಗೆ ಒಪ್ಪಿತವಾಗಬೇಕೆಂಬ ಉದ್ದೇಶದಿಂದ ಬಹುದೊಡ್ಡ ಪ್ರಮಾಣದ ಪ್ರಚಾರವನ್ನು ಇವು ಮಾಡುತ್ತಿವೆ. ಅವರು ನಿರ್ದಿಷ್ಟ ಪಡಿಸುವ ಆರ್ಥಿಕ ನೀತಿಗಳು ಜನರಿಗೆ ಅಪಾರ ಅನುಕೂಲ ಮಾಡಿಕೊಡುವಂತಹವು ಎಂಬ ಭಾವನೆ ಮೂಡಿಸುವುದೇ ಅವರ ಪ್ರಚಾರದ ಉದ್ದೇಶ ಈ ದೇಶಗಳ ಬೂರ್ಝ್ವಾ ರಾಜಕಾರಣಿಗಳು ಮುಗ್ಧರೋ, ಭ್ರಷ್ಟರೋ ಆಗಿರುತ್ತಾರೆ. ಬೂರ್ಝ್ವಾ ವರ್ಗದ ಬಹುದೊಡ್ಡ ಭಾಗಕ್ಕೆ ಉತ್ಪಾದನಾ ಸ್ವಾತಂತ್ರ್ಯ ಹೊಂದುವ ಬದ್ಧತೆ ಕಡಿಮೆ ಇರುವುದರಿಂದ ಇವರು ಈ ಸಾಮ್ರಾಜ್ಯಶಾಹಿಗಳ ಜಾಗತೀಕರಣದ ಆಮಿಷಕ್ಕೆ ಬಲಿಯಾಗುತ್ತಾರೆ.

ಆದ್ದರಿಂದಲೇ ಪಂಡ್-ಬ್ಯಾಂಕ್‌ಗಳ ನೀತಿಗಳಿಂದಲೇ ಸಮೃದ್ಧಿ ಸಾಧ್ಯ ಎಂಬ ಪ್ರಚಾರವನ್ನು ದೊಡ್ಡ ಪ್ರಮಾಣದಲ್ಲಿ ಮಾಡಲಾಗುತ್ತಿದೆ. ಆದರೆ ಈ ಘೋಷಣೆಗಳು ಮತ್ತು ವಾಸ್ತವದ ನಡುವೆ ಎಂತಹ ದೊಡ್ಡ ವ್ಯತ್ಯಾಸವಿದೆಯೆಂದರೆ ಈ ತರ್ಕ ಮುರಿದು ಬೀಳುತ್ತಿದೆ.

ಇದಕ್ಕೆ ಪ್ರತಿಯಾಗಿ ಬ್ಯಾಂಕ್- ಫಂಡ್ ಗಳ ನೀತಿಗಳ ಯಶಸ್ವಿನ ಕತೆಗಳನ್ನು ದೂರದ ದೇಶಗಳಿಂದ ಆಯ್ದುಕೊಳ್ಳಲಾಗುತ್ತಿದೆ. ಬ್ಯಾಂಕ್-ಫಂಡ್ ಗಳಿಂದಲೇ ಈ ಕತೆಗಳು ಬರುವುದರಿಂದ ನಮ್ಮ ಪುಸ್ತಕ ತಜ್ಞರುಗಳು ಈ ಕತೆಗಳಿಗೆ ಬಲಿಬೀಳುತ್ತಾರೆ. ಇಂತಹ ದೂರದ ದೇಶಗಳನ್ನು ಸಂದರ್ಶಿಸಿ ಸತ್ಯವನ್ನು ಹೊರಗೆಳೆವ ಸಂಪನ್ಮೂಲ ಯಾರ ಬಳಿಯಿದೆ?

ಮೆಕ್ಸಿಕೊ ಕತೆ

ಭೂಮಿಯ ಎರಡು ಬೇರೆ ಬೇರೆ ಪ್ರದೇಶದಲ್ಲಿರುವ ದೇಶಗಳು ಭಾರತ ಮತ್ತು ಮೆಕ್ಸಿಕೊ ಇತ್ತೀಚೆಗೆ 'ಮೆಕ್ಸಿಕೊ'ದ ಯಶಸ್ವಿನ ಕತೆಗಳು ನಮ್ಮ ಬೂರ್ಝ್ವಾ ಮಾಧ್ಯಮಗಳ ದಿನನಿತ್ಯದ ಮಾತಾಗಿ ಹೋಗಿದೆ. ಅಮೆರಿಕ ಖಂಡದಲ್ಲಿರುವ ಮೆಕ್ಸಿಕೊ ದೇಶ ನಾಫ್ತಾ(North Atlantic Free Trade Area) ಒಪ್ಪಂದದ ಮೂಲಕ ತನ್ನ ಆರ್ಥಿಕವನ್ನು ಅಮೆರಿಕಾದ ಆರ್ಥಿಕದೊಳಗೆ ವಿಲೀನಗೊಳಿಸಿದೆ ಎಬಂತಹ ಮಟ್ಟಕ್ಕೆ ಹೋಯಿತು. ಅಲ್ಲಿ ವಿದೇಶಿ ಹಣಕಾಸು ಹರಿದು ಬರಲು ಅದು ಬಡ್ಡಿದರವನ್ನು ಹೆಚ್ಚಾಗಿಯೇ ಇರಿಸಿತ್ತು.

ಹಾಟ್ ಮನಿಯ ಹೊಳೆ

1991-93ರ ಅವಧಿಯಲ್ಲಿ ಜಾಗತಿಕವಾಗಿ ಹಿಂಜರಿತವಿದ್ದುದರಿಂದ ಬಂಡವಾಳಿಗರು ಎಲ್ಲಿ ಹಣ ಹೂಡುವುದೆಂದು ಚಿಂತೆ ಮಾಡುತ್ತಿದ್ದರು. ಮೆಕ್ಸಿಕೊ ಅವರಿಗೆ ಆಕರ್ಷಕವಾಗಿ ಕಂಡಿತು. ಇದರಿಂದಾಗಿ ಮೆಕ್ಸಿಕೊ ದೇಶದ ಚಾಲ್ತಿ ಖಾತೆ ಖೋತಾ ಜೂನ್ 1994 ಕ್ಕೆ ಕೊನೆಗೊಂಡ ವರ್ಷದಲ್ಲಿ 26 ಶತಕೋಟಿ ಡಾಲರುಗಳಿದ್ದರೂ ಆದರ ವಿದೇಶೀ ವಿನಿಮಯಗಳು 25 ಶತಕೋಟಿ ಡಾಲರುಗಳಷ್ಟಿತ್ತು ಮಾರುಕಟ್ಟೆಯಲ್ಲಿನ ಉಬ್ಬರ, ಹಣಕಾಸಿನ ಹೊಳೆ ನಾಫ್ತಾ ಇವೆಲ್ಲ ಸೇರಿ ಮೆಕ್ಸಿಕೊ ಯಶಸ್ವಿನ ಕತೆಯಾಯಿತು. ಬಹಳ ದಿನಗಳಿಂದ ಯಶಸ್ವಿನ ಕತೆಗಾಗಿ ಕಾಯುತ್ತಿದ್ದ ಬಂಡವಾಳಿಗರಿಗೆ ಅಂತಹ ಉದಾಹರಣೆ ಇಲ್ಲಿದೊರೆಯಿತು. ಸಾಲದ ಬಿಕ್ಕಟ್ಟು ಕಂಡ ದೇಶ ಹಣದುಬ್ಬರ ಮತ್ತು ಹಣದ ಬೆಲೆಯ ದೌರ್ಬಲ್ಯ ಕಂಡ ದೇಶದಲ್ಲಿ ಈ ಸುಧಾರಣೆ ಆರ್ಥಿಕದ ಉನ್ನತಿಯಂತೆ ಕಂಡುಬಂದಿತ್ತು.

ಆದರೆ ಒಟ್ಟಾರೆಯಾಗಿ ಹೇಳುವುದಾದರೆ ಈ ರಚನಾತ್ಮಕ ಹೊಂದಾಣಿಕೆಯ ಸಮಸ್ಯೆಯೆಂದರೆ ಜನರ ಬದುಕಿನ ಮಟ್ಟ ಸುಧಾರಿಸದೇ ಇರುವುದು ವ್ಯಾಪಾರ ಬಾಕಿ ಬಿಕ್ಕಟ್ಟು ಹಾಗೇ ಉಳಿಯುತ್ತದೆ. ಅಥವಾ ಹೆಚ್ಚಾಗುತ್ತದೆ. ಆಗ ಹಿಂಜರಿತ ಬರುವ ಕ್ರಮಗಳನ್ನು ಕೈಗೊಳ್ಳ ಬೇಕಾಗುತ್ತದೆ. ಬಡತನ ನಿರುದ್ಯೋಗ ಹೆಚ್ಚುತ್ತದೆ. ಜನರ ನೋವು ಹೆಚ್ಚುತ್ತದೆ. ಕೆಲವೇ ಕೆಲವು ಶ್ರೀಮಂತರಿಗ ಮಾತ್ರ ಇದು ಅನುಕೂಲವಾಗಿರುತ್ತದೆ.

ಮೆಕ್ಸಿಕೊದಲ್ಲಿ ಆಗಿದ್ದು ಇದೇ. ಐಷಾರಾಮಿಗಳ ಭೋಗದ ವಸ್ತುಗಳ ಆಮದಿನಿಂದ ವ್ಯಾಪಾರ ಬಾಕಿ 1991ರಲ್ಲಿ 11.3 ಶತಕೋಟಿ ಡಾಲುಗಳಷ್ಟಿದದ್ದು 1992ರಲ್ಲಿ 20.7 ಶತಕೋಟಿ ಡಾಲರುಗಳಿಗೆ ಏರಿತು. 1994 ರಲ್ಲಿ ಇದು 30 ಶತಕೋಟಿ ಡಾಲರುಗಳಿಗೆ ಏರಿತು. ಈ ನಾಲ್ಕು ವರ್ಷಗಳಲ್ಲಿ ಮೆಕ್ಸಿಕೊ ದೇಶದೊಳಕ್ಕೆ ಹರಿದ 81.50 ಶತಕೋಟಿ ಡಾಲರುಗಳನ್ನು ಬಳಸಿತು.ಇದರಲ್ಲಿ ಭೋಗದ ವಸ್ತುಗಳ ಆಮದಿನದೇ ದೊಡ್ಡ ಪಾಲು.

ದೇಶದೊಳಗೆ ಹರಿದ ವಿದೇಶೀ ವಿನಿಮಯಒಂದು ಭಾಗ ನಿಧಿಗೆ ಹೋಯಿತು. ಒಂದು ಭಾಗ ಶ್ರೀಮಂತರ ಬೋಗ ವಸ್ತುಗಳಿಗೆ ಇನ್ನೊಂದು ಬಾಗ ಅಲ್ಲಿನ ಉದ್ಯಮಗಳನ್ನು ಹಾಳುಗೆಡವಲು ಹೋಯಿತು.

> **ಮೆಕ್ಸಿಕೊ ಆರ್ಥಿಕ ಈಗ ಬಿಕ್ಕಟ್ಟಿನಿಂದ ತತ್ತರಿಸುತ್ತಿದೆ. ಅಲ್ಲಿನ ಜನ ಅಪಾರ ನೋವು ಅನುಭವಿಸುತ್ತಿದ್ದಾರೆ. ಮೆಕ್ಸಿಕೋದ ದಾರಿಯಲ್ಲೆ ಉದಾರೀಕರಣ ಜಾಗತೀಕರಣ ಮಾಡುತ್ತಿರುವ ಭಾರತದ ಸರದಿ ಮುಂದಿನದೆ? ಇದು ಪ್ರಶ್ನೆ. ಉದಾರೀಕರಣವಾದಿಗಳು ಅಲ್ಲ ಎನ್ನತ್ತಾರೆ. ಆದರೆ ಭಾರತದ ಮುಂದಿನ ಗತಿಯೂ ಅಂತಹದ್ದೇ ಆಗುತ್ತದೆ ಎಂಬ ಸೂಚನೆಗಳಂತೂ ಆಗಲೇ ದೊರೆಯತೊಡಗಿದೆ.**

ಇದು ಹಿನ್ನಲೆ

ಆದರೆ ಇಂದಿನ ಬಿಕ್ಕಟ್ಟು ಹೇಗೆ ಉಂಟಾಯಿತು? ಅದೂ ಒಂದು ಕತೆ.


1994ರ ಮೊ ದಲ ಭಾಗದಲ್ಲಿ ಚಿಯಾಪಾಸ್‌ನ ಬಡಜನತೆ ಬಂಡೆದ್ದರು ಇದರಿಂದಲೋ ಅಥವಾ ಬೇರೆ ಕಾರಣಕ್ಕೋ ವಿದೇಶೀ ಹಣದ ಹೊಳೆ ಬತ್ತಿ ಹೋಯಿತು. ಚಾಲ್ತಿ ಖಾತೆಯಲ್ಲಿನ ಖೋತಾ ಹೆಚ್ಚುತ್ತಾ ಹೋಯಿತು. ವಿದೇಶೀ ವಿನಿಮಯ ಶಿಲ್ಕು 25 ಶತಕೋಟಿ ಡಾಲರುಗಳಿಂದ 6.5 ಶತಕೋಟಿ ಡಾಲರುಗಳಿಗೆ ಇಳಿಯಿತು. ಇದನ್ನು ಸರಿಪಡಿಸಲು ಸರ್ಕಾರ ಅಲ್ಲಿನ ಹಣವಾದ ಪೆಸೋದ ಅಪಮೌಲ್ಯೀಕರಣ ಮಾಡಿತು. ಇದರಿಂದ ಬಂಡವಾಳ ದೊಡ್ಡ ಪ್ರಮಾಣದಲ್ಲಿ ಇಲ್ಲಿಂದ ಹೊರ ಹೋಗತೋಡಗಿತು. ಶೇರು ಮಾರುಕಟ್ಟೆ ಕುಸಿಯಿತು. ಆಗ ಕೂಲಿಯಲ್ಲಿ ಕಡಿತ, ಸಾರ್ವಜನಿಕ ವೆಚ್ಚದಲ್ಲಿ ಕಡಿತ, ದೇ
ಆಸ್ತಿಯನ್ನು ವಿದೇಶೀಯರಿಗೆ ಒತ್ತೆಯಿ
ವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಬೇ
ಯಿತು. ಮೆಕ್ಸಿಕೊ ದೇಶದ ತೈಲ ಆದಾ
ವೆಲ್ಲ ಅಮೆರಿಕ ಸರ್ಕಾರಕ್ಕೆ ಹೋಯಿ
ಇದು ಮೆಕ್ಸಿಕೊ ತಾನು ಹಣಕಾಸು ನೆ
ಪಡೆಯಲು ತೆರಬೇಕಾದ ಬೆಲೆ.

ಈಗ ಬ್ಯಾಂಕ್-ಫಂಡ್‌ಗಳು ಈ
ಟ್ಟಿಗೆ ಮೆಕ್ಸಿಕೊ ಸರ್ಕಾರವೇ ಹೊಣೆ ಎಂ
ಗೂಬೆ ಕೂರಿಸುವ ಪ್ರಯತ್ನದಲ್ಲಿವೆ ಅ
ಕದ ಅರ್ಥಶಾಸ್ತ್ರಜ್ಞರೆಲ್ಲ ಬ್ಯಾಂಕ್ -ಫ
ಗಳು ನಡೆವ ದಾರಿಯಲ್ಲೇ ನಡೆಯುವ
ವರು ಈಗ ಇವರೆಲ್ಲ ರಚನಾತ್ಮಕ ಹೊಂ
ಣಿಕೆಯಲ್ಲಿ ತಪ್ಪೇನಿಲ್ಲ, ಆದರೆ ಅದ
ಅನುಷ್ಠಾನಗೊಳಿಸಿದ ರೀತಿ ಸರಿಯಿಲ್ಲ ಎ
ತ್ತಿದ್ದಾರೆ. ಐಎಂಎಫ್ ಆಗ ತಾನು ಹಿಂದೆ
ಮೆಕ್ಸಿಕೊ ಸರ್ಕಾರಕ್ಕೆ ಚಾಲ್ತಿ ಖಾತೆ
ಖೋತಾವನ್ನು ಕಡಿಮೆಮಾಡಲು ಸ
ಮಾಡಿದ್ದೆ ಆದರೆ ಆ ಸರ್ಕಾರ
ಮಾತುಕೇಳಲೇ ಇಲ್ಲ ಎನ್ನುತ್ತಿದೆ.

ಆದರೆ ಐಎಂಎಫ್‌ನ ಈ ವಾದದ
ಹುರುಳೇನಿಲ್ಲ. ಆಮದನ್ನು ನಿರ್ಭಂಧಿಸ
ಬಿಟ್ಟಾಗ ವಿದೇಶೀ ವ್ಯಾಪಾರ ಬಾಕಿ ಹೆ
ಗುತ್ತಲೇ ಹೋಗುತ್ತದೆ. ರಫ್ತು ದೊ
ಪ್ರಮಾಣದಲ್ಲಿ ಒಳ್ಳೆಯ ಬೆಲೆಗೆ ಆ
ವ್ಯಾಪಾರ ಬಾಕಿ ಉಳಿಯುವುದಿಲ್ಲ ಮೆ
ಕೋದಲ್ಲಿ ಆದದ್ದೂ ಇದೇ ಆಮ
ಹೆಚ್ಚಾಯಿತು. ರಫ್ತು ಅದೇ ಪ್ರಮಾಣದ
ಹೆಚ್ಚಲಿಲ್ಲ ಇದರಿಂದ ನಿರುದ್ಯೋಗ ಬಡತ
ಎರಡೂ ಹೆಚ್ಚಿತು.

ಆದ್ದರಿಂದ ರಚನತ್ಮಾಕ ಹೊಂದಾ
ಕಾರ್ಯಕ್ರಮದಲ್ಲಿ ನ್ಯೂನತೆಗಳಿರುವಾ
ಮೆಕ್ಸಿಕೋ ಸರ್ಕಾರ ಅದನ್ನು ಮಾಡಬೇ
ಗಿತ್ತು ಇದನ್ನು ಮಾಡಬೇಕಾಗಿತ್ತು ಎಂದ
ಅದಕ್ಕೆ ಅರ್ಥವಿಲ್ಲ.

ಹಾಳಿಗಳೇ ಸಾಲುತ್ತಿಲ್ಲ!



ಬೆಲೆಯೇರಿಕೆ! ಹಣದುಬ್ಬರ!

ವ್ಯಂಗ್ಯಚಿತ್ರಕಾರರು ಕಂಡಂತೆ



ಬೇಸರ ಬೇಡ ಸಾರ್! ಅದು ಪೂರ್ಣ ಹತೋಟಿಯಲ್ಲಿದೆ! 9.10% ಇಟ್ಟಿದ್ದೆವು. ನಂತರ 9.75% ಇಟ್ಟೆವು. ಆಮೇಲೆ 10.7% ದಲ್ಲಿ ಬ್ರೇಕ್ ಹಾಕಿದೆವು! ಈಗ 11.75% ದಲ್ಲಿ ನಿಲ್ಲಿಸ್ತೇವೆ.....



ಬೆಲೆಯೇರಿಕೆಯ ಬಗ್ಗೆ ಗೊಣಗಾಟ ನಿಲ್ಲ
ನೋಡು, ಚಿತ್ರದ ಬೆಳಕಿನ ಭಾಗ
ವಿದೇಶ ವ್ಯಾಪಾರ ಹೆಚ್ಚಿದೆ. ಜಿ.ಎ
ಹೆಚ್ಚಿದೆ. ವಿದೇಶೀ ವಿನಿಮಯ 20 ಶತಕೋ
ಡಾಲರುಗಳಾಗಿದೆ. ಸಾಲದೇ?

ಟೈಮ್ಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್

'ಮೆಕ್ಸಿಕೋ' ಇತ್ತೀಚಿನವರೆಗೆ ಉದಾರೀಕರಣ ಜಾಗತೀಕರಣವಾದಿಗಳಿಂದ "ಯಶಸ್ಸಿನ ಕಥೆ"ಯಾಗಿತ್ತು ಈಗ ಅದು ಈ ನೀತಿಗಳ ಅನಾಹುತದ ಕಥೆಯಾಗಿದೆ. ಉದಾರೀಕರಣವಾದಿಗಳಲ್ಲೂ ಹಲವರನ್ನು ಯೋಚನೆಗೀಡು ಮಾಡಿದ ಕಥೆಯಾಗಿದೆ. ಎಡ ಶಕ್ತಿಗಳ ಆತಂಕ ಎಷ್ಟು ನಿಜ ಎಂದು ಸಾಗುತ್ತಿರುವ ಕಥೆಯಾಗಿದೆ.

ಮೂತ್ರ ಪಿಂಡಗಳ ಕಳ್ಳತನದ ಉದಾರೀಕರಣ !!



-ಜೆ.ಎಸ್.ಮಣಿ

ಒಟ್ಟಾರೆ ಹೇಳುವುದಾರೆ ರಾಜ ಬಿದ್ದರೆ ನಾನುಗೆದ್ದೆ ರಾಣಿ ಬಿದ್ದರೆ ನೀನು ಸೋತೆ ಎಂಬಂತೆ ಐಎಂಎಫ್ ನ ವಾದಗಳು.

ಆರ್ಥಿಕದ ಜಾಗತೀಕರಣ ಮಾಡತೊಡ ದ ಮೇಲೆ ಸರ್ಕಾರ ಮಧ್ಯಪ್ರವೇಶ ಮಾಡುವ ಅಗತ್ಯತೆ ಕಡಿಮೆ ಯಾಗುತ್ತದೇ ಎಂದರ್ಥ. ಜಾಗತೀಕರಣವೆಂದರೆ ಖಾಸಗೀಕರಣವಾಗಿರು ವುದರಿಂದ ಸರ್ಕಾರದ ಹಸ್ತಕ್ಷೇಪಕ್ಕೆ ಅವಕಾಶ ಇಲ್ಲವಾಗುತ್ತದೆ. ಹೀಗಿರುವಾಗ ಸರ್ಕಾರ ಅದನ್ನು ಮಾಡಬೇಕಾಗಿತ್ತು,ಇದನ್ನು ಮಾಡಬೇಕಾಗಿತ್ತು ಎಂಬುದಕ್ಕೆ ಏನರ್ಥ? ಇದಲ್ಲದೆ ಇನ್ನು ಎರಡು ದುಷ್ಪರಿಣಾಮಗಳು ಇಲ್ಲಿವೆ. ಈ ಜಾಗತೀಕರಣ ಮಾಡುತ್ತಿರುವ ಭಾರತದ ಸರದಿ ಮುಂದಿನದೆ? ಇದು ಪ್ರಶ್ನೆ. ಉದಾರೀಕರಣ ವಾದಿಗಳು ಅಲ್ಲ ಎನ್ನುತ್ತಾರೆ. ಆದರೆ ಭಾರತದ ಮುಂದಿನ ಗತಿಯೂ ಅಂತಹದ್ದೇ ಆಗುತ್ತದೆ ಎಂಬ ಸೂಚನೆಗಳಂತೂ ಆಗಲೇ ದೊರೆಯತೊಡಗಿದೆ.

ನಮ್ಮ ಶೇರು ಮಾರುಕಟ್ಟೆಗೂ ವಿದೇಶೀ ಬಂಡವಾಳ ಅಪಾರವಾಗಿ ಹರಿದು ಬರುತ್ತಿದೆ. ನಮ್ಮ ವಿದೇಶೀ ವಿನಮಯ ಶಿಲ್ಕು ಸಹ ಜಾಸ್ತಿಯಾಗುತ್ತಲೇ ಇದೆ. ಆದರೆ ಇದು ರಫ್ತುಆಧಾಯದಿಂದ ಆದದ್ದಲ್ಲ ಜೂಜುಕೋರರ ಹಣ ಹೂಡಿಕೆಯಿಂದ ಆದದ್ದು ವ್ಯಾಪಾರ ಬಾಕಿ ಹೆಚ್ಚುತ್ತಲೇ ಇದೆ. ಕಾರಣ ಭೋಗ ವಸ್ತುಗಳ

ಈ ಜಾಗತೀಕರಣದಿಂದ ಖಾಸಗೀಕರಣದಿಂದ ಮೊದಲೇ ಹೇಳಿದಂತೆ ಜನರಿಗೆ ಲಾಭವಾಗುವುದಿಲ್ಲ, ವಿದೇಶೀ ಬಂಡವಾಳ ಹರಿದು ಬರುವುದರಿಂದ ಜನರಿಗೆ ಲಾಭವಾಗುವುದಿಲ್ಲ ಆದರೆ ಈ ವ್ಯವಸ್ಥೆ ಕುಸಿದು ಬಿದ್ದಾಗ ಜನರಿಗೆ ಇನ್ನು ಹೆಚ್ಚು ಹಾನಿಯಾಗುತ್ತದೆ.

ಒಂದ ಖಾಸಗೀಕರಣದಿಂದ ಮೊದಲೇ ಹೇಳಿದಂತೆ ಜನರಿಗೆ ಲಾಭವಾಗುವುದಿಲ್ಲ, ವಿದೇಶೀ ಬಂಡವಾಳ ಹರಿದು ಬರುವುದರಿಂದಜನರಿಗೆ ಲಾಭವಾಗುವುದಿಲ್ಲ ಆದರೆ ಈ ವ್ಯವಸ್ಥೆ ಕುಸಿದು ಬಿದ್ದಾಗ ಜನರಿಗೆ ಇನ್ನು ಹೆಚ್ಚು ಹಾನಿಯಾಗು ದೆ.

ಎರಡನೇಯದಾಗಿ, ಜೂಜುಕೋರರು ದೇಶದೊಳಗೆ ಹಣದ ಹೊಳೆ ಸರಿಸುತ್ತಿರುತ್ತಾರೆ. ಅವರು ಮುಖ ತಿರುಗಿಸಿದರೆ ಇವರನ್ನು ಒಲೈಸಲು ಇನ್ನು ಹೆಚ್ಚಿನ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಅವರು ಕೇಳಿದ ರಿಯಾಯತಿಗಳನ್ನೆಲ್ಲ ನೀಡಬೇಕಾಗುತ್ತದೆ. ಅದು ದೇಶದ ಜನರಿಗೆ ಇನ್ನು ಹಾನಿಕಾರಕ. ಇದೆಲ್ಲ ಮುಕ್ತ ಮಾರುಕಟ್ಟೆ ನೀತಿ ಅನುಸರಿಸಿದ ಮೆಕ್ಸಿಕೊ ಆರ್ಥಿಕ ಈಗ ಬಿಕ್ಕಟ್ಟಿನಿಂದ ತತ್ತರಿಸುತ್ತಿದೆ. ಅಲ್ಲಿನ ಜನ ಅಪಾರ ನೋವು ಅನುಭವಿಸುತ್ತಿದ್ದಾರೆ. ಮೆಕ್ಸಿಕೋದ ಏದುರಿಯಲ್ಲೆ ಉದಾರೀಕರಣ ಜಾಗತೀಕರಣ. ಆಮದು ಹೆಚ್ಚಿರುವುದು ಬಳಕೆ ವಸ್ತುಗಳ ಆಮದನ್ನು ಇನ್ನೂ ಉದಾರೀಕರಿಸಲು ಅಪಾರ ಒತ್ತಡ ಸರ್ಕಾರದ ಮೇಲೆ ಬಹುರಾಷ್ಟ್ರೀಯ ಕಂಪನಿಗಳು ಬ್ಯಾಂಕ್-ಫಂಡ್‌ಗಳಿಂದ ಬರುತ್ತಿವೆ.

ಹಿಂದಿನ ಹಣಕಾಸು ಕಾರ್ಯದರ್ಶಿ ಗೀತಾಕೃಷ್ಣನ್ ಉದಾರೀಕರಣವಾದಿ. ಈತ ಕಾರ್ಯದರ್ಶಿಯಾಗಿದ್ದ ಸಮಯದಲ್ಲೇ ಆರ್ಥಿಕ ಸುಧಾರಣೆ ಪ್ರಾರಂಭವಾದದ್ದು ಈತ ಉದಾರೀಕರಣ ಬಹಳವಾಗಿ ಸಮರ್ಥಿಸಿಕೊಂಡವರು.

ಈಗ ಈತ ಐಎಂಎಫ್‌ನ ಕಾರ್ಯನಿರ್ದೇಶಕ. ಇಂತಹವರು ಈಗ ಭಾರತ ಸರ್ಕಾರಕ್ಕೆ ಪತ್ರ ಬರೆದಿದ್ದಾರಂತೆ-ಉದಾರೀಕರಣವನ್ನು ಹೀಗೆ ಮುಂದುವರಿಸಿದರೆ ದೇಶಕ್ಕೆ ಹಾನಿ ಎಂದು. ಇಷ್ಟು ದೊಡ್ಡ ಉದಾರೀಕರಣವಾದಿಯೇ ಉದಾರೀಕರಣದ ವಿರುದ್ಧ ಮಾತನಾಡಿದ್ದಾರೆಂದರೆ ಹೊಸ ಆರ್ಥಿಕ ನೀತಿ ನಿಜಕ್ಕೂ ಹಾನಿಕಾರಕವಿರಬೇಕಲ್ಲವೆ?

ಹೊಸ ಆರ್ಥಿಕ ನೀತಿಗಳ ನಿಜ ಹೂರಣ ಈಗ ಬಟ್ಟ ಬಯಲಾಗಿದೆ. ಹಣದುಬ್ಬರ ತಡೆಯುವುದಕ್ಕೆ ಪ್ರಾಧಾನ್ಯತೆ ನೀಡುತ್ತೇವೆಂದ, ಸತತವಾಗಿ ಬೆಲೆಯೇರುತ್ತಿದ್ದರೂ ಹಣದುಬ್ಬರ ಎರಡಂಕಿಯ ಒಳಗೇ ಇರುವಂತೆ ಮಾಡಿದ್ದೇವೆ ಎಂದು ಬೆನ್ನು ತಟ್ಟಿಕೊಳ್ಳುತ್ತಿದ್ದ ಸರಕಾರೀ ವಕ್ತಾರರೂ ಈಗ ಹಣದುಬ್ಬರ ಎರಡಂಕಿಗೆ ಬಂದು 11%ವನ್ನು ದಾಟಿ ಈಗಲೂ ಏರುಮುಖವಾಗಿಯೇ ಇರುವುದನ್ನು ಒಪ್ಪಿಕೊಳ್ಳಲೇ ಬೇಕಾಗಿದೆ. ಆದ್ದರಿಂದ ಈಗ ಯಾವ ದೈನಿಕವನ್ನು ನೋಡಿದರೂ ಹಣದುಬ್ಬರದ ಬಗ್ಗೆ ವ್ಯಂಗ್ಯ ಚಿತ್ರ ಕಾಣ ಸಿಗುವುದು ಖಂಡಿತ-ಹೊಸ ಆರ್ಥಿಕ ನೀತಿಗಳನ್ನು ಹಾಡಿ ಹೊಗಳಿದ ಪತ್ರಿಕೆಗಳಲ್ಲೂ. ಇಲ್ಲಿ ಅಂತಹ ನಾಲ್ಕು ವ್ಯಂಗ್ಯ ಚಿತ್ರಗಳಿವೆ.

ಬೇರೆಲ್ಲಾ ಸಮಸ್ಯೆಗಳನ್ನೂ ಕೆಳಕ್ಕೆ ತಳ್ಳಿದೆ!



ಎಕನಾಮಿಕ್ ಟೈಮ್ಸ್‌ನಲ್ಲಿ ಉನ್ನಿಯವರ ವ್ಯಂಗ್ಯ

ಇದು ಬಹಳ ಉತ್ಪ್ರೇಕ್ಷೆ ಎನಿಸಬಹುದಲ್ಲವೆ?

ಎಲ್ಲಿಯ ಉದಾರೀಕರಣ ಎಲ್ಲಿಯ ಮೂತ್ರಪಿಂಡ ಕಳ್ಳತನ ಎಂದು ನೀವು ಕೇಳಬಹುದಲ್ಲವೆ. ನಿಜ ಮೇಲಿಂದ ನೋಡಿದರೆ ಈ ಎರಡೂ ಒಂದಕ್ಕೊಂದು ಸಂಬಂಧವಿಲ್ಲವೆಂದು ಕಾಣಬಹುದು. ಆಳಕ್ಕೆ ಇಣುಕಿದರೆ ಈ ಎರಡಕ್ಕೂ ನಿಕಟ ಸಂಬಂಧವಿದೆ.

ರಾಜ್ಯದಲ್ಲಂತೂ ಈ ಮೂತ್ರ ಪಿಂಡ ಕಳುವಿನ ಸುದ್ದಿ ಅತ್ಯಂತ ದೊಡ್ಡ ಮತ್ತು ಭಯಾನಕ ಸುದ್ದಿಯಾಗಿಬಿಟ್ಟಿದೆ. ಆಗಬೇಕಾಗಿರುವುದು ಸಹಜವೂ ಹೌದು. ಆದರೆ ಈ ಕಳ್ಳತನ ವರ್ಷಗಟ್ಟಲೆ ಸಮಯದಿಂದ ನಡೆಯುತ್ತಿದ್ದರೂ ಈಗ ಹೊರಬಿದ್ದಿದೆ ಯಾಕೆ?

ಈ ಸುದ್ದಿಗಳೇ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಬಡಜನರ ದುಡಿವ ಜನರ ಮೂತ್ರಪಿಂಡಗಳೇ ಕಳುವಾದದ್ದು.

ಬಡತನಕ್ಕೂ ಮೂತ್ರ ಪಿಂಡಗಳ ಕಳುವಿಗೂ ನೇರ ಸಂಬಂಧವಿದೆ ಎಂಬುದು ಸ್ಪಷ್ಟ ತಾನೆ? ಬಡತನ ನಿರುದ್ಯೋಗ ದಿಂದ ಬಂದದ್ದು ಉದಾರೀಕರಣ ಏನು ಮಾಡುತ್ತದೆ. ಉದಾರೀಕರಣವೆಂಬ ಪ್ರಹಸನ ಪ್ರಾರಂಭವಾದಾಗಿನಿಂದಲೂ ನಾವು ನೋಡುತ್ತ ಬಂದಿರುವುದು ಇದು ಬಡತನ, ನಿರುದ್ಯೋಗ ಹೆಚ್ಚಿಸಿ ಕೆಲವೇ ಕೆಲವರ ಕೈಯಲ್ಲಿ ಸಂಪತ್ತಿನ ಕೇಂದ್ರೀಕರಣವಾಗುವಂತೆ ಮಾಡುತ್ತದೆ. ಆದ್ದರಿಂದಲೇ ಉದಾರೀಕರಣಕ್ಕೂ ಮತ್ತು ಮನುಷ್ಯರ ಅಂಗಾಂಗ ಕಳತನಕ್ಕೂ ಸಂಬಂಧವಿದೆ ಎನ್ನುವುದು.

ಬಡತನ ಹೆಚ್ಚಿ ಕೆಲವೇ ಕೆಲವು ಜನರ ಕೈಗಳಲ್ಲಿ ದೇಶದ ಸಂಪತ್ತೆಲ್ಲ ಕೇಂದ್ರೀಕೃತಗೊಂಡಾಗ ಈ ಬಡಜನತೆಗೆ ರಾಜಕೀಯ ಧ್ವನಿ ಇರುವುದಿಲ್ಲ. ಇದು ಬೆಳೆದು ಬರಬೇಕಾಗುತ್ತದೆ. ಹಾಗೆ ಅದು ಬೆಳೆದು ಬರುವವರೆಗೆ ಜನತೆ ಅಪಾರ ನೋವನ್ನು ಅನುಭವಿಸಬೇಕಾಗುತ್ತದೆ.

ಬಡತನ-ನಿರುದ್ಯೋಗಗಳಲ್ಲೇ ಈ ಸಮಸ್ಯೆಯ ಬೇರು ಇದೆ ಎಂಬುದು ಸ್ಪಷ್ಟ. ಉದಾರೀಕರಣಕ್ಕಾಗಿ ಹಲವು ಕಾನೂನುಗಳನ್ನು ಮಾಡುವ ಸರ್ಕಾರ ವಿಶ್ವ-ವ್ಯಾಪಾರ ಸಂಘಟನಾ ಗ್ಯಾಟ್‌ಗಳನ್ನು ಸೇರಲು ಹಲವು ಕಾನೂನುಗಳನ್ನು ಮಾಡುವ ಸರ್ಕಾರಕ್ಕೆ ಮನುಷ್ಯನ ಅಂಗಾಗಂಗಳ ವ್ಯಾಪಾರವನ್ನು ವಾಣಿಜ್ಯಕರಣವನ್ನು ನಿರ್ಬಂಧಿಸುವ ಕಾನೂನು ಮಾಡಬೇಕೆಂಬ ಯೋಚನೆ ಹಲವು ಅಮಾಯಕರು ತಮ್ಮ ಮೂತ್ರ ಪಿಂಡಿಗಳನ್ನು ಕಳೆದುಕೊಂಡ ನಂತರವೇ ಬರುತ್ತದೆ.

ಬಂಡವಾಳಿಗರ ಲಾಭ ಪಿಪಾಸೆ ತಣಿಸಲು ಬಂಡವಾಳ ಹೂಡಿಕೆ ಲಾಭ, ತೆರಿಗೆ ವಿನಾಯಿತಿ ಇತ್ಯಾದಿ ವಿಚಾರಗಳಲ್ಲಿ ಮುಳುಗಿರುವ ಸರ್ಕಾರಕ್ಕೆ ಮಾನವೀಯ ಸಮಸ್ಯೆಗಳ ಬಗ್ಗೆ ಗಂಭೀರವಾಗಿ ಚಿಂತಿಸಿ ಪರಿಹಾರ ಕಂಡು ಹಿಡಿವ ವ್ಯವಧಾನ ಎಲ್ಲಿಯದು?

ಹೊಸ ಆಮದು ರಫ್ತು ನೀತಿ

ಉದಾರೀಕರಣ ಪ್ರಾರಂಭವಾದಂದಿನಿಂದ ಈ ಆಮದು-ರಫ್ತು ನೀತಿ ಬದಲಾಗುತ್ತಲೇ ಬಂದಿದೆ. (ಪ್ರತಿ ಬದಲಾವಣೆಯ ಹಿನ್ನೆಲೆಯಲ್ಲಿ ವಿಶ್ವ ಬ್ಯಾಂಕ್, ಐ.ಎಂ.ಎಫ್ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಒತ್ತಡ ವಿರುವುದು ಎಲ್ಲರಿಗೂ ಗೊತ್ತೇ ಇದೆ. ಆದ್ದರಿಂದಲೇ ಪ್ರತಿಸಾರಿ ಈ ನೀತಿ ಬದಲಾವಣೆ ಆದಾಗಲೂ ಆಮದನ್ನು ಉದಾರೀಕರಿಸಲಾಗಿದೆ. ಬಹುರಾಷ್ಟ್ರೀಯ ಕಂಪನಿಗಳಿಗೆ ಹಲವು ರಿಯಾಯಿತಿಗಳನ್ನು ನೀಡಲಾಗಿದೆ. ಆದರೂ ಇವರ ಹಸಿವು ಇಂಗಿಲ್ಲ.

ಈಗ ಮತ್ತೆ ಮಾರ್ಚ್ ಕೊನೆಯ ವೇಳೆಗೆ ಹೊಸ ಆಮದು-ರಫ್ತು ನೀತಿ ಬರಲಿದೆಯೆಂತೆ. ಈ ಸಾರಿಯ ನೀತಿ ಇನ್ನೂ ಹೆಚ್ಚು ಉದಾರೀಕರಣ ಮಾಡಲಿದೆ.

ಬಳಕೆ ವಸ್ತುಗಳ ಉದಾರೀಕರಣದ ಬಗ್ಗೆ ಬಹಳ ದಿನಗಳಿಂದ ಒತ್ತಡ ಬೀಳುತ್ತಲೇ ಇದೆ. ಈ ಸಾರಿ ಈ ಸರಕುಗಳ ಆಮದನ್ನು ಉದಾರೀಕರಿಸಿಧರೆ ನಮ್ಮದೇಶೀ ಉದ್ಯಮಗಳ ಮೇಲೆ ಇದು ತೀವ್ರ ತರಹದ ಅನಾನುಕೂಲಕರ ವಾತಾವರಣ ಸೃಷ್ಟಿ ಮಾಡುತ್ತದೆ. ಮುಖ್ಯವಾಗಿ ನಮ್ಮದೇಶದ ಆರ್ಥಿಕದ ಬೆನ್ನೆಲುಬು ಎನ್ನಬಹುದಾದ ಸಣ್ಣ ಕೈಗಾರಿಕೆಗಳು ಈ ಕ್ರಮದಿಂದ ತತ್ತರಿಸುತ್ತವೆ. ಈಗಾಗಲೇ ಉದಾರೀಕರಣದಿಂದ ಸಣ್ಣ ಉದ್ದಿಮೆಗಳಲ್ಲಿ ರೋಗಪೀಡೆ ಬಹಳವಾಗಿದೆ. ಆಮದು ಉದಾರೀಕರಣದಿಂದ ಇದು ಇನ್ನೂ ಉಲ್ಬಣಗೊಂಡು ಬಡತನ ನಿರುದ್ಯೋಗ ಹೆಚ್ಚಾಗುತ್ತದೆ.

ಆಗ ದುಡಿವ ಜನ ಮೂತ್ರಪಿಂಡ ಮಾರಾಟ ಮಾಡಬೇಕಾಗುತ್ತದೆನೊ? ಉದ್ಯೋಗವಿಲ್ಲದವ ಇದಕ್ಕೆಮಾತ್ರ ಲಾಯಕ್ಕು ತಾನೆ?

ಹಾಲೋಗರವಾಗಿ ಬರುವ ಸಾಲ

ವಿಶ್ವ ಬ್ಯಾಂಕ್ ಭಾರತಕ್ಕೆ 700 ದಶಲಕ್ಷ ಡಾಲರುಗಳ ಆರ್ಥಿಕ ವಲಯದ ಸಾಲ ನೀಡಲಿದೆ. ಇದುವರೆಗೆ ಯಾವದೇ ದೇಶಕ್ಕೆ ನೀಡಲಾಗಿರುವ ಅತ್ಯಧಿಕ ಮೊತ್ತದ ಸಾಲವಂತೆ ಇದು ಈ ಸಾಲದ ಉದ್ದೇಶ?

ಭಾರತ ಆರ್ಥಿಕ ವ್ಯವಸ್ಥೆಗೆ ಹೆಚ್ಚಿನ ವಿತರಣಾ ಸಾಮರ್ಥ್ಯ ಸ್ಪರ್ಧಾತ್ಮಕತೆ ನೀಡಲು ಸಹಾಯವಾಗುವಂತೆ ಈ ಸಾಲ ನೀಡಲಾಗುತ್ತಿದೆಯಂತೆ. ಮತ್ತು ವಿಮಾ ಕ್ಷೇತ್ರಗಳಲ್ಲಿ ಅಪಾರ ಅವಕಾಶಗಳು ಬಹುರಾಷ್ಟ್ರೀಯ ಕಂಪೆನಿಗಳಿಗೆ ಇವೆ ಎಂಬುದನ್ನು ಅವು ಕಂಡು ಕೊಂಡಿವೆ. ಆದರೆ ಈ ವಲಯಗಳು ಪೂರ್ಣವಾಗಿ ಉದಾರೀಕರಣಗೊಳ್ಳದೆ ಈ ವಿದೇಶೀ ಹಣಕಾಸು ಸಂಸ್ಥೆಗಳಿಗೆ ಲಾಭವಿಲ್ಲ, ತಮಗೆ ಸುಲಭವಾಗಿ ಪ್ರವೇಶ ದೊರೆಯುವಂತೆ ಮಾಡಿಕೊಳ್ಳಲು ಬಹುರಾಷ್ಟ್ರೀಯ ಕಂಪೆನಿಗಳ' ಅನುಕೂಲಕ್ಕಾಗಿ ಈ ಸಾಲ ನೀಡಲಿದ್ದು ವಿಶ್ವ ಬ್ಯಾಂಕ್ ಮುಂದೆ ಬಂದಿರುವುದು ಸ್ಪಷ್ಟವಾಗಿ ಕಾಣುತ್ತದೆ.

ಈ ಸಾಲದ ಷರತ್ತುಗಳೂ ಹೀಗೆಯೇ ಇರುವುದು ಆರು ಸಾರ್ವಜನಿಕ ವಲಯದ ಬ್ಯಾಂಕುಗಳ ಪುನರ್ರಚನೆ ಬ್ಯಾಂಕುಗಳಿಗೆ ತಾಂತ್ರಿಕ ನೆರವು ಇತ್ಯಾದಿಗಳನ್ನು ವಿಶ್ವ ಬ್ಯಾಂಕ್ ಹೇಳುತ್ತದೆ. ಈ ಎಲ್ಲವುಗಳನ್ನು ಅವರ ಅನುನೂಕಲಕ್ಕೆ ತಕ್ಕಂತೆ ಭಾರತ ಸರ್ಕಾರ ಮಾಡಬೇಕು. ಇದಕ್ಕಾಗಿಯೇ ಸಾಲ ನೀಡುತ್ತಿರುವುದು.

ಈ ಹಾಲೋಗರ ಯಾವಾಗ ದೇಶದ ಕಿಬ್ಬದಿಯ ಕೀಲು ಮುರಿಯತೊಡಗುತ್ತದೊ? ಸರ್ವಜ್ಞನೆ ಬಲ್ಲ!

ನಾವು ದರೋಡೆ ಮಾಡಿದರೆ ಅದು ದೇಶದ ಅಭಿವೃದ್ಧಿ

ಅಸೋಸಿಯೇಟೆಡ್ ಚೇಂಬರ್ಸ್ ಆಫ್ ಕಾಮರ್ಸ್ ಎಂಡ್ ಇಂಡಸ್ಟ್ರೀ ಆಫ್ ಇಂಡಿಯಾ (ಅಸೋಚಾಮ್) ಎಂಬ ದೊಡ್ಡ (ಬಂಡವಾಳಿಗರ (ಉದ್ದಿಮೆದಾರರು ಮತ್ತು ವ್ಯಾಪಾರಿಗಳು) ಸಂಘಟನೆಯೊಂದಿದೆ.

ಈ ಸಂಘಟನೆ ದೇಶದ ಎಲ್ಲ ರಾಜಕೀಯ ಪಕ್ಷಗಳಿಗೂ ಆರ್ಥಿಕ ಸುಧಾರಣೆಯ ವಿಷಯದಲ್ಲಿ ರಾಜಕೀಯ ಮಾಡಬೇಡಿ ಎಂಬ ಮನವಿ ಮಾಡಿದೆ.

ನಿಜ ಅರ್ಥದಲ್ಲಿ ದೇಶದ ಅಭಿವೃದ್ಧಿಯನ್ನು ಆರ್ಥಿಕ ಸುಧಾರಣೆ ಸಾಧಿಸುವುದಾಗಿದ್ದಲ್ಲಿ ಇಂತಹ ಮಾತುಗಳಿಗೆ ಅರ್ಥ ಬರಬಹುದಾಗಿತ್ತೇನೊ. ಆದರೆ ಬಂಡವಾಳಿಗರ ಲಾಭಕ್ಕಾಗಿ ಬಹುರಾಷ್ಟ್ರೀಯ ಕಂಪನಿಗಳ ಲಾಭಕ್ಕಾಗಿ ಮತ್ತು ದೇಶದ ಬಡತನ ನಿರುದ್ಯೋಗ ಹೆಚ್ಚಿಸುವ ಸಲವಾಗಿ ನಡೆಸುತ್ತಿರುವ ಆರ್ಥಿಕ ಸುಧಾರಣೆ ಖಂಡಿತವಾಗಿಯೂ ಬೆಂಬಲಾರ್ಹವಲ್ಲ.

ಆರ್ಥಿಕ ಸುಧಾರಣ ವಿರೋಧಿಸಿದವರೆಲ್ಲ ರಾಜಕೀಯ ಮಾಡುತ್ತಿದ್ದಾರೆ. ತಾವು ಬಯಸಿದಂತೆ ಉದಾರೀಕರಣವನ್ನು ಬೆಂಬಲಿಸಿದರೆ ಅದು ಉತ್ತಮ ನಡತೆ ಎಂಬುದು ಅವರ ಮಾತಿನ ಇಂಗಿತಾರ್ಥ.

ನಾವು ಈ ದೇಶವನ್ನೇ ಕೊಳ್ಳೆ ಹೊಡೆಯುತ್ತೇವೆ ಇದಕ್ಕೆ ದೇಶದ ಅಭಿವೃದ್ಧಿ ಎಂದು ಕರೆಯುತ್ತೇವೆ. ದೇಶದ ಎಲ್ಲ ಜನತೆಯ ಅಭಿವೃದ್ಧಿ ಆಗಬೇಕು ಸಮಾನತೆ ನಿಜವಾದ ಅರ್ಥದಲ್ಲಿ ಬೇಕು ಎಂದರೆ ಬಡತನ ನಿರುದ್ಯೋಗ ಹೋಗಬೇಕು ಎಂದರೆ ಅದು ರಾಜಕೀಯ.

ಅರ್ಥವಾಯಿತೆ ಉದಾರೀಕರಣ?

ದೇಶದೊಳಗೆ



-ವಿಶ್ವ

ರಥಯಾತ್ರೆಯೋ ಕೋಮುದಳ್ಳುರಿಯ ಜ್ವಾಲೆಯೋ?

ದೇಶದ ಕೋಮು ಸೌಹಾರ್ದತೆಯೆಂಬ ಸಾಗರ ಈಗ ಬಹುತೇಕವಾಗಿ ಪ್ರಶಾಂತವಾಗಿದೆ. ಮತ್ತೆ ಆ ಸಾಗರ ಅಲ್ಲೋಲ ಕಲ್ಲೋಲವಾಗಬಹುದೇ?

ಈ ಭಯ ಹುಟ್ಟಲು ಕಾರಣವಿದೆ. 'ವಿಜಯದಶಮಿ' ದಿನವಾದ ಅಕ್ಟೋಬರ್ ಮೂರರಿಂದ ದೇಶದ ವಿವಿದೆಡೆಗಳಿಂದ ಮೂರು ರಥಯಾತ್ರೆಗಳು ಹೊರಡಲಿವೆ. ನಿಷೇಧಿತ ವಿಶ್ವ ಹಿಂದೂ ಪರಿಷತ್(ವಿ.ಎಚ್.ಪಿ)ನ ಪ್ರಧಾನ ಕಾರ್ಯದರ್ಶಿ ಅಶೋಕ ಸಿಂಘಾಲ್ ಫೆಬ್ರವರಿ 13ರಂದು ತಮಿಳುನಾಡಿನ ತಿರುಚನಾಪಳ್ಳಿಯಲ್ಲಿ ಈ ವಿಷಯವನ್ನು ಪ್ರಕಟಿಸಿದ್ದಾರೆ.

ಹಿಂದೂಗಳನ್ನು 'ಒಗ್ಗಟ್ಟು' ಮಾಡುವುದು ಈ ಯಾತ್ರೆಗಳ ಗುರಿ ಎಂದು ಸಿಂಘಾಲ್ ಹೇಳಿದ್ದಾರೆ. ಅವರ ಪ್ರಕಾರ ಹಿಂದೂಗಳು ಜಾತಿ ಆಧಾರದಲ್ಲಿ ವಿಭಜನೆಗೊಂಡಿದ್ದಾರೆ.ರಥಯಾತ್ರೆಗಳಿಗೆ ಗಂಗಾಮಾತಾ, ಭಾರತಾಮಾತಾ ಮತ್ತು ಗೋಮಾತಾ ಎಂದು ಹೆಸರಿಸಲಾಗಿದೆ. ಮೂರು ವಾರ ಕಾಲ ಸುಮಾರು ಮೂರು ಐದುಲಕ್ಷ ಹಳ್ಳಿಗಳ ಮೂಲಕ ಹಾದು ಹೋಗುವ ಈ ಯಾತ್ರೆಗಳು ಮಹಾರಾಷ್ಟ್ರದ ನಾಗಪುರದ ಹತ್ತಿರದ ರಾಮ್‌ಟೇಕ್‌ನಲ್ಲಿ ಒಟ್ಟು ಸೇರಲಿದೆ.

ಹಿಂದೂಗಳಲ್ಲಿ 'ಐಕ್ಯಮತ್ಯ'ವನ್ನು ಸಾಧಿಸಲು ಆಚಾರ್ಯರು ಈ ಯಾತ್ರಗಳ ಯೋಜನೆಯನ್ನು ರೂಪಿಸಿದ್ದಾರೆ.

ಇವಿಷ್ಟು ಯಾತ್ರೆಗಳ ಗುರಿ ಹಾಗೂ ಚಟುವಟಿಕೆಗಳ ವಿವರ. ಆದರೆ ಇದರ ನಿಜವಾದ ಉದ್ದೇಶ ಏನು ಎಂಬುದನ್ನು ಚಿಂತಿಸಿದಾಗ ಎದೆ ಝಲ್ಲೆನ್ನುತ್ತದೆ. ಯಾಕೆಂದರೆ 1990 ರಲ್ಲಿ ಬಿಜೆಪಿ ನಾಯಕ ಎಲ್.ಕೆ.ಅಡ್ವಾಣಿ ರಥಯಾತ್ರೆ ನಡೆಸಿದಾಗ ದೇಶದ ಉದ್ದಗಲದಲ್ಲಿ ಹರಿದ ರಕ್ತದ ಕೋಡಿಯ ನೆನಪಾಗುತ್ತದೆ.

ರಾಜಕೀಯ ಶಕ್ತಿಯನ್ನು ಕ್ರೂಢೀಕರಿಸಿಕೊಳ್ಳಲು ಬಿಜೆಪಿ ಆಗ ರಥಯಾತ್ರೆಯನ್ನು ನಡೆಸಿತ್ತು. ಬಿಹಾರದಲ್ಲಿರುವ ಜನತಾದಳ ಸರಕಾರ ರಥಯಾತ್ರೆಗೆ ಅವಕಾಶ ಕೊಡದೆ ಅಡ್ವಾಣಿಯನ್ನು ಬಂಧಿಸಿದಾಗ ರಾಷ್ಟ್ರೀಯರಂಗ ಸರಕಾರಕ್ಕೆ ಕೊಟ್ಟಿದ್ದ ಬೆಂಬಲವನ್ನು ಬಿಜೆಪಿ ವಾಪಾಸು ಪಡೆದಿತ್ತು, ಇದರಿಂದ ವಿ.ಪಿ.ಸಿಂಗ್ ಸರಕಾರ ಉರುಳಿತ್ತು.

ಅಂದಿನ ಯಾತ್ರೆಯ ಉದ್ದೇಶವಾಗಿತ್ತೋ ಪ್ರಸ್ತುತ ಯಾತ್ರೆಯ ಉದ್ದೇಸವೂ ಅದೇಆಗಿದೆ. ಆಚಾರ್ಯರು ರೂಪಿಸಿದ್ದಾರೆ ಎಂದು ಹೇಳಿ ಇದೊಂದು ಧಾರ್ಮಿಕ ಕಾರ್ಯಕ್ರಮ ಎಂದು ವಿಎಚ್‌ಪಿ ಹೇಳಿಕೊಳ್ಳಬಹುದು. ಆದರೆ ಇದು ಕೇಂದ್ರದಲ್ಲಿ ಅಧಿಕಾರಕ್ಕೆ ಬರಲು ಬಿಜೆಪಿ ಯೋಜಿಸಿರುವ ಹೂಟವಲ್ಲವೆ ಬೇರೇನೂ ಅಲ್ಲ ಎಂದು ಯಾರಿಗಾದರೂ ಸ್ಪಷ್ಟವಾಗುತ್ತದೆ.

96ರಲ್ಲಿ ಚುನಾವಣೆ

ವೇಳಾಪಟ್ಟಿ ಪ್ರಕಾರ 1996ರಲ್ಲಿ ಅಂದರೆ ಮುಂದಿನ ವರ್ಷವೇ ಲೋಕಸಬೆಗೆ ಚುನಾವಣೆ ನಡೆಯಬೇಕಿದೆ. ಇದರ ಮೇಲೆ ಕಣ್ಣಿಟ್ಟು ಕೊಂಡೇ ಸಂಘಪರಿವಾರ ರಥಯಾತ್ರೆಗಳನ್ನು ಸಂಘಟಿಸಿದೆ. ಎಂಬುದರಲ್ಲಿ ಅನುಮಾನವೇ ಇಲ್ಲ.

ಮುಸ್ಲಿಮರ ವಿರುದ್ಧ ಹಿಂದೂಗಳನ್ನು ಎತ್ತಿ ಕಟ್ಟುವುದು ಹಿಂದೂಗಳ ಧಾರ್ಮಿಕ ಭಾವನೆಗಳನ್ನು ಕೆರಳಿಸುವುದು ತನ್ಮೂಲಕ ಹಿಂದೂಗಳ ಮತಗಳನ್ನು ಸಳೆಯಲು ಯತ್ನಿಸುವುದು ಬಿಜೆಪಿಯ ಈ ಯೋಜನೆಯ ಗುರಿಯಾಗಿದೆ.

ವಿವಿಧ ರಾಜ್ಯಗಳಲ್ಲೂ ಕೇಂದ್ರದಲ್ಲೂ ಚುನಾವಣೆ ಹತ್ತಿರ ಬಂದಾಗ ಬಿಜೆಪಿ ಈ ತಂತ್ರವನ್ನು ಅನುಸರಿಸುತ್ತಿರುವ ಉದಾಹರಣೆಗಳು ನಮ್ಮ ಮುಂದಿದೆ.

ಅದು ಕರ್ನಾಟಕದಲ್ಲಿ ಈದ್ಗಾ ವಿವಾದವನ್ನು ಕೆದುಕುತ್ತಿದ್ದುದೇ ಅದಕ್ಕೊಂದು ಉತ್ತಮ ಉದಾಹರಣೆಯಾಗಿದೆ.

ಕೋಮು ಘರ್ಷಣೆಗಳಿಂದ ಭಾರತ ದೇಶ ಸಾಕಷ್ಟು ಬಸವಳಿದಿದೆ. ಕೋಮು ದಳ್ಳುರಿಯ ಕೆನ್ನಾಲಿಗೆ ಸಾವಿರಾರು ಜನರ ಪ್ರಾಣಗಳನ್ನು ದಹಿಸಿದೆ. ಕೋಮುವಾದದ ಅನಿಷ್ಟ ಒಂದು ಘೋರ ಸ್ವಪ್ನ. ಅದರ ಕಹಿಯನ್ನು ಸಾಕಷ್ಟು ಉಂಡಿದ್ದೇವೆ ಇನ್ನು ಮುಂದೆ ಅದು ಪುನರಾವರ್ತನೆ ಆಗುವುದನ್ನು ತಡೆಯಲು ಸಂಘಪರಿವಾರದ ದುಷ್ಟ ಯೋಜನೆಯನ್ನು ವಿಫಲಗೊಳಿಸಲು ಜಾತ್ಯಾತೀತ ಶಕ್ತಿಗಳು ಈಗಿನಿಂದಲೇ ಕಾರ್ಯಪ್ರವೃತ್ತವಾಗುವುದು ಅವಶ್ಯ.

ಕರುಣಾಕರನ್ ಸರ್ಕಾರಕ್ಕೆ ಜೀವದಾನ

ಕೇರಳದಲ್ಲಿನ ಕಾಂಗ್ರೆಸ್(ಐ) ನೇತೃತ್ವದ ಸಂಯುಕ್ತ ಪ್ರಜಾಸತ್ತಾತ್ಮಕ ಸಂಘ(ಯುಡಿಎಫ್) ಸರಕಾರಕ್ಕೆ ಜೀವದಾನ ಸಿಕ್ಕಂತಾಗಿದೆ. ಪ್ರತಿಪಕ್ಷಗಳು ಮಂಡಿಸಿದ್ದ ಅವಿಶ್ವಾಸ ಗೊತ್ತುವಳಿಯನ್ನು ವಿಧಾನಸಭೆ ಫೆಬ್ರವರಿ 14ರಂದು ತಿರಸ್ಕರಿಸಿತು. ಗೊತ್ತುವಳಿಗೆ ಪರವಾಗಿ 50 ಹಾಗೂ ವಿರುದ್ಧವಾಗಿ 87 ಮತಗಳು ಬಂದವು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಯ ಬೇಹುಗಾರಿಕೆ ಪ್ರಕರಣದ ಆರೋಪಿ ಪೋಲಿಸ್ ಅದಿಕಾರಿ ರಾಮನ್ ಶ್ರೀವಾಸ್ತವ ಅವರಿಗೆ ಮುಖ್ಯಮಂತ್ರಿ ಕರುಣಾಕರನ್ ರಕ್ಷಣೆ ಒದಗಿಸಿದ್ದ ಆರೋಪದ ಹಿನ್ನಲೆಯಲ್ಲಿ ಮುಖ್ಯಮಂತ್ರಿ ವಿರುದ್ಧ

ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಲಾಗಿತ್ತು. ಸಿಪಿಐ(ಎಂ)ನ ವಿ.ಎಸ್.ಅಚ್ಯುತನಂದನ್ ಅದನ್ನು ಮಂಡಿಸಿದರು.

ಸ್ವತಃ ಯುಡಿಎಫ್ ಹಾಗೂ ಅದರ ಪ್ರಧಾನ ಅಂಗಪಕ್ಷವಾದ ಕಾಂಗ್ರೆನ ಆಂತರಿಕ ಕಲಹದಿಂದಾಗಿ ಕರುಣಾಕರನ್ ಕಂಗೆಟ್ಟಿದ್ದ ಕಾಲದಲ್ಲಿ ಪ್ರತಿಪಕ್ಷ ಈ ಕ್ರಮ ಕೈಗೊಂಡಿತ್ತು. ಕರುಣಾಕರನ್‌ರನ್ನು ಮುಖ್ಯಮಂತ್ರಿ ಸ್ಥಾನದಿಂದ ತೆಗೆದು ಹಾಕಬೇಕೆಂಬುದು ಆಳುವ ರಂಗದ ಆರು ಪಕ್ಷಗಳ ಪೈಕಿ ನಾಲ್ಕು ಪಕ್ಷಗಳ ಹಾಗೂ ಕಾಂಗ್ರೆ ಭಿನ್ನಮತೀಯರ ಪ್ರಮುಖ ಬೇಡಿಕೆಯಾಗಿತ್ತು.

ಬಿಕ್ಕಟ್ಟಿನ ಹಿನ್ನಲೆಯಲ್ಲಿ ಕರುಣಾಕರನ್ ಪರ ಮತ್ತು ವಿರೋಧಿ ಗುಂಪುಗಳ ದೆಹಲಿ ಯಾತ್ರೆ ನಿತ್ಯದ ಕೆಲಸವಾಗಿತ್ತು. ಬಿಕ್ಕಟ್ಟನ್ನು ಬಗೆಹರಿಸ ಬೇಕಾದರೆ ಸರಕಾರದ ವಿರುದ್ಧ ಮಂಡನೆಯಾಗಿರುವ ಗೊತ್ತುವಳಿಯನ್ನು ಸೋಲಿಸಬೇಕೆಂದು ಪ್ರಧಾನಿ ಆಗಿರುವ ಕಾಂಗ್ರೆ ಅಧ್ಯಕ್ಷರು ಷರತ್ತನ್ನು ಹಾಕಿದರು. ಆ ಷರತ್ತೇ ಕರುಣಾಕರನ್ ಉಳಿಯಲು ಕಾರಣವಾಯಿತು.

ಫೆಬ್ರವರಿ 10 ಮತ್ತು 14ರಂದು ಗೊತ್ತುವಳಿ ಮೇಲೆ ನಡೆದ ಚರ್ಚೆಯಲ್ಲಿ ಕಾಂಗ್ರೆ ಭಿನ್ನಮತೀಯರು ಮತ್ತು ಆಳುವ ರಂಗದ ಕರುಣಾಕರನ್ ವಿರೋಧಿ ಸದಸ್ಯರು ಭಾಗವಹಿಸಲಿಲ್ಲ. ಆದರೆ ಮತದಾನ ನಡೆದಾಗ ಅದರಲ್ಲಿ ಪಾಲ್ಗೊಂಡು ಅವರು ಗೊತ್ತುವಳಿ ವಿರುದ್ಧ ಮತ ನೀಡಿದರು. ಕಾಂಗ್ರೆನ ಇಬ್ಬರು ಪ್ರಮುಖ ಭಿನ್ನಮತೀಯ ನಾಯಕರು ಮಾತ್ರ ಮತದಾನದಲ್ಲಿ ಭಾಗವಹಿಸರಲಿಲ್ಲ.

ಯುಡಿಎಫ್ ಸರಕಾರ ಅಧಿಕಾರಕ್ಕೆ ಬಂದು 43 ತಿಂಗಳಾಗಿವೆ. ಅಸೆಂಬ್ಲಿ ಚುನಾವಣೆ ನಡೆಯಲು ಇನ್ನು 14 ತಿಂಗಳು ಬಾಕಿಯಿದೆ. ರಾಜ್ಯದ ಜನಜೀವನ ಹದಗೆಟ್ಟು ಹೋಗುವಂತೆ ಮಾಡಿರುವ ಕರುಣಾಕರನ್ ಸರಕಾರದ ವಿರುದ್ಧ ಜನತೆಯ ಅತೃಪ್ತಿ ಭುಗಿಲೆದ್ದಿದೆ. ಚುನಾವಣೆ ಸಮರ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳಲಿದೆ.

ಅವಿಶ್ವಾಸ ಗೊತ್ತುವಳಿಯಿಂದ ಪಾರಾದರೂ ಕರುಣಾಕರನ್ ಸರಕಾರ ಮುಂಬರುವ ಚುನಾವಣೆಯಲ್ಲಿ ಜನರ ತೀರ್ಪಿನಿಂದ ತಪ್ಪಿಸಿಕೊಳ್ಳಲು ಖಂಡಿತಾ ಸಾಧ್ಯವಿಲ್ಲ.

ಆರದ ಅತೃಪ್ತಿ: ಪ್ರತಿ ಪಕ್ಷಗಳು ಮಂಡಿಸಿದ್ದ ಅವಿಶ್ವಾಸ ಗೊತ್ತುವಳಿಯನ್ನು ಸೋಲಿಸಲು ಭಿನ್ನಮತೀಯರು ಮತ್ತು ಯುಡಿಎಫ್ ಅಂಗ ಪಕ್ಷಗಳು ಮತಹಾಕಿದರೂ ಮುಖ್ಯಮಂತ್ರಿ ಬಗ್ಗೆ ಅವರಿಗಿರುವ ಅತೃಪ್ತಿ ಇನ್ನೂ ಆರಿಲ್ಲ ಅದಕ್ಕೆ ಸ್ಪಷ್ಟ ಉದಾಹರಣೆ ಇಸ್ರೋ ಬೇಹುಗಾರಿಕೆ ಹಗರಣದ ಬಗ್ಗೆ ಕೇರಳ ಹೈಕೋರ್ಟಿನ ನ್ಯಾಯಾಧೀಶರೊಬ್ಬರಿಂದ ನ್ಯಾಯಾಂಗ ತನಿಖೆ ನಡೆಸುವ ಪ್ರಸ್ತಾವವನ್ನು ಮುಖ್ಯಮಂತ್ರಿ ಮುಂದಿಟ್ಟಿರುವುದರಿಂದ ಸರಕಾರ ಹಾಗೂ ಮೈತ್ರಿಕೂಟದ ಪ್ರತಿಷ್ಟೆಯೋನೂ ಸುಧಾರಿಸುವುದಿಲ್ಲ ಎಂದು ಅತೃಪ್ತರು ಹೇಳಿದ್ದಾರೆ.

ಅವಿಶ್ವಾಸ ಗೊತ್ತುವಳಿಗೆ ಸೋಲಾದ ನಂತರ ಭಿನ್ನಮತೀಯ ನಾಯಕರು ಸುದ್ದಿಗೋಷ್ಠಿಯೊಂದರಲ್ಲಿ ಮಾತನಾಡಿ ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು. ಕರುಣಾಕರನ್ ಕೈ ಗೊಂಡ ಏಕಪಕ್ಷೀಯ ನಿರ್ಧಾರದಿಂದ ಸಾಕಷ್ಟು ಹಾನಿ ಆಗಿ ಹೋಗಿದೆ. ಓಮನ್ ಚಾಂಡಿ, ಕುನ್ಹಾಲಿ ಕುಟ್ಟಿ, ಬಾಲಕೃಷ್ಣ ಪಿಳ್ಳೆ . ಟಿ.ಎಂ. ಜೇಕಬ್ ಮೊದಲಾದವರು ಆರೋಪಿಸಿದರು. ಸರಕಾರದ ಬಗ್ಗೆ ಸಾರ್ವಜನಿಕರಲ್ಲಿದ್ದ ಸಹಾನೂಭೂತಿ ನಶಸಿದೆ ಎಂದರು.

ಕವಿ ರವೀಂದ್ರರ ಮನೆ ಸಂರಕ್ಷಣೆ ನಿರ್ಧಾರ

ಕವೀಂದ್ರರೆಂದೆ ಖ್ಯಾತರು ವಿಶ್ವಮಾನ್ಯ ಕವಿ ರವೀಂದ್ರ ನಾಥ ಟಾಗೂರರು ಡಾರ್ಜಿಲಿಂಗ್ ಜಿಲ್ಲೆಯ ಮಾಂಗ್ಪೊ ಪ್ರದೇಶದಲ್ಲಿರುವ ಅವರ ಐತಿಹಾಸಿಕ ನಿವಾಸವನ್ನು ರಿಪೇರಿ ಮಾಡಿ ಸಂರಕ್ಷಿಸಲು ಪಶ್ಚಿಮ ಬಂಗಾಳ ಸರಕಾರ ನಿರ್ಧರಿಸಿದೆ.

ಈ ಮನೆಯಲ್ಲಿ ಟಾಗೂರ್ ಹಲವು ಕೃತಿಗಳನ್ನು ರಚಿಸಿದ್ದರು. ಈ ಮನೆ ಈಗ ಪ್ರವಾಸಿಗರನ್ನು ಹೆಚ್ಚಿಚ್ಚಾಗಿ ಆಕರ್ಷಿಸುತ್ತಿದೆ.

ರಾಜ್ಯ ಸಮ್ಮೇಳನಗಳು

ಉತ್ತರ ಪ್ರದೇಶ

ಸಿಪಿಐ(ಎಂ) ಉತ್ತರ ಪ್ರದೇಶ ರಾಜ್ಯ 15 ನೇ ಸಮ್ಮೇಳನ ಫೆಬ್ರವರಿ 4ರಿಂದ 6 ರವರಗೆ ಬುಲಂದರ್ ನಲ್ಲಿ ನಡೆಯಿತು. ದೇಶದ ಅತ್ಯಂತ ಹೆಚ್ಚು ಜನಸಂಖ್ಯೆಯುಳ್ಳ ರಾಜ್ಯದ ೫೫ ಜಿಲ್ಲೆಗಳನ್ನು ಪ್ರತಿನಿಧಿಸಿ 243 ಪ್ರತಿನಿಧಿಗಳು ಮತ್ತು 12 ವೀಕ್ಷಕರು ಬಾಗವಹಿಸಿದ್ದರು. ಮೊದಲ ದಿನ ನಡೆದ ಸಾವಿರಾರು ಜನ ಪಾಲ್ಗೊಂಡಿದ್ದ ರ್‍ಯಾಲಿಯಲ್ಲಿ ಸಿಪಿಐ(ಎಂ) ಪ್ರದಾನ ಕಾರ್ಯದರ್ಶಿ ಕಾಂ.ಹರಿಕಿಷನ್ ಸಿಂಗ್ ಸುರ್ಜಿತ್ ಮತ್ತು ಕಾಂ.ಪ್ರಕಾಶ್ ಕಾರಟ್ ಮುಖ್ಯ ಭಾಷಣಕಾರರಾಗಿದ್ದರು. ರ್‍ಯಾಲಿಗೆ ಮುನ್ನ ನಗರದ ಮುಖ್ಯ ಚೌಕದಲ್ಲಿ ಭಗತ್ ಸಿಂಗ್ ಸ್ಮಾರಕಕ್ಕೆ ಸುರ್ಜಿತ್ ಮತ್ತಿತರರು ಮಾಲಾರ್ಪಣೆ ಮಾಡಿದರು. ಜನನಾಟ್ಯಮಂಚ ಒಂದು ಬೀದಿನಾಟಕವನ್ನು ಪ್ರದರ್ಶಿಸಿತು.

ಕಾ. ಸುರ್ಜಿತ್ ಸಮ್ಮೇಳವನ್ನು ಉದ್ಘಾಟಿಸಿದರು. ರಾಜ್ಯಸಮಿತಿ ಕಾರ್ಯದರ್ಶಿ ಕಾ. ರಾಮಸುಮೇರಯಾದವ್ ವರದಿಯನ್ನು ಮಂಡಿಸಿದರು. 50 ಕ್ಕೂ ಹೆಚ್ಚು ಸಂಗಾತಿಗಳು ವರದಿ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡರು

39 ಸದಸ್ಯರ (4 ಸ್ಥಾನ ಖಾಲಿ) ಹೊಸ ರಾಜ್ಯ ಸಮಿತಿಯನ್ನು ಸಮ್ಮೇಳನ ಆರಿಸಿತು. ರಾಮ ಸುಮೇರ ಯಾದವ್ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.

ಅಂಡಮಾನ್-ನಿಕೋಬಾರ್

ಸಿಪಿಐ(ಎಂ) ಪಕ್ಷದ ಅಂಡಮಾನ್- ನಿಕೋಬಾರ್ 4 ನೇ ರಾಜ್ಯ ಸಮ್ಮೇಳನ ಜನವರಿ 28 ಮತ್ತು 29 ರಂದು ಪೋರ್ಟ್‌ಬ್ಲೇರ್‌ನಲ್ಲಿ ಉಲ್ಲಾಸದ ವಾತಾವರಣದಲ್ಲಿ ನಡೆಯಿತು. ಪಕ್ಷದ ಕೇಂದ್ರೀಯ ನಿಯಂತ್ರಣ ಆಯೋಗ ಅಧ್ಯಕ್ಷ ಸಮರ್ ಮುಖರ್ಜಿ ಮತ್ತು ಹನನ್ ಮುಲ್ಲಾ ಪಾಲ್ಗೊಂಡು ಸಮ್ಮೇಳನಕ್ಕೆ ಮಾರ್ಗದರ್ಶನ ನೀಡಿದರು.

ಕಾಂ. ಸಮರ್ ಮುಖರ್ಜಿ ಧ್ವಜಾರೋಹಣ ಮಾಡಿದರು. ಕಾಂ. ಹನನ್ ಮುಲ್ಲಾ ಸಮ್ಮೇಳನವನ್ನು ಉದ್ಘಾಟಿದರು. 47 ಪ್ರತಿನಿಧಿಗಳು 4 ವೀಕ್ಷಕರು ಸಮ್ಮೇಳನದಲ್ಲಿ ಬಾಗವಹಿಸಿದ್ದರು.

ರಾಜ್ಯಸಮಿತಿ ಕಾರ್ಯದರ್ಶಿ ಎಸ್. ವಾಸುದೇವನ್ ವರದಿಯನ್ನು ಮಂಡಿಸಿದರು. 14 ಸದಸ್ಯರ ರಾಜ್ಯ ಸಮಿತಿ ಆಯ್ಕೆಯಯಾಗಿದ್ದು. ಕಾಂ. ವಾಸುದೇವನ್ ಅವರನ್ನು ಮತ್ತೆ ಕಾರ್ಯದರ್ಶಿಯಾಗಿ ಆರಿಸಲಾಗಿದೆ.

ಅಂಗನವಾಡಿ ಕಾರ್ಯಕರ್ತರ ರಾಜ್ಯ ಸಮಾವೇಶ

ಜನವರಿ 18ರಂದು ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ರಾಜ್ಯ ಮಟ್ಟದ ಸಮಾವೇಶ ಶ್ರೀರಾಂಪುರದ ಸಾಲಮ್ಮ ಛತ್ರದಲ್ಲಿ ನಡೆಯಿತು. ಈ ಸಮಾವೇಶವನ್ನು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜಿ.ಕೆ.ನಾಯರ್‌ರವರು ಉದ್ಘಾಟಿಸಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ಸರ್ಕಾರ ಹಲವಾರು ಕೆಲಸಗಳಿಗೆ ಉಪಯೋಗಿಸುತ್ತದೆ. ಆದರೆ ಸೌಲಭ್ಯಗಳ ಬಗ್ಗೆ ಚಿಂತಿಸುವುದಿಲ್ಲವಾದ್ದರಿಂದ ಈ ಸಂಘಟನೆಯನ್ನು ಬೃಹತ್ತಾಗಿ ಬೆಳಸಬೇಕೆಂದೂ ಕರೆಯಿತ್ತರು. ಅಂಗನವಾಡಿ ಕಾರ್ಯಕರ್ತೆಯರು ಜನವರಿ 16 ರಿಂದ ಆರಂಭಿಸ ಬೇಕಿದ್ದ ಉಪವಾಸ ಸತ್ಯಾಗ್ರಹ ಕಾರ್ಯಕ್ರಮವನ್ನು ಗೃಹಮಂತ್ರಿಗಳು ಭರವಸೆ ಕೊಟ್ಟ ಹಿನ್ನಲೆಯಲ್ಲಿ ಹೋರಾಟವನ್ನು ಹಿಂತೆಗೆದು ಕೊಂಡಿದೆ. ಮತ್ತು 10,000 ನೌಕರರಿಗೆ ಸರ್ಕಾರಿ ಹುದ್ದೆಗಳನ್ನು ಕೊಡುತ್ತೇವೆ ಮತ್ತು ಸ್ವಲ್ಪ ದಿನಗಳಲ್ಲಿ ಮುಖ್ಯಮಂತ್ರಿಗಳ ಸಮಕ್ಷಮದಲ್ಲಿ ಚರ್ಚೆ ನಡೆಸಿ ಶಾಶ್ವತವಾದ ಪರಿಹಾರಗಳನ್ನು ನೀಡುತ್ತೇವೆ ಎಂದು ಪೋಲಿಸ್ ಕಮಿಷನರ್ ಮತ್ತು ಸಚಿವೆ ಲಲಿತನಾಯಕ್‌ರವರು ಸಿಐಟಿಯು ನಿಯೋಗಕ್ಕೆ ಭರವಸೆಯಿತ್ತರು. ಈ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಹೋರಾಟವನ್ನು ಪುನಃ ಆರಂಭಿಸಲಾಗುವುದೆಂದು ರಾಜ್ಯ ಸಂಚಾಲಕಿ ಎಸ್. ವರಲಕ್ಷ್ಮಿ ತಿಳಿಸಿದರು.

ಈ ಸಭೆಯ ಅಧ್ಯಕ್ಷೀಯ ಮಂಡಳಿಯಲ್ಲಿ ವೀರಮ್ಮ, ಗಂಗಮ್ಮ, ಶಶಿಕಲಾ ಪಾಟೀಲ್, ನಾಗರತ್ನ, ವನಜಾ, ಮುನಿತಾಯಮ್ಮ, ಸುನಂದ, ಪ್ರೇಮಲತಾ, ಸಿದ್ದಗಂಗಪ್ಪನವರು ಇದ್ದರು. ಈ ಸಮಾವೇಶಕ್ಕೆ ಗುಲ್ಬರ್ಗಾ, ಬಳ್ಳಾರಿ, ಚಿತ್ರದುರ್ಗ, ಕೋಲಾರ ಮತ್ತು ಬೆಂಗಳೂರಿನ ಸಂಗಾತಿಗಳು ಭಾಗವಹಿಸಿದ್ದರು. ಈ ಸಮಾವೇಶದಲ್ಲಿ ನೌಕರರ ಸಮಸ್ಯೆಗಳನ್ನು ಚರ್ಚಿಸಿ ಸಂಘಟನೆಯನ್ನು ಬೆಳಸುವ ಬಗ್ಗೆ ತೀರ್ಮಾನಿಸಲಾಯಿತು.ಈ ಸಮಾವೇಶಕ್ಕೆ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯಿಂದ ಕಾಂ. ಕೃಷ್ಣವೇಣಿ, ಗಾರ್ಮೆಂಟ್ಸ್ ವರ್ಕರ್ಸ್ ಯೂನಿಯನ್‌ನ ಕಾಂ. ಮಧುರಾ ಮತ್ತು ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಂಚಾಲಕಿ ಕಾಂ. ವಿಮಲಾ ರವರು ಶುಭಕೋರಿದರು ಈ ಸಮಾವೇಶದ ಸಿದ್ಧತೆಯನ್ನು ಸಿಐಟಿಯುವಿನ ಕಾಂ. ಕೋದಂಡರಾಂ ಮತ್ತು ಇತರರು ಮಾಡಿದ್ದರು.

ಜೆಎಂಎಸ್ ಒತ್ತಾಯ

ಬೀದರ್: ಸುಮಾರು ಎರಡು ವರ್ಷಗಳಿಂದ ಬೀದರ್‌ನ ಜನಸಾಮಾನ್ಯ ನಾಗರೀಕರ ಪರವಾಗಿ ಸಹಿ ಸಂಗ್ರಹ ಚಳುವಳಿ ಘೇರಾವ ಮುಂತಾದ ಚಳುವಳಿಗಳನ್ನು ನಡೆಸಿದರ ಪರಿಣಾಮವಾಗಿ ಆರು ಸಿಟಿ ಬಸ್ ಗಳನ್ನು ಬೀದರಿಗೆ ಹೆಚ್ಚುವರಿಯಾಗಿ ಕೊಡಲಾಗಿದೆ. ಎಂದು ಕೆಎಸ್‌ಆರ್ ಟಿಸಿ ಕಛೇರಿಯಿಂದ ಬೀದರ್ ಜೆಎಂಎಸ್ ಸಮಿತಿಗೆ ಪತ್ರ ಬಂದಿದೆ. ವೇಳಾಪಟ್ಟಿ ಸಹಿತವಾಗಿ ಸಿಟಿಬಸ್‌ಗಳು ನಗರಗಳಲ್ಲಿ ಓಡಾಡುವಂತಾಗಲಿ ಎಂದು ವಿಭಾಗಿಯ ಸಾರಿಗೆ ಅಧಿಕಾರಿಗಳಿಗೆ ಈ ಹಿಂದೆ ಜೆಎಂಎಸ್ ಒತ್ತಾಯಿಸಿತು. ಜನರಿಗೆ ನಿರಂತರವಾಗಿ ಸಿಟಿ ಬಸ್‌ಗಳ ಉಪಯೋಗ ಆಗಬೇಕೆಂದಲ್ಲಿ ಬೀದರ್ ನಗರವನ್ನು ಅಧಿಕೃತವಾಗಿ ಘೋಷಿಸಿದಾಗ ಮಾತ್ರ ಸಾಧ್ಯವೆಂದು ನಮ್ಮೊಂದಿಗೆ ಅಧಿಕಾರಿ ಗಳು ಚರ್ಚೆ ನಡೆಸಿದರು. ಆದ್ದರಿಂದ ಜನವಾದಿ ಮಹಿಳಾ ಸಂಘಟನೆಯು ಬೀದರನ್ನು ಕೂಡಲೇ ಸಿಟಿ ಎಂದು ಘೋಷಿಸಬೇಕೆಂದು ಒತ್ತಾಯಿಸಿದೆ.

ಬೀಡಿ ಕಾರ್ಮಿಕರ ಬೇಡಿಕೆಗಳು....

ಪುಟ 3ರಿಂದ

ವರ್ಕರ್ಸ್ ಕಾಯಿದೆ 1967ರ ಪ್ರಕಾರ ಲಾಗ್ ಬುಕ್ ನೀಡುವುದಲ್ಲದೆ ಆ ಪುಸ್ತಕದಲ್ಲಿ ಕೂಲಿಯ ವಿವರಣೆ ನೀಡಿದಲ್ಲಿ ಮಾತ್ರ ಕನಿಷ್ಟ ವೇತನ ಕಾಯಿದೆ ಟಿಈಜ 'ಆ' ಪ್ರಕಾರದ ಕೂಲಿಯ ಚೀಟಿ ಅನಗತ್ಯ ಆಗಬಹುದು. ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯು ಕೂಲಿಯ ಚೀಟಿ ಕಡ್ಡಾಯಪಡಿಸಿದರೆ ಮಾತ್ರ ನಿಗದಿತ ಕೂಲಿಯ ಜಾರಿ ಆಗುತ್ತದೆ ಎಂದು ಒಕ್ಕೂಟ ಒತ್ತಿ ಹೇಳಿದೆ.

ಕರ್ನಾಟಕ ರಾಜ್ಯದ ಕನಿಷ್ಟ ಕೂಲಿ ಪ್ರಕಟಣೆ ಅನುಸರಿಸಿ ತುಂಡು ಕೆಲಸದ ಆಧಾರದಲ್ಲಿ ಕೆಲಸ ಮಾಡುವ ಬೀಡಿ ಕಾರ್ಮಿಕರಿಗೆ ಪ್ರತಿದಿನ ೮೦೦ ಬೀಡಿ ಕಟ್ಟಲು ಕೆಲಸ ನೀಡುವುದು ಅಗತ್ಯವಿರುತ್ತದೆ. ಇಲ್ಲದಿದ್ದರೆ ರೂ. 15.65 ಖಾತರಿ ಪಡಿಸಿದ ವೇತನ ನೀಡಬೇಕಾಗಿದೆ. ಖಾತರಿ ಪಡಿಸಿದ ವೇತನವನ್ನು ನೀಡುವುದು ಕಡ್ಡಾಯ ಮಾಡಿ ಜಾರಿಯಾಗಬೇಕು. ಇಲ್ಲದಿದ್ದರೆ ಬೀಡಿ ಮಾಲೀಕರು ತಮ್ಮ ಕಾರ್ಮಿಕರಿಗೆ ಕೆಲಸ ನೀಡದೆ ಹೊಸ ಜಾಗಕ್ಕೆ ಹೋಗುವ ಅಭ್ಯಾಸ ಬೆಳೆಸುತ್ತಾರೆ. ಬೀಡಿ ಕಾರ್ಮಿಕರಿಗೆ ಅನ್ವಯವಾಗುವ ಕಾಯಿದೆಗಳು: (1) ಕನಿಷ್ಟ ವೇತನ ಕಾಯಿದೆ 1948 (2) ಬೀಡಿ ಮತ್ತು ಸಿಗಾರ್ ವರ್ಕಸ್ (ಕೆಲಸದ ನಿಯಮ) 1967 (3) ಇ.ಎಸ್.ಐ. ಕಾಯಿದೆ 1948 (4) ಭವಿಷ್ಯ ನಿಧಿ ಕಾಯಿದೆ 1952 (5) ಗ್ರಾಚ್ಯುಟಿ ಕಾಯಿದೆ 1971 (6) ಬೋನಸ್ಸು ಕಾಯಿದೆ, 1965 (7) ರಾಷ್ಟ್ರೀಯ ಮತ್ತು ಹಬ್ಬಗಳ ರಜೆ ಕಾಯಿದೆ (8) ಹೆರಿಗೆ ಭತ್ಯೆ ರಜೆ ಕಾಯಿದೆ 1961 (9) ಬೀಡಿ ಕಾಯಿದೆ ಕಾರ್ಮಿಕರ ಕಲ್ಯಾಣ ನಿಧಿ ಕಾಯಿದೆ, 1977

ಬೀಡಿ ಕಾರ್ಮಿಕರಿಗೆ ಅನ್ವಯವಾಗುವ ಈ ಕಾಯಿದೆಗಳನ್ನು ಜ್ಯಾರಿಗೊಳಿಸಲು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು, ಕೇರಳ ರಾಜ್ಯದ ಫ್ಯಾಕ್ಟರಿ ಆಧಾರಿತ ಬೀಡಿ ಕಾರ್ಮಿಕರಿಗೆ ಒದಗಿಸಲಾದ ರೀತಿಯಲ್ಲಿ ಹೋಂ ವರ್ಕರ್ ಆದ ಬೀಡಿ ಕಾರ್ಮಿಕರಿಗೂ ಕೂಡಾ 7ನೇ ದಿವಸದ ವೇತನವನ್ನು ನೀಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಬೇಕು ಎಂದು ಒಕ್ಕೂಟ ಕೇಳಿದೆ.

ಈ ಮೇಲೆ ವಿವರಿಸಿದ ಬೇಡಿಕೆಗಳನ್ನು ಈಡೇರಿಸಲು ರ್‍ಆಜ್ಯ ಸರ್ಕಾರಕ್ಕೆ 2 ತಿಂಗಳ ಅವಧಿ ನೀಡಬೇಕೆಂದು ಈ ಅವಧಿಯ ನಂತರ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳದೆ ಇದ್ದರೆ ಬೆಂಗಳೂರು, ಮಂಗಳೂರು, ಬೆಳಗಾವಿ, ಮತ್ತು ಗುಲ್ಬರ್ಗಾ ನಗರಿಗಳಲ್ಲಿ ಬೀಡಿ ಕಾರ್ಮಿಕರ ಅನಿರ್ದಿಷ್ಟ ಅವಧಿಯ ಧರಣಿ ಕಾರ್ಯಕ್ರಮಗಳನ್ನು ಏಪ್ರಿಲ್ 25ರಿಂದ ನಡೆಸಬೇಕೆಂದು ದಕ್ಷಿಣ ವಲಯದ ಬೀಡಿ ಕಾರ್ಮಿಕರ ಸಮನ್ವಯ ಸಮಿತಿ ನಿರ್ಧರಿಸಿರುವುದನ್ನು ಕಾರ್ಮಿಕ ಸಚಿವರ ಗಮನಕ್ಕೆ ತಂದಿರುವ ಒಕ್ಕೂಟ ಈ ಮೇಲ್ಕಾಣಿಸಿದ ವಿಷಯದ ಬಗ್ಗೆ ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕೆಂದು ವಿನಂತಿಸಿದೆ.

ಸೋವಿಯತ್ ಕಮ್ಯುನಿಸ್ಟ್ ಪಕ್ಷ ಮತ್ತು ಒಕ್ಕೂಟ ಪುನಃ ಕಟ್ಟಲು ಪಣ

ಲೋಕಸಂಚಾರ

-ಶರತ್‌ಚಂದ್ರ

ರಶ್ಯನ್ ಕಮ್ಯುನಿಸ್ಟ್ ಪಕ್ಷದ ಮೂರನೇ ಮಹಾಧಿವೇಶನ ಜನವರಿ 21-22ರಂದು ಜರುಗಿತು. ಮಹಾಧಿವೇಶನ ಕೈಗೊಂಡ ಪ್ರಮುಖ ನಿರ್ಣಯಗಳಲ್ಲಿ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಹಾಗೂ ಸೋವಿಯುತ್ ಒಕ್ಕೂಟಗಳ ಪುನರ್ ಸ್ಥಾಪನೆ ಸೇರಿವೆ. ಸೋವಿಯತ್ ಒಕ್ಕೂಟದ ವಿಘಟನೆಗೆ ಕಾರಣಗಳನ್ನು ಮಹಾಧಿವೇಶನ ಚರ್ಚಿಸಿ, ಅದನ್ನು ಮೂರು ಹಂತಗಳಲ್ಲಿ ಪುನಃ ಸ್ಥಾಪಿಸುವ ಪಣತೊಟ್ಟಿತು. ಮೊದಲ ಹಂತದಲ್ಲಿ ಎಲ್ಲಾ ಮಾಜಿ ಸೋವಿಯೆತ್ ಗಣರಾಜ್ಯಗಳ ನಡುವೆ ಆರ್ಥಿಕ ಹಾಗೂ ಸಾಂಸ್ಕೃತಿಕ ಸಂಬಂಧಗಳ ಪುನರ್ ಸ್ಥಾಪನೆ, ಎರಡನೇ ಹಂತದಲ್ಲಿ ಅಧಿಕಾರದ ಮೂಲಗಳಾಗಿ ಸೋವಿಯೆತ್‌ಗಳ ಪುನರ್ ಸ್ಥಾಪನೆ, ಮೂರನೇ ಹಾಗೂ ಕೊನೆಯ ಹಂತದಲ್ಲಿ ಸ್ವಇಚ್ಛೆಯ ಒಪ್ಪಂದ ಹಾಗೂ ಸಾಮಾನ್ಯ ಸಂವಿಧಾನದ ಆಧಾರದ ಮೇಲೆ ಐಕ್ಯ ಪ್ರಭುತ್ವದ ಸ್ಥಾಪನೆ.

ಸೋವಿಯೆತ್ ಒಕ್ಕೂಟದ ವಿಘಟನೆ ಬಗ್ಗೆ ಕಾರಣಗಳನ್ನು ಚರ್ಚಿಸುತ್ತಾ ರಾಷ್ಟ್ರೀಯತೆಯ ಸಮಸ್ಯೆಗಳಿಗೆ ಸಾಕಷ್ಟು ಗಮನ ಕೊಡದ್ದು ಮತ್ತು ಅತಿ ಕೇಂದ್ರವಾದದ ತಪ್ಪುಗಳಿದ್ದದ್ದು ನಿಜವಾದರೂ, ವಿಘಟನೆಗೆ ಯಾವುದೇ ವಾಸ್ತವ ಕಾರಣಗಳಿಲ್ಲ ಎಂಬ ತೀರ್ಮಾನಕ್ಕೆ ಬಂತು. ಒಕ್ಕೂಟದ ಕೊಂಡಿಯಾಗಿದ್ದ ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ ಮೇಲಿನ ನಿಷೇಧ ಒಕ್ಕೂಟದ ವಿಘಟನೆಗೆ ನಾಂದಿಯಾಯಿತು.

ಮಹಾಧಿವೇಶನದಲ್ಲಿ ಹೆಚ್ಚಿನ ಗಣರಾಜ್ಯಗಳ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಅಥವಾ ಹಿರಿಯ ನಾಯಕರು ಹಾಜರಿದ್ದದು, ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ ಪುನರ್ ಸ್ಥಾಪನೆ ಬಗ್ಗೆ ಇದ್ದ ತೀವ್ರ ಕಾಳಜಿ ತೋರಿಸುತ್ತಿತ್ತು. 1996 ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ 30ನೇ ಮಹಾಧಿವೇಶನ ನಡೆಸುವ ಬಗ್ಗೆ ಇತರ ಗಣರಾಜ್ಯಗಳ ಪಕ್ಷಗಳೊಂದಿಗೆ ಮಾತುಕತೆ ನಡೆಸಲು ಒಂದು ಸಮಿತಿ ನೇಮಿಸಲಾಯಿತು. ಉಕ್ರೇನ್, ಬೈಲೋರಶ್ಯಾ ಅಮೆಶನಿಯಾ, ಅಜರ್ ಬೈಜನ್ ಹಾಗೂ ಕ್ರಿಮಿಯಾಗಳ ಕಮ್ಯುನಿಸ್ಟ್ ಪಕ್ಷಗಳ ಕಾರ್ಯದರ್ಶಿಗಳು ಹಾಜರಿದ್ದರು. ಪೂರ್ವ ಯುರೋಪಿನ ಮಾಜಿ ಸಮಾಜವಾದಿ ದೇಶಗಳ ಕಮ್ಯುನಿಸ್ಟ್ ಪಕ್ಷಗಳಿಂದಲೂ ಕಾರ್ಯದರ್ಶಿಗಳು ಅಥವಾ ಹಿರಿಯ ನಾಯಕರು ಹಾಜರಿದ್ದರು. ಅತ್ಯಂತ ಕ್ಲಿಷ್ಟ ಸನ್ನಿವೇಶದಲ್ಲಿ ಕೆಲಸ ಮಾಡುತ್ತಿರುವ ಯುಗೋಸ್ಲಾವಿಯಾದಿಂದಲೂ ಪ್ರತಿನಿಧಿಗಳು ಬಂದಿದ್ದರು.

ರಶ್ಯನ್ ಕಮ್ಯುನಿಸ್ಟ್ ಪಕ್ಷದ ಆಸ್ತಿಪಾಸ್ತಿಗಳನ್ನೆಲ್ಲಾ ಯೆಲ್ಸಿನ್ ಸರ್ಕಾರ ಲೂಟಿಮಾಡಿರುವುದರಿಂದ, ಪಕ್ಷ ಸಂಘಟನಾತ್ಮಕವಾಗಿ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ. ಪಕ್ಷದ ಮುಖ ಪತ್ರಿಕೆ 'ಪ್ರಾವ್ದಾ' ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಹಿಂದಿನ ಸಂಚಿಕೆಗಳಲ್ಲಿ ಓದಿದ್ದೀರಿ. 'ಪ್ರಾವ್ದಾ'ದ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಲು ಪ್ರತಿ ಸದಸ್ಯ ಐದು ಸಾವಿರ ರೂಬಲ್ ಸಂಗ್ರಹಿಸಬೇಕೆಂದು ಮಹಾಧಿವೇಶನ ಕರೆ ಕೊಟ್ಟಿತು.

ಮಹಾಧಿವೇಶನ ಎಲ್ಲಾ ನಿರ್ಣಯಗಳನ್ನು ಮುಕ್ತ ಮತದಾನದ ಆಧಾರದ ಮೇಲೆ ಮಂಜೂರು ಮಾಡಿತು. ನಿರ್ಣಯದ ಬಗ್ಗೆ ಬಂದ ತಿದ್ದುಪಡಿಗಳನ್ನೆಲ್ಲಾ ಮತದಾನಕ್ಕೆ ಹಾಕಲಾಯಿತು. ಎಲ್ಲಾ ನಿರ್ಣಯಗಳ ಬಗ್ಗೆ ತೀವ್ರ ಚರ್ಚೆ ನಡೆದವು. ಪಕ್ಷದ ಹೊಸ ಕಾರ್ಯಕ್ರಮದಿಂದ ಸ್ಟಾಲಿನ್ ರ ಹೆಸರು ಪೂರ್ಣವಾಗಿ ತೆಗೆದು ಹಾಕಬೇಕೆಂಬ ಪ್ರತಿನಿಧಿಯೊಬ್ಬ ಮಂಡಿಸಿದ ನಿರ್ಣಯದ ಬಗ್ಗೆ ತೀವ್ರ ಚರ್ಚೆ ನಡೆಯಿತು. ಆ ತಿದ್ದುಪಡಿಯನ್ನು ಮತಕ್ಕೆ ಹಾಕಿದಾಗ 336 ಪ್ರತಿನಿಧಿಗಳಲ್ಲಿ 15 ಪ್ರತಿನಿಧಿಗಳು ಮಾತ್ರ ಅದನ್ನು ಬೆಂಬಲಿಸಿದರು. ಸ್ಟಾಲಿನ್ ಹಲವಾರು ತಪ್ಪುಗಳನ್ನು ಮಾಡಿದ್ದರೂ, ಅವರ ಚಾರಿತ್ರಿಕ ಕೊಡುಗೆಗಳನ್ನು ಮರೆತು ಬಿಡುವುದು ಅತ್ಯಂತ ಅಸಮಂಜಸ ಎಂದು ಹೆಚ್ಚಿನ ಪ್ರತಿನಿಧಿಗಳು ಅಭಿಪ್ರಾಯಪಟ್ಟರು.

ಮೆಕ್ಸಿಕೋದಲ್ಲಿ ಝಪಾಟಿಸ್ಟ ಗೆರಿಲ್ಲಾ ಮೇಲೆ ಸರಕಾರದ ಸಮರ

ಮೆಕ್ಸಿಕೋದಲ್ಲಿ ಇತ್ತೀಚೆಗೆ ಉಂಟಾಗಿರುವ ತೀವ್ರ ಆರ್ಥಿಕ ಬಿಕ್ಕಟ್ಟನ್ನು ಮುಚ್ಚಿಡಲೋ ಎಂಬಂತೆ ಸರ್ಕಾರ, ಕಳೆದ ವಾರ ಗೆರಿಲ್ಲಾ ಕದನ ಆರಂಭಿಸಿ ಭಾರಿ ಸುದ್ದಿ ಮಾಡಿದ್ದ 'ಝಪಾಟಿಸ್ಟಾ ಗೆರಿಲ್ಲಾಗಳ ಮೇಲೆ ತೀವ್ರ ಸಮರ ಆರಂಭಿಸಿದೆ. ದಕ್ಷಿಣ ಮೆಕ್ಸಿಕೋದ ಚಿಯೊಪಾಸ್ ಪ್ರಾಂತ್ಯದಲ್ಲಿ. ಸರಕಾರದ ವಿರುದ್ಧ ಬಂಡೆದ್ದಿರುವ ಝಪಾಟಿಸ್ಟಾ ಗೆರಿಲ್ಲಾಗಳ 5 ಹಿರಿಯ ನಾಯಕರುಗಳಲ್ಲಿ ಇಬ್ಬರನ್ನು ಬಂಧಿಸಲಾಗಿದೆ ಎಂದು ಸರ್ಕಾರ ಹೇಳಿದೆ. ಅಲ್ಲದೆ ಚಿಯಾಪಾಸ್‌ನಲ್ಲಿ ಸರ್ಕಾರಿ ಪಡೆಗಳು ನಡೆಸಿದ ಕ್ಷಿಪ್ರಕಾರ್ಯಚರಣೆಗೆ ಯಾವುದೇ ಗೆರಿಲ್ಲಾ ಪ್ರತಿರೋಧ ಕಂಡು ಬಂದಿಲ್ಲ ಎಂದು ಸರ್ಕಾರ ಹೇಳಿಕೊಂಡಿದೆ. ಆದರೆ ಹಲವು ರಾಜಕೀಯ ವೀಕ್ಷಕರು ಗೆರಿಲ್ಲಾ ಪಡೆಗಳು ಉದ್ದೇಶಪೂರ್ವಕವಾಗಿ ಈ ರೀತಿ ಪ್ರತಿರೋಧ ತೋರಿಲ್ಲ. ಗೆರಿಲ್ಲಾ ನಾಯಕರನ್ನು ಬಂಧಿಸಿದ್ದು ನಿಜವಾದರೆ ಅವರನ್ನು ಬಿಡುಗಡೆಮಾಡಲು, ಭಯೋತ್ಪಾದಕ ಕೃತ್ಯಗಳು ಆರಂಭವಾಗಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ನಡುವೆ ಮೆಕ್ಸಿಕೋದ ಆರ್ಥಿಕ ಬಿಕ್ಕಟ್ಟಿನಿಂದ ಕಂಗಲಾದ ಮೆಕ್ಸಿಕನ್ನರು ಅಮೇರಿಕಕ್ಕೆ ಉದ್ಯೋಗಳಿಗಾಗಿ ವಲಸೆ ಆರಂಭಿಸಿದ್ದು, ಅವರನ್ನು ಕ್ರೂರ ರೀತಿಯಲ್ಲಿ ಅಮೇರಿಕದ ಗಡಿಭದ್ರತಾ ಪಡೆಗಳು ಹಿಂಸಿಸುತ್ತಿದ್ದಾರೆ. ವಲಸೆಗಾರರನ್ನು ಕಳ್ಳಸಾಗಾಣಿಕೆ ಗೊಳಿಸುವ ಮಾಫಿಯಾ ಗ್ಯಾಂಗ್‌ಗಳು ಹುಟ್ಟಿಕೊಂಡಿವೆ. ಇವು ಭಾರಿ ಲಾಭ ಮಾಡುವುದಲ್ಲದೆ ಹಲವಾರು ಭಾರಿ ಅಮೇರಿಕದಲ್ಲಿ ಉದ್ಯೋಗ ಕೊಡಿಸುತ್ತೇವೆ ಎಂಬ ಭರವಸೆ ತೋರಿ ಮಾದಕ ದ್ರವ್ಯ ಕಳ್ಳಸಾಗಾಣಿಕೆಗೆ ಬಳಸುವುದು, ಅಮೇರಿಕನ್ ಗಡಿ ಪಡೆಗಳಿಗಿಂತ ಹಣ ಪಡೆದು ಅವರನ್ನು ಬಂಧಿಸುವುದು. ಇತ್ಯಾದಿ ರೀತಿಯಲ್ಲಿ ಮೋಸದಲ್ಲೂ ತೊಡಗಿದ್ದಾರೆ. ಅಮೇರಿಕಕ್ಕೆ ವಲಸೆ ಹೋಗುವ ಪ್ರಯತ್ನದಲ್ಲಿ ವಿಫಲರಾದವರನ್ನು ಅಮೇರಿಕ ಅತ್ಯಂತ ಕ್ರೂರವಾಗಿ ನಡೆಸಿಕೊಳ್ಳುತ್ತಿದೆ.

ಗಡಿರಹಿತ ಮುಕ್ತ ಮಾರುಕಟ್ಟೆ 'ನಾಫ್ತಾ'ದ ಬಗ್ಗೆ ಮಾತನಾಡುವ ಅಮೇರಿಕನ್ ಸರ್ಕಾರ ಮಾನವರ ವಲಸೆಗೆ ಯಾಕೆ ಅಡ್ಡಗಾಲು ಹಾಕುತ್ತಿದೆ. ಇದೆಂತಹ ಇಬ್ಬಂದಿ ನೀತಿ!

ಚೀನಾದ ಜತೆ ವಾಣಿಜ್ಯ ಸಮರ ತಪ್ಪಿಸಲು ಅಮೇರಿಕ ಪ್ರಯತ್ನ

ಚೀನಾದಲ್ಲಿ 'ಪೇಟೆಂಟ್' 'ಟ್ರೇಡ್ ಮಾರ್ಕ್' ಉಲ್ಲಂಘನೆ ಬಗ್ಗೆ ಗದ್ದಲ ಎಬ್ಬಿಸಿ, ಹೆಚ್ಚು ಕಡಿಮೆ ವಾಣಿಜ್ಯ ಸಮರ ಆರಂಭಿಸಿರುವ ಅಮೇರಿಕ ಈಗ ಅದನ್ನು ತಪ್ಪಿಸಲು ಮಾತುಕತೆಯ ಹಾದಿ ಹಿಡಿಯುವ ಪ್ರಯತ್ನ ಮಾಡುತ್ತಿದೆ. ಚೀನಾ ಮಾತುಕತೆಗೆ ಪ್ರತಿನಿಧಿಗಳನ್ನು ವಾಶಿಂಗ್‌ಟನ್‌ಗೆ ಕಳಿಸಲು ನಿರಾಕರಿಸಿದ ಮೇಲೆ, ಅಮೇರಿಕ ತನ್ನ ಪ್ರತಿನಿಧಿಗಳನ್ನು ಮುಂದಿನ ವಾರ ಚೀನಾಕ್ಕೆ ಕಳಿಸಲಿದೆ.

ವಿಡಿಯೋ, ಫಿಲಂ ಹಾಗೂ ಸಂಗೀತದ ಕ್ಯಾಸೆಟ್ಟುಗಳ ತಯಾರಕರನ್ನು ಬಿಟ್ಟು ಯಾವ ವಾಣಿಜ್ಯ ಸಂಘಟನೆಗಳು ವಾಣಿಜ್ಯ ಸಮರ ಆರಂಭಿಸಿರುವುದನ್ನು ಬೆಂಬಲಿಸಿಲ್ಲ. ಚೀನಾದ ವಿರುದ್ಧ ವಾಣಿಜ್ಯ ಸಮರ ಆರಂಭಿಸಿದರೆ ಚೀನಾದಲ್ಲಿ ಬಂಡವಾಳ ಹೂಡಿಕೆ ತಪ್ಪಿಹೋಗಿ, ಯುರೋಪು ಜಪಾನುಗಳು ಇದರ ಲಾಭ ಪಡೆಯುವವರ ಬಗ್ಗೆ ಅವರಿಗೆ ಆತಂಕ ಇದೆ. ಚೀನಾ ಜಾಗತೀಕರಣ, ಅಂತರ್ರಾಷ್ಟ್ರೀಯವಾಗಿದ್ದರ ಜತೆ ಆರ್ಥಿಕ ರಾಜಕೀಯ ಸಾರ್ವಭೌಮತೆ, ಆತ್ಮಗೌರವವನ್ನು ಹೇಗೆ ಎತ್ತಿ ಹಿಡಿಯಬಹುದು ಎಂದು ತೋರಿಸಿಕೊಟ್ಟಿದೆ.

ಶೀತ ಸಮರ ಮುಗಿದರೂ(?) ಏಕಿಷ್ಟು ರಕ್ಷಣಾ ಬಜೆಟ್

ಸೋವಿಯೆತ್ ಒಕ್ಕೂಟ ೮೦ರ ದಶಕದಲ್ಲಿ ಸ್ವಇಚ್ಛೆಯಿಂದ ಮಾಡಿದ ಭಾರಿ ರಕ್ಷಣಾವೆಚ್ಚದ ಕಡಿತದಿಂದ, ಜಗತ್ತಿನಾದ್ಯಂತ ಅನಗತ್ಯ ರಕ್ಷಣಾ ವೆಚ್ಚ ಕಡಿಮೆಯಾಗುತ್ತದೆ. ಶೀತ ಸಮರ ಮುಗಿದು ಶಾಂತಿ ಏರ್ಪಡುತ್ತದೆ ಎಂದೆಲ್ಲಾ ಭಾವಿಸಲಾಗಿತ್ತು. ಶೀತ ಸಮರ ಮುಗಿದಿದ್ದರೂ, ಕ್ಲಿಂಟನ್ 1996ರ ಸಾಲಿಗೆ 262 ಶತಕೋಟಿ ಡಾಲರ್ ರಕ್ಷಣಾ ಬಜೆಟ್ ಮಂಡಿಸಿದ್ದಾರೆ. ಇದರಲ್ಲಿ ಮುಖ್ಯವಾಗಿ ಅತ್ಯಾಧುನಿಕ ಮೂರು ಕ್ಷಿಪಣಿ ಹಾಗೂ ಕ್ಷಿಪಣಿ ವಿರುದ್ಧ ರಕ್ಷಣಾ ಕಾರ್ಯಕ್ರಮಗಳು ಸೇರಿವೆ. ಹೊಸ ಶಸ್ತ್ರಾಸ್ತ್ರ ವ್ಯವಸ್ಥೆಗಳನ್ನು ತಯಾರಿಸುವ ಅವಶ್ಯಕತೆ ಇಲ್ಲದಿರುವುದು, ಶೀತ ಸಮರದ ಕೊನೆಯ ನೇರ ಪರಿಣಾಮವಾಗಿರಬೇಕಿತ್ತು. ಹಾಗೇ ಆಗಿಲ್ಲ. ಕೊಲ್ಲಿಯುದ್ಧದಂತಹ ಎರಡು ಯುದ್ಧಗಳನ್ನು ಏಕಕಾಲಕ್ಕೆ ನಡೆಸುವ ಅಗತ್ಯ ಬೀಳುತ್ತದೆ ಎಂಬುದರ ಮೇಲೆ ಆಧುನಿಕ ನೀತಿಯ ಪ್ರಕಾರ ರಕ್ಷಣಾ ವೆಚ್ಚಗಳಲ್ಲಿ ಲೆಕ್ಕಿಸಿರುವುದನ್ನು ಅಧ್ಯಕ್ಷ ಕ್ಲಿಂಟನ್ ಸಮರ್ಥಿಸಿಕೊಂಡಿದ್ದಾರೆ. ರಕ್ಷಣಾ ವೆಚ್ಚದಲ್ಲಿ ಕಡಿತ ಮಾಡುತ್ತೇನೆ ಎಂದು ಗೆದ್ದು ಬಂದ ಅಧ್ಯಕ್ಷ ಕ್ಲಿಂಟನ್‌ಗೆ ಅಮೇರಿಕದ ಮಿಲಿಟರಿ-ಕೈಗಾರಿಕಾ ಸಂಕೀರ್ಣ ಅಣತಿ ಮೀರುವುದು ಸಾಧ್ಯವಾಗುತ್ತಿಲ್ಲ.

ಮಂಡೇಲಾ ಬಿಡುಗಡೆಯ 5ನೇ ವಾರ್ಷಿಕ

ಮಂಡೇಲಾ ಹಾಗೂ ಅವರ ಹಲವಾರು ಒಡನಾಡಿಗಳು ದೀರ್ಘ ಸೆರೆವಾಸದಿಂದ ಬಿಡುಗಡೆಯಾಗಿ 5 ವರ್ಷಗಳು ಕಳೆದವು. ಆ ಸಂದರ್ಭದ 5ನೇ ವಾರ್ಷಿಕೋತ್ಸವದಲ್ಲಿ, ಮಂಡೇಲಾ ಹಾಗೂ ಅವರ ಹಲವಾರು ಒಡನಾಡಿಗಳು ಅವರನ್ನು ದೀರ್ಘಕಾಲ ಬಂಧಿಸಿಟ್ಟಿದ್ದ ಕುಖ್ಯಾತ ರೊಬಿನ್ ದ್ವೀಪದ ಜೈಲಿಗೆ ಭೇಟಿ ನೀಡಿದರು. ಸುಮಾರು 1300 ಮಾಜಿ ಬಂಧಿಗಳಿಗೆ ಈ ಬೇಟಿ ಅತ್ಯಂತ ಭಾವಪೂರ್ಣವಾಗಿತ್ತು. ಹಲವರು ಈ ಭೇಟಿಯ ನಂತರ ನಡೆದ ವರದಿಗಾರರ ಜತೆ ಮಾತನಾಡಲಾಗದ ಗದ್ಗದಿತರಾಗಿದ್ದರು.

ಮನುಷ್ಯರನ್ನು ವಿಕಿರಣಕ್ಕೆ ಬಲಿಪಶು ಮಾಡಿದ ಅಮೇರಿಕ

ಅಮೇರಿಕನ್ ಸರ್ಕಾರ ನೇಮಿಸಿದ ಕಮೀಶನ್ ಒಂದು, ಅಮೇರಿಕದಲ್ಲಿ 154 ವಿಕಿರಣ ಪ್ರಯೋಗಗಳಲ್ಲಿ ಒಂಭತ್ತು ಸಾವಿರಕ್ಕೂ ಹೆಚ್ಚು ಜನರ ಮೇಲೆ ನಡೆಸಲಾಯಿತು ಎಂಬುದನ್ನು ಸಾಬೀತುಗೊಳಿಸಿದೆ. ಈ ರೀತಿಯ ಪ್ರಯೋಗಕ್ಕೆ ಒಳಗಾದವರಲ್ಲಿ ಬಂಧಿಗಳು, ಮಾನಸಿಕ ರೋಗಿಗಳು, ಮತ್ತು ಮಕ್ಕಳು ಸೇರಿದ್ದಾರೆ ಎಂದು ವರದಿ ಒಪ್ಪಿಕೊಂಡಿದೆ.

1969ರಲ್ಲಿ ಟೆನೆಸ್ಸಿ ಪ್ರಾಂತ್ಯದ ವಾಂಡರ್ ಬಿಟ್ಟು ವಿಶ್ವವಿದ್ಯಾಲಯದಲ್ಲಿ ನಡೆಸಲಾದ ಪ್ರಯೋಗಗಳಲ್ಲಿ, ನವಜಾತ ಶಿಶುಗಳಿಗೆ ಕ್ರೋಮಿಯಂ ೫೧ ಇಂಜೆಕ್ಷನ್ ಕೊಡಲಾಯಿತು. ರಕ್ತ ಸ್ರಾವದ ಬಗ್ಗೆ ಅಧ್ಯಯನ ಮಾಡುವುದು ಈ ಪ್ರಯೋಗದ ಉದ್ದೇಶವಾಗಿತ್ತು.

ಜಗತ್ತಿನ ಎಲ್ಲಡೆ ಮಾನವ ಹಕ್ಕುಗಳ ಬಗ್ಗೆ ಬೊಬ್ಬಿಡುವ ಅಮೇರಿಕನ್ ಸರ್ಕಾರ ಈ ಅಮಾನುಷ ಕೃತ್ಯಕ್ಕೆ ಯಾವ ಶಿಕ್ಷೆ?

ಸಿಪಿಐ(ಎಂ) ತಾಲೂಕು ಸಮ್ಮೇಳನ

ಉಡುಪಿ: ಸಿಪಿಐ(ಎಂ) ಉಡುಪಿ ತಾಲೂಕಿನ 15 ನೇ ಜಿಲ್ಲಾ ಸಮ್ಮೇಳನ ಉಡುಪಿ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾ ಭವನದಲ್ಲಿ ಫೆಬ್ರವರಿ ೫ ರಂದು ನಡೆಯಿತು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀಪಿ. ವಿಶ್ವನಾಥರ್ಯ ಅವರು ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಜೋಗು ಸುವರ್ಣ ಸ್ವಾಗತಿಸಿದರು. ಸಮ್ಮೇಳನವನ್ನು ಬಿ. ಮಾಧವ ರವರು ಉದ್ಘಾಟಿಸಿದರು.

ಸಮ್ಮೇಳನವು 11 ಮಂದಿಯ ನೂತನ ಸಮಿತಿಯನ್ನು ಆಯ್ಕೆ ಮಾಡಿತು ಕಾಂ. ವಿಶ್ವನಾಥರ್ಯ ಅವರು ಕಾರ್ಯದರ್ಶಿಯಾಗಿ ಆಯ್ಕೆಯಾದರ ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಕೆ.ಆರ್ ಶ್ರೀಯಾನ್, ಅಬ್ರಹಾಂ ಕರ್ಕಡ ಮತ್ತು ಕೆ.ಶಂಕರ್ ಅವರು ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ಕೊನೆಯಲ್ಲಿ ಸಂಜೀವ್ ನಾಯಕ್ ವಂದಿಸಿದರು.

ಸವದತ್ತಿ: ಸವದತ್ತಿ ತಾಲೂಕಿನ ಸಿಪಿಐ(ಎಂ) ನ ಸಮ್ಮೇಳನವು ಜನವರಿ 30 ರಂದು ಮಧ್ಯಾಹ್ನ ಎರಡು ಗಂಟೆಗೆ ಪ್ರಾರಂಭವಾಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಎಸ್.ಐ. ಸೊನ್ನದ ಅವರು ವಹಿಸಿದ್ದರು. ಸಮ್ಮೇಳನವನ್ನು ಕಾಂ.ನಿತ್ಯಾನಂದಸ್ವಾಮಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಿ.ಆರ್ ಭಟ್ ಅವರು ಆಗಮಿಸಿದ್ದರು. ಜಿಲ್ಲಾ ಸಮಿತಿಯ ಸದಸ್ಯರಾದ ಎಸ್.ಎಚ್,ಕಪ್ಪಣ್ಣವರ, ಪಿ.ಕುಲಕರ್ಣಿ ಅವರು ಸಮ್ಮೇಳನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದರು.

ಮೂರು ವರ್ಷದ ಪಕ್ಷದ ಕಾರ್ಯಕರ್ತರ ಚಟುವಟಿಕೆ ಅರ್ಥಾತ್ ಜೈಲ್ ಬರೋ, ಕಾಯ್ದೆಭಂಗ ಚಳುವಳಿ. ರಸ್ತೆತಡೆ ಚಳುವಳಿ ಇತ್ಯಾದಿ ಕಾರ್ಯಕ್ರಮಗಳ ವರದಿ ಸಲ್ಲಿಸಲಾಯಿತು. ವರದಿಯ ಮೇಲೆ ಚರ್ಚೆ ನಡೆಯಿತು. ಸದಸ್ಯರ ಸ್ವವಿಮರ್ಶೆ ನಡೆಯಿತು.

ಸದಸ್ಯತ್ವ ನವೀಕರಿಸಲಾಯಿತು. ಸವದತ್ತಿ ತಾಲೂಕಿನ ಪಕ್ಷದ ಶಾಖೆಗೆ ಕಾರ್ಯದರ್ಶಿಯಾಗಿ ಜೆ.ಬಿ.ತೊರಗಲ್ಲ, ಸಹಕಾರ್ಯದರ್ಶಿಯಾಗಿ ಬಿ,ವಿ, ಇಜಂತಕರ ಆಯ್ಕೆಯಾದರು.

ಫೆಬ್ರವರಿ ಮಧ್ಯಭಾಗದಲ್ಲಿ ನಡೆಯಲಿರುವ ಜಿಲ್ಲಾ ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಜೆ.ಬಿ.ತೊರಗಲ್ಲ, ಬಿ.ವಿ. ಇಜಂತಕರ ಎಸ್.ಐ. ಸೊನ್ನದ, ಶ್ರೀಕಾಂತಹಟ್ಟಿ ಹೊಳಿ, ಮಲ್ಲಪ್ಪ ಮಾದರ, ಪಿ.ಡಿ.ಸಕ್ರಿ ಅವರನ್ನು ಆಯ್ಕೆ ಮಾಡಲಾಯಿತು. ಪಕ್ಷ ಸಂಘಟನೆಯ ಬಗ್ಗೆ ಕಾಂ.ಸಿ.ಆರ್.ಭಟ್ ಅವರು ಮಾತನಾಡಿದರು.

ಡಿವೈಎಫ್‌ಐ ಘಟಕ ರಚನೆ

ಕೂಡ್ಲು: ಬೆಂಗಳೂರು ದಕ್ಷಿಣ ತಾಲ್ಲೂಕು ಕೂಡ್ಲು ಗ್ರಾಮದಲ್ಲಿ ಫೆಬ್ರವರಿ 12 ರಂದು ಡಿವೈಎಫ್‌ಐ ಘಟಕ ರಚನೆ ಮಾಡಲಾಯಿತು. ಸುಮಾರು 35 ಜನ ಭಾಗವಹಿಸಿದ ಸಭೆಯನ್ನು ಉದ್ದೇಶಿಸಿ ಎಸ್‌ಎಫ್‌ಐನ ರಾಜ್ಯಕಾರ್ಯದರ್ಶಿ ಕಾಂ. ಕೆ.ಪ್ರಕಾಶ್ ಮಾತನಾಡಿದರು.

ಡಿವೈಎಫ್‌ಐನ ಬೆಂಗಳೂರು ಜಿಲ್ಲಾ ಸಮಿತಿ ಅಧ್ಯಕ್ಷರಾದ ಕಾಂ. ಅಶೋಕನ್ ಸಂಘಟನೆಯ ಬಗ್ಗೆಯ ವಿವರಗಳು ಮತ್ತು ಯುವಜನರನ್ನು ಯಾವ ರೀತಿ ಸಂಘಟಿಸಬೇಕೆಂಬುದರ ಬಗ್ಗೆ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಕಾಂ. ಲಕ್ಷ್ಮಣ್ ವಹಿಸಿದ್ದರು.

17 ಜನರ ಸಮಿತಿ ರಚಿಸಲಾಯಿತು ಕಾಂ. ಪ್ರಕಾಶ್ ಅಧ್ಯಕ್ಷರಾಗಿ, ಕಾಂ.ಶಂಕರ್ ಉಪಾಧ್ಯಕ್ಷರಾಗಿ, ಕಾಂ. ರಾಜಗೋಪಾಲ್ ಕಾರ್ಯದರ್ಶಿಯಾಗಿ,ಕಾಂ. ಮುನಿರಾಜು ಸಹಕಾರ್ಯದರ್ಶಿಯಾಗಿ ಮತ್ತು ಕಾಂ. ಪಿಳ್ಳಪ್ಪ ಖಜಾಂಚಿಯಾಗಿ ಆಯ್ಕೆಯಾದರು

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶಕ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462 ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಅರ್ಜುನ್‌ಸಿಂಗ್ ವಜಾ ಕಾಂಗ್ರೆಸ್ಸಿನ ಸಮಸ್ಯೆಗಳನ್ನು ಪರಿಹರಿಸಿಲ್ಲ

-ಸುರ್ಜಿತ್

ಮಾಜಿ ಕೇಂದ್ರ ಮಂತ್ರಿ ಅರ್ಜುನ್‌ಸಿಂಗ್‌ರನ್ನು 6 ವರ್ಷಗಳ ಅವಧಿಗೆ ವಜಾ ಮಾಡಿದ್ದು ಕಾಂಗ್ರೆಸ್ ಈಗ ಎದುರಿಸುತ್ತಿರುವ ಯಾವ ಸಮಸ್ಯೆಯನ್ನು ಪರಿಹರಿಸುವುದಿಲ್ಲ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಅಭಿಪ್ರಾಯಪಟ್ಟಿದ್ದಾರೆ. ಅವರು ಅರ್ಜುನ್ ಸಿಂಗ್‌ರ ವಜಾ ಬಗ್ಗೆ ಐ.ಎನ್.ಎಸ್. ಸುದ್ದಿ ಸಂಸ್ಥೆ ಜತೆ ಮಾತನಾಡುತ್ತಿದ್ದರು. ಅವರೆತ್ತಿದ್ದ ಪ್ರಶ್ನೆಗಳು ಇನ್ನೂ ಇವೆ, ಆ ಪಕ್ಷದೊಳಗೆ ಇನ್ನೂ ಚರ್ಚೆಯಲ್ಲಿವೆ. ಕಾಂಗ್ರೆಸ್ ನ ಸಂಘಟನಾ ಸಮಸ್ಯೆಗಳ ಬಗ್ಗೆ ಸಿಪಿಐ(ಎಂ) ಯೋಚಿಸುವುದಿಲ್ಲ, ಆದರೆ ಧೋರಣೆಗಳ ಪ್ರಶ್ನೆಗಳ ಬಗ್ಗೆ ಸಿಪಿಐ(ಎಂ) ಯೋಚಿಸಲೇಬೇಕಾಗುತ್ತದೆ ಎಂದಿರುವ ಕಾಂ. ಸುರ್ಜಿತ್ ಆಂಧ್ರ, ಕರ್ನಾಟಕ ಚುನಾವಣೆಗಳಿಂದಲೂ ಕಾಂಗ್ರೆಸ್ ಯಾವದೇ ಪಾಠ ಕಲಿಯುವ ಸಾಮರ್ಥ್ಯ ಹೊಂದಿಲ್ಲ ಎಂದೇ ಕಾಣುತ್ತದೆ, ಹೀಗೆ ಮುಂದುವರಿದರೆ ಅದು ಜನಗಳಿಂದ ಸಂಪೂರ್ಣ ದೂರ ತಳ್ಳಲ್ಪಡುತ್ತದೆ, ಜನಸಾಮಾನ್ಯರ ಮೇಲೆ ಅದರ ಪ್ರಭಾವ ಏನೇನೂ ಉಳಿಯಲಾಗದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಕಾಂಗ್ರೆಸ್ಸಿಗರು ಮತ್ತು ಕಾಂಗ್ರೆಸ್ ಪಕ್ಷ ಈ ದೇಶದ ವಿಶಾಲ ಬಡಜನಸಮೂಹಗಳೊಂದಿಗೆ, ಅಲ್ಪಸಂಖ್ಯಾತರೊಂದಿಗೆ, ಸಂಪರ್ಕವನ್ನುಕಳಕೊಳ್ಳುತ್ತಲೇ ಇದ್ದಾರೆ. ಈ ಜನವಿಭಾಗಗಳೇ ಇದುವರೆಗೆ ಅದರ ನೆಲೆ ಹಾಗೂ ಅದಕ್ಕೆ ಸಾಮೂಹಿಕ ರಾಷ್ಟ್ರೀಯ ಮನ್ನಣೆ ನೀಡಿದ್ದ ವಿಭಾಗಗಳು ಪಕ್ಷದ ಹಾಗೂ ಸರ್ಕಾರದ ಎಲ್ಲಾ ಮಟ್ಟಗಳಲ್ಲಿ ತಾಂಡವವಾಡುತ್ತಿರುವ, ಉಸಿರುಗಟ್ಟಿಸುವ ಸಿನಿಕ ಭ್ರಷ್ಟಾಚಾರದ ಬಗ್ಗೆ ಆ ಪಕ್ಷದ ನಿರ್ಲಕ್ಷ್ಯ ಹಾಗೂ ಅದನ್ನು ಮನ್ನಿಸಿರುವ ರೀತಿ ಆಘಾತಕಾರಿ. ಹೀಗಿರುವಾಗ ಕಾಂಗ್ರೆಸ್ ನ ಹಿಂದೆ ಯಾರು ತಾನೇ ನೆರೆಯಬಲ್ಲರು ಎಂದು ಸುರ್ಜಿತ್ ಪ್ರಶ್ನಿಸಿದ್ದಾರೆ.

1987ರಲ್ಲಿ ಕಾಂಗ್ರೆಸ್ ಪಕ್ಷ ವಿ.ಪಿ.ಸಿಂಗ್‌ರನ್ನು ಹೊರಹಾಕಿದಾಗ ಆ ಪಕ್ಷ ಬಲಶಾಲಿಯಾಗಿತ್ತು, ವಿ.ಪಿ. ಸಿಂಗ್ ಬೋಫೋರ್ಸ್ ಪ್ರಶ್ನೆಯ ಮೇಲೆ ಹೊರಬಂದರೂ, ಜನ ಅವರ ಸುತ್ತ ನೆರೆದರೂ ಅವರ ಜತೆ ಹೊರಬಂದ ಕಾಂಗ್ರೆಸ್ಸಿಗರ ಸಂಖ್ಯೆ ಅತ್ಯಲ್ಪ. ಆದರೆ ಇಂದು ಕಾಂಗ್ರೆಸ್ ಭಿನ್ನಾಭಿಪ್ರಾಯಗಳಿಂದ ಹೋಳುಹೋಳಾಗಿರುವ ಪಕ್ಷ, ಕೇರಳ, ತಮಿಳುನಾಡು, ಮಧ್ಯಪ್ರದೇಶ, ಉತ್ತರ ಪ್ರದಶ ಇತ್ಯಾದಿಗಳಲ್ಲಿ ಗುಂಪುಗಾರಿಕೆ, ವೈಯುಕ್ತಿಕ ಸ್ಪರ್ಧೆಗಳಿಂದ ತುಂಬಿರುವ ಪಕ್ಷ, ಅರ್ಜುನ್‌ಸಿಂಗ್ ಕಾಂಗ್ರೆಸ್ಸಿಗರಿಗೆ ಮನವಿ ಮಾಡಿಕೊಳ್ಳಲು ಸಮರ್ಥರಾಗಿದ್ದಾರೆ. ಆದರೆ ಇದು ಕೊನೆಗೆ ಕಾಂಗ್ರೆಸ್ಸಿನ ವಿಭಜನೆಗೆ ದಾರಿ ಮಾಡಿಕೊಡುತ್ತದೋ ಎಂದು ಕಾದುನೋಡಬೇಕು. ಮಹಾರಾಷ್ಟ್ರ, ಬಿಹಾರ, ಒರಿಸ್ಸಾದಲ್ಲಿನ ಪ್ರಸ್ತುತ ಚುನಾವಣೆಗಳ ನಂತರವೇ ಚಿತ್ರ ಸ್ಪಷ್ಟವಾಗುತ್ತದೆ ಎಂದು ಸುರ್ಜಿತ್ ಹೇಳಿದ್ದಾರೆ.

ಭಾರತದ ಜನಸಾಮಾನ್ಯರ, ಮಹಿಳೆಯರ ಪರಿಸ್ಥಿತಿ ಬಗ್ಗೆ ಶೇಷನ್‌ರು ಇಷ್ಟೊಂದು ಮಹಾ ಅಜ್ಞಾನಿಯೇ?

ಮಹಿಳಾ ಸಂಘಟನೆಯ ಪ್ರಶ್ನೆ

ಮಹಿಳೆಯರ ಬಗ್ಗೆ ಮುಖ್ಯ ಚುನಾವಣಾ ಆಯುಕ್ತ ಟಿ.ಎನ್.ಶೇಷನ್‌ರ ಆಕ್ಷೇಪಾರ್ಹ ಟಿಪ್ಪಣಿಗಳನ್ನು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ (AIDWA) ಬಲವಾಗಿ ಪ್ರತಿಭಟಿಸಿದೆ. ಉಚ್ಚ ಸ್ಥಾನಗಳಲ್ಲಿರುವ ಶೇಷನ್‌ರಂತಹ ಮಹಾನುಭಾವರುಗಳು ಹಾಸ್ಯ ಚಟಾಕಿಯ ಹೆಸರಲ್ಲಿ ಪಿತೃ ಪ್ರಧಾನ ಕುಟುಂಬಗಳ ಪೂರ್ವಾಗ್ರಹಗಳನ್ನು ಈಗಲೂ ಪ್ರಚಾರ ಮಾಡುತ್ತಿರುವುದು ಅತ್ಯಂತ ದುರದೃಷ್ಟಕರ ಎಂದಿರುವ ಈ ಮಹಿಳಾ ಸಂಘಟನೆ ಶೇಷನ್ ತನಗೇ ಒಂದು ನೀತಿ ಸಂಹಿತೆ ರೂಪಿಸಿಕೊಳ್ಳಬೇಕಾಗಿದೆ ಎಂದು ಟೀಕಿಸಿದೆ.

'ಪಯೋನೀರ್' ದೈನಿಕದಲ್ಲಿ ಫೆಬ್ರವರಿ 5 ರಂದು ಒಂದು ಸುದ್ದಿ ಪ್ರಕಟವಾಗಿತ್ತು. ಅದರ ಪ್ರಕಾರ ಶೇಷನ್ ದಿಲ್ಲಿ ವಿಶ್ವವಿದ್ಯಾಲಯದಲ್ಲಿ ಒಂದು ಭಾಷಣ ನೀಡುತ್ತಾ "ಮಹಿಳೆಯರು ಉದ್ಯೋಗ ಏಕೆ ಅರಸುತ್ತಾರೆ? ಏಕೆಂದರೆ ಅವರಿಗೆ 21 ಇಂಚಿನ ಟೆಲಿವಿಶನ್ ಸಾಕಾಗುವುದಿಲ್ಲ, ಇನ್ನೂ ದೊಡ್ಡದು ಬೇಕು" ಎಂದರಂತೆ. ಮುಂದುವರಿದು "ಮಮ್ಮಿ ರಮ್ಮಿ ಮಾಡುತ್ತಿದ್ದಾರೆ ಅಂತಹ ಮಗುವಿಗೆ ತಾಯಿಯಿಂದ ಎಂತಹ ಮೌಲ್ಯಗಳು, ಚಾರಿತ್ರ್ಯ ಸಿಗಲು ಸಾಧ್ಯ?" ಎಂದರಂತೆ.

ಭಾರತ ಜನಸಾಮಾನ್ಯ ಆರ್ಥಿಕ ಬಿಕ್ಕಟ್ಟಿನಿಂದಾಗಿ ಎಂತಹ ಪರಿಸ್ಥಿತಿ ಎದುರಿಸುತ್ತಿದ್ದಾರೆ, ಅದರಲ್ಲೂ ಮಹಿಳೆಯರು ಮನೆಯ ಹೊರಗೆ ಮತ್ತು ಒಳಗೆ ಕೆಲಸದ ಇಮ್ಮಡಿ ಹೊರೆಯನ್ನು ಹೇಗೆ ಹೊರಬೇಕಾಗುತ್ತದೆ ಎಂಬುದರ ಬಗ್ಗೆ ಸಾಮಾಜಿಕವಾಗಿ, ಆರ್ಥಿಕವಾಗಿ ವಿಶೇಷ ಸೌಲಭ್ಯಗಳನ್ನು ಪಡೆದ ವ್ಯಕ್ತಿಗಳಲ್ಲಿ ಇರುವ ಇಂತಹ ಅಜ್ಞಾನ ಅತ್ಯಂತ ಆಕ್ಷೇಪಾರ್ಹ ಎಂದು ಎಐಡಿಡಬ್ಲ್ಯುಎ ಹೇಳಿದೆ. ಇಂತಹ ಅಜ್ಞಾನವನ್ನು ಪ್ರಭಾವಶಾಲಿ ಸ್ಥಾನಗಳಲ್ಲಿರುವ ಶೇಷನ್‌ರಂತವರು ಪ್ರತಿಪಾದಿಸುತ್ತಿರುವುದು ಇನ್ನಷ್ಟು [illegible]ನೀಯ, ಶೇಷನ್‌ರಿಗೆ ಕುಟುಂಬದ ಒಳಗೂ ಮಹಿಳೆ ಸಾಮಾನ್ಯವಾಗಿ ಅಸಮಾನತೆಗೆ ಬಲಿಯಾಗಿರುತ್ತಾಳೆ, ಮನೆಯೊಳಗಿನ ಹಿಂಸಾಚಾರಗಳು ಹೆಚ್ಚುತ್ತಿರುವುದೇ ಇವನ್ನು ತೋರಿಸುತ್ತದೆ ಎಂಬುದರ ಅರಿವು ಕೂಡಾ ಇದ್ದಂತಿಲ್ಲ ಎಂದು ಎಐಡಿಡಬ್ಲ್ಯುಎ ಹೀಯಾಳಿಸಿದೆ.

ಇದು ಸಾಮಾನ್ಯವಾಗಿ ಪಿತೃ ಪ್ರಧಾನ ಕುಟುಂಬಗಳ ಪೂರ್ವಗ್ರಹ ಪೀಡಿತ ವೃದ್ಧರು ಮಹಿಳೆಯರ ವಿರುದ್ಧ ಮಾಡುವ ಹಾಸ್ಯವೆಂದು ನಿರ್ಲಕ್ಷಿಸಬಹುದಾಗಿತ್ತು. ಆದರೆ ಶೇಷನ್‌ರ ಪ್ರತಿಯೊಂದು ಟಿಪ್ಪಣಿಗೂ ವ್ಯಾಪಕ ಪ್ರಚಾರ ನೀಡಲಾಗುತ್ತದೆ, ಅವರ ಟಿಪ್ಪಣಿಗಳಿಗ ಸವಾಲು ಹಾಕದಿದ್ದರೆ ಮಹಿಳೆಯರ ವಿರುದ್ಧ ಅನ್ಯಾಯದ ಹೊರೆಯನ್ನು ಶೇಷನ್ ರು ಪ್ರತಿಪಾದಿಸುವ ಇಂತಹ "ಮೌಲ್ಯ"ಗಳು ಇನ್ನಷ್ಟು ಹೆಚ್ಚಿಸುತ್ತವೆ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯಪಟ್ಟಿದೆ.

ಬಿಜೆಪಿಯ ಕುಟಿಲ ರಾಜಕೀಯ ಇನ್ನಷ್ಟು ಬಯಲಾಗುತ್ತಿದೆ.

ದೇಶಪ್ರೇಮ ಬಿಜೆಪಿಯವರ ಗುತ್ತಿಗೆಯಲ್ಲ: ಪಾಟೀಲ್ ಪುಟ್ಟಪ್ಪ ಖಂಡನೆ

ಹಿಂದೂ ಧರ್ಮದ ರಕ್ಷಣೆ, ರಾಷ್ಟ್ರಧ್ವಜ ಗೌರವ ಇತ್ಯಾದಿ, ಇತ್ಯಾದಿ ಬಿಜೆಪಿಯ ಕೋಮು ರಾಜಕೀಯ ದಾಳಗಳಷ್ಟೇ ಹೊರತು ಆ ಬಗ್ಗೆ ಅದಕ್ಕೆ ಯಾವ ಪ್ರಾಮಾಣಿಕ ಕಳಕಳಿಯೂ ಇಲ್ಲ ಎನ್ನುವುದು ಹೆಚ್ಚೆಚ್ಚು ಜನರಿಗೆ ಸ್ಪಷ್ಟವಾಗುತ್ತಿದೆ. ಇದಕ್ಕೆ ಇತ್ತೀಚಿನ ಉದಾಹರಣೆ ಹುಬ್ಬಳ್ಳಿಯಲ್ಲಿ ಈದ್ಗಾ ಧ್ವಜಾರೋಹಣ ವಿವಾದ ಮೂರು ವರ್ಷಗಳ ಹಿಂದೆ ಆಗಿನ ಬಿಜೆಪಿ ಅಧ್ಯಕ್ಷ ಮುರುಳಿ ಮನೋಹರ ಜೋಷಿಯವರ ಕುಖ್ಯಾತ 'ಶ್ರೀನಗರ ಯಾತ್ರೆ'ಯ ಸಂದರ್ಭದಲ್ಲಿ ಈ ವಿವಾದವನ್ನು ಹುಟ್ಟುಹಾಕಲಾಗಿತ್ತು. ಅಂದು ಕಾಶ್ಮೀರದ ಶ್ರೀನಗರದಲ್ಲಿ ಕಾಂಗ್ರೆ ಸರ್ಕಾರದ ಕೃಪಾಕಟಾಕ್ಷದಡಿ ಭದ್ರತಾ ಪಡೆಗಳ ಕಾವಲಿನಲ್ಲಿ "ಧ್ವಜಾರೋಹಣ" ಮಾಡಿದ 'ವೀರ' ಜೋಷಿಯವರು ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಮತ್ತೊಮ್ಮೆ ತಮ್ಮ ನಿಜಬಣ್ಣ ತೋರಿದರು. ಈದ್ಗಾ ವಿವಾದ ತಾವು ಬಯಸಿದಂತೆ ಪರಿಹಾರವಾಗದ್ದರಿಂದ ಬಿಜೆಪಿ ಮಂದಿ ಯಾವ ರೀತಿ ಕುಪಿತರಾಗಿದ್ದಾರೆ ಎಂಬುದನ್ನು ತಡವಾಗಿ ಅವರು ಆಚರಿಸಿದ 'ವಿಜಯೋತ್ಸವ'ದ ಸಂದರ್ಭದಲ್ಲಿ ಪ್ರಕಟಗೊಂಡಿತು.

"ಈದ್ಗಾ ಮೈದಾನದಲ್ಲಿ ಕೇವಲ ನಿಗದಿತ ಜನರ ಮಧ್ಯೆ ಸುತ್ತಲೂ ಪರದೆ ಕಟ್ಟಿ ರಾಷ್ಟ್ರಧ್ವಜ ಹಾರಿಸುವುದರ ಬದಲು ಅದು ಕಾಶ್ಮೀರದ ಲಾಲ್ ಚೌಕದಲ್ಲಾದಂತೆ ಸಾರ್ವಜನಿಕ ಸಮಾರಂಭವಾಗಬೇಕಿತ್ತು" ಎಂದರಂತೆ. ಈ "ವಿಜಯೋತ್ಸವ"ದಲ್ಲಿ ಮಾತನಾಡುತ್ತ ಜೋಷಿಯವರು. ಆದರೆ ಸ್ವಾಮಿ, ನಿಮ್ಮ ಆ 'ವೀರ' ಧ್ವಜಾರೋಹಣ ನಿಮ್ಮ 'ಯಾತ್ರೆ'ಯ ಕಾರನ್ನು ಬಿಟ್ಟೋಡಿ ಕಾಂಗ್ರೆ ಸರ್ಕಾರ ಒದಗಿಸಿದ ವಿಮಾನದಲ್ಲಿಯೇ ಲಾಲ್ ಚೌಕದಲ್ಲಿಳಿದು ಅದೇ ಸರಕಾರ ಒದಗಿಸಿದ ಭದ್ರತಾ ಪಡೆಗಳು ಮಾತ್ರವಿದ್ದ, ಜತೆಗೆ ಕೈಬೆರಳೆಣಿಕೆಯಷ್ಟು ಬಿಜೆಪಿ ಮುಖಂಡರಿದ್ದ 'ಸಾರ್ವಜನಿಕ ಸಭೆ'ಯಲ್ಲಿ ನಡೆಯಿತು ಎಂಬುದು ಜಗತ್ತಿಗೇ ಗೊತ್ತಿದೆಯಲ್ಲ ಎಂದು ನಿಜವಾದ ದೇಶಪ್ರೇಮಿ ಜನ ಕೇಳುತ್ತಿದ್ದಾರೆ.

ಹಿರಿಯ ಪತ್ರಕರ್ತ ಪಾಟೀಲ್ ಪುಟ್ಟಪ್ಪನವರು ಜೋಷಿಯವರ ಈ ಅಪಹಾಸ್ಯಕರ ಸುಳ್ಳಿಗೆ ತೀವ್ರವಾಗಿ ಪ್ರತಿಕ್ರಿಯಿಸುತ್ತಾ "ನಮಗೆ ಜ್ವಾಲೆಯನ್ನು ನಂದಿಸುವವರು ಬೇಕೆ ಹೊರತು, ಕೋಮು ದಳ್ಳುರಿ ಹೆಚ್ಚಿಸುವಂತೆ ಮಾಡುವವರು ಬೇಕಿಲ್ಲ, ಡಾ. ಜೋಷಿ ಹಾಗೂ ಅವರಂತಹ ವ್ಯಕ್ತಿಗಳು ಹುಬ್ಬಳ್ಳಿಯಿಂದ ದೂರವಿರಬೇಕು ಎಂಬುದೇ ನಗರದ ಜನತೆಯ ಆಶಯ" ಎಂದು ಎಚ್ಚರಿಸಿದ್ದಾರೆ.

"ಗಣರಾಜ್ಯೋತ್ಸವದಂದು ಈದ್ಗಾದಲ್ಲಿ ಧ್ವಜಾರೋಹಣ ನಡೆದರೆ ಮತ್ತೆ ಈ ವಿಷಯವನ್ನು ಎತ್ತುವುದಿಲ್ಲ ಎಂದು ಬಿಜೆಪಿ ಬಹಿರಂಗ ಹೇಳಿಕೆಯಲ್ಲಿ ತಿಳಿಸಿತ್ತು. ಆದರೆ ಹುಬ್ಬಳ್ಳಿ ಜನತೆ ಕೋಮುಸೌಹಾರ್ದ ಹಾಗೂ ಶಾಂತಿಯಿಂದ ಬದುಕುವುದು ಅವರಿಗೆ ಬೇಕಾಗಿಲ್ಲ" ಎಂದು ಪಾಟೀಲ್ ಪುಟ್ಟಪ್ಪ ಬೇಸರದಿಂದ ಹೇಳಿದ್ದಾರೆ.

ಹುಬ್ಬಳ್ಳಿಯ ಜನತೆಯಷ್ಟೇ ಅಲ್ಲ, ಇಡೀ ದೇಶದ ಜನತೆ ಸೌಹಾರ್ದ ಶಾಂತಿಯಿಂದ ಬದುಕುವುದು ಬಿಜೆಪಿಗೆ ಬೇಕಿಲ್ಲ ಎಂದು ಎಡಪಂಥೀಯರು ಆರಂಭದಿಂದಲೇ ಎಚ್ಚರಿಸಿಕೊಂಡು ಬಂದಿದ್ದಾರೆ. ಹುಬ್ಬಳ್ಳಿಯ ಈದ್ಗಾ ಅದಕ್ಕೆ ಇತ್ತೀಚಿನ ಇನ್ನೊಂದು ಉದಾಹರಣೆಯಷ್ಟೆ. ಸುಳ್ಳುಗಳು, ವಚನಭಂಗ, ಕುಟಿಲ ರಾಜಕಾರಣ ಬಿಜೆಪಿಯ ಜಾಯಮಾನ ಎಂದು ಮತ್ತೊಮ್ಮೆ ನೆನಪಿಸಿರುವ ಉದಾಹರಣೆಯಷ್ಟೆ.

"ಪ್ರಚೋದನಾತ್ಮಕ ಹೇಳಿಕೆ ನೀಡುವ ಮೂಲಕ ಬಿಜೆಪಿ ಧುರೀಣ ಡಾ. ಜೋಷಿ ಅವರು ಕೋಮುಭಾವನೆ ಕೆರಳಿಸಿ ಸೌಹಾರ್ದ ವಾತಾವರಣವನ್ನು ಕದಡುವ ಹವಣಿಕೆಯಲ್ಲಿದ್ದಾರೆ.... ಎಲ್ಲರನ್ನು ಸಂದೇಹದಿಂದ ನೋಡುವವರಂತೆ ಬಿಜೆಪಿಯವರು ವರ್ತಿಸದಿರಲಿ, ದೇಶಪ್ರೇಮ ಕೇವಲ ಅವರ ಗುತ್ತಿಗೆಯಲ್ಲ, ಮುಸ್ಲಿಮರಿಗೂ ಕೂಡಾ ರಾಷ್ಟ್ರಪ್ರೇಮದಲ್ಲಿ ಯಾರಿಗೂ ಕಡಿಮೆಯೇನಿಲ್ಲ" ಎನ್ನುವಾಗ ಪಾಟೀಲ್ ಪುಟ್ಟಪ್ಪ ಈ ದೇಶದ ಜಾತ್ಯಾತೀತರೆಲ್ಲರ ಭಾವನೆಗಳಿಗೆ ದನಿ ನೀಡಿದ್ದಾರೆ.

ಆದರೆ ಡಾ. ಗಂಗೂಬಾಯಿ ಹಾನಗಲ್ಲರಂತವರಿಗೆ ಬಿಜೆಪಿಯ ಈ ಕುಟಿಲ ರಾಜಕಾರಣ ಇನ್ನೂ ಅರ್ಥವಾದಂತಿಲ್ಲ, ಚಿಕ್ಕಂದಿನಿಂದಲೂ ತಾವು ರಾಷ್ಟ್ರಧ್ವಜದ ಬಗ್ಗೆ ಹೊಂದಿರುವ ಗೌರವವೇ ಈ 'ವಿಜಯೋತ್ಸ'ದಲ್ಲಿ ಅವರು ಭಾಗವಹಿಸುವಂತೆ ಮಾಡಿತಂತೆ. ಆದರೆ ಇದೇ ಮಂದಿ ೧೯೪೭ರಲ್ಲಿ ಪಕ್ಕದ ಧಾರವಾಡದ ಕಡಪಾ ಮೈದಾನದಲ್ಲಿ "ಭಗವಾ ಧ್ವಜದ ಬದಲು ಈ ಮೂರು ಬಣ್ಣ ಧ್ವಜ ವಾಯಿತಲ್ಲಾ" ಎಂದು ಗೋಳಿಡುತ್ತಾ ರಾಷ್ಟ್ರಧ್ವಜವನ್ನು ಹರಿದು ಚಿಂದಿ ಚಿಂದಿ ಮಾಡಿ ಹಾಕಿದ್ದರು ಎಂದು ಗಂಗೂಬಾಯಿಯವರಿಗೆ ಈಗಲೂ ತಿಳಿದಿಲ್ಲ ಎಂದು ನಾವು ತಿಳಿಯಬೇಕೆ?

[illegible]

ಪಕ್ಷ	ಸೀಟುಗಳು			ಶೇಕಡಾ ಮತಗಳಿಕೆ			ಶೇ. ಮತ	ಶೇ. ಮತ
	1989	1991	1994	1989	1991	1994	ಗಳಿಕೆಯಲ್ಲಿ ವ್ಯತ್ಯಾಸ 1989-94	ಗಳಿಕೆಯಲ್ಲಿ ವ್ಯತ್ಯಾಸ 1991-94
ಜನತಾದಳ	24	15	115	27.3	18.5	33.2	+5.9	+14.7
ಜನತಾ ಪಕ್ಷ	2	3	-	11.3	-	-	-	-
ಕಾಂಗ್ರೆ	178	139	36	45.1	-	27.3	-18	-
ಬಿಜೆಪಿ	4	57	40	4.2	28.7	16.7	+12.5	-12
ಕೆ.ಸಿ.ಪಿ	-	-	10	-	-	7.1	-	-

ಬನ್ನಿರೆಲ್ಲಾ ಸಾಗೋಣ ಗುಲ್ಬರ್ಗದತ್ತ....

ಪುಟ 3ರಿಂದ

ಸಮರ ಮುಖರ್ಜಿಯವರು 30 ಸಾವಿರಕ್ಕೂ ಮಿಕ್ಕಿದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದ್ದರು.

ಕಳೆದ 24 ವರ್ಷಗಳಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ಹಾಗೆಯೇ ಗುಲ್ಬರ್ಗ ಜಿಲ್ಲೆಯಲ್ಲಿ ಕೃಷ್ಣ-ಭೀಮಾನದಿಗಳ ನೀರು ಸಾಕಷ್ಟು ಹರಿದಿದೆ. ಇಂದು ನಾಲ್ಕು ಜಿಲ್ಲೆಗಳಲ್ಲಿ ಯುವಜನರ ಸಂಘಟನೆಗಳು ಬೆಳೆದಿವೆ, ಹೋರಾಟಗಳು ನಡೆದಿವೆ. ಹೋದ ಜಿಲ್ಲಾ ಪರಿಷತ್ತಿಗೆ ಗುಲ್ಬರ್ಗ ಜಿಲ್ಲೆಯಿಂದ ಪ್ರಥಮ ಬಾರಿ ಕರ್ನಾಟಕದಲ್ಲಿ ಜಿಲ್ಲಾ ಪರಿಷತ್ತಿಗೆ ಒಬ್ಬ ಪ್ರತಿನಿಧಿಯನ್ನು ಆರಿಸಿಕಳುಹಿಸಲು ಸಾಧ್ಯವಾಗಿದೆ. ರಾಜಶ್ರೀ ಸಿಮೆಂಟ್ ಹೋರಾಟದಲ್ಲಿ ಸಂಗಾತಿ ಮಾಧವರಾವ್ ಅವರನ್ನು ಕಳಕೊಳ್ಳುವಂತಾಯಿತು. ದುಡಿಯುವ ಜನರ ಸಹಾನುಭೂತಿದಾರರ ಸಹಾಯದಿಂದ ಮಹಮ್ಮದ್ ಹುಸನ್ ಖಾನ್ ಸ್ಮಾರಕ ಭವನ ಹೆಮ್ಮೆಯಿಂದ ಮೆರುಗುವಂತಾಯಿತು.

ಈ ರೀತಿ ಪರಿಷ್ಕರಣವಾದವನ್ನು ದೂರ ತಳ್ಳಿ ಮಾರ್ಕ್ಸ್‌ವಾದಿ-ಲೆನಿನ್ ವಾದದ ನೆಲೆಗಟ್ಟಿನಲ್ಲಿ ಸಿಪಿಐ(ಎಂ) ಪಕ್ಷದ ಕೆಂಬಾವುಟ ವನ್ನು ಎತ್ತಿ ಹಿಡಿದು ಹೋರಾಟ ನಡೆಸುತ್ತಿರುವ ಕ್ರೂರ ದಬ್ಬಾಳಿಕೆಗಳನ್ನೆದುರಿಸಿ ದುಃಖದ ದುಮ್ಮಾನಗಳನ್ನು ಸಹಿಸಿ ಪಕ್ಷವನ್ನು ರಕ್ಷಿಸುತ್ತಿರುವ ಬೆಳೆಸುತ್ತಿರುವ ಸಂಗಾತಿಗಳ ಶ್ರಮದಿಂದ ಈ ಸಮ್ಮೇಳನ ನಡೆಯುತ್ತಿದೆ.

ಕೋಮುಸೌಹಾರ್ದತೆಯ ನಗರ

ಚರಿತ್ರೆಯಲ್ಲಿ ಗುಲ್ಬರ್ಗ ಒಂದು ವಿಶಿಷ್ಟ ಸ್ಥಾನವನ್ನು ಹೊಂದಿರುವುದನ್ನು ನೆನಪಿಸಿ ಕೊಳ್ಳಬೇಕು. ಬ್ರಿಟಿಷರ ವಿರುದ್ಧ ಬಂಡಾಯದ ಬಾವುಟವನ್ನು ಎತ್ತಿ ಹಿಡಿದು ಹೋರಾಡಿದ ಪ್ರಥಮ ಪಾಳೆಗಾರರಾದ ವೆಂಕಟಪ್ಪ ನಾಯಕ ಮಾತ್ರವಲ್ಲ ಬ್ರಿಟಿಷರ ವಿರುದ್ಧ ಹೋರಾಡಿದ ವೀರಾಗ್ರಣಿ ಸಂಗೊಳ್ಳಿ ರಾಯಣ್ಣ ಸಹಾಯ ಯಾಚಿಸಿದಾಗ ಅವನಿಗೆ ವೆಂಕಟಪ್ಪ ನಾಯಕ 300 ಬೇಡ ಪಡೆಯನ್ನು ಕೊಟ್ಟು ಅವರ ಸಹಾಯದಿಂದ ಬ್ರಿಟಿಷರ ವಿರುದ್ಧ ಹೋರಾಡಿದ ನೆಂಬ ಸಂಗತಿ ನವಪೀಳಿಗೆಯಲ್ಲಿ ಹೊಸ ಚೈತನ್ಯ ತುಂಬಲು ಸಹಾಯಕವಾಗಬಹುದಾಗಿದೆ.

ಹಾಗೆಯೇ ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಾನ್ಯಖೇಟ(ಮಳಖೇಡ) ಬಹಮನಿ ರಾಜಧಾನಿ ಕಲುಬುರ್ಗಿ(ಗುಲ್ಬರ್ಗ) ಖೇಡ ಅರಸರ ರಾಜಧಾನಿ ಸುರಪುರ ಈ ನಾಡಿನ ಇತಿಹಾಸ ನಿರ್ಮಿಸಿದ ಸ್ಥಳಗಳು. ಅಷ್ಟೇ ಅಲ್ಲದೆ ಕಲಬುರ್ಗಿಯ ಶರಣಬಸವ, ಬಂದೇ ನವಾಜ, ಜೇವರ್ಗಿಯ ಷಣ್ಮುಖ ಶಿವಯೋಗಿ, ಕೊಡೆಕಲ್ ಬಸವಣ್ಣ, ರೇವಣ್ಣ ಸಿದ್ದ ಹಾಗೆಯೇ 12ನೇ ಶತಮಾನದಲ್ಲಿ ಆಗಿಹೋದ ಏಕಾಂತ ರಾಮಯ್ಯ ಮುಂತಾದ ಶರಣರು ಹಾಗೆಯೇ ಯಾದಗಿರಿಯ ಮೈಲಾರಲಿಂಗ, ಚಿಂಚನ ಸೂರಿನ ಮಾವುರಿ ತಾಯಿ, ಛತ್ತರಗಿ ಭಾಗಮ್ಮ ಮೊದಲಾದ ದೇವತೆಗಳು ಜನರ ಬದುಕಿನ ಮೇಲೆ ಅಪಾರ ಪ್ರಭಾವ ಬೀರಿದೆ. ಆ ಕಾರಣದಿಂದಲೇ ಈಗಲೂ ಕೂಡ ಶರಣ ಬಸವೇಶ್ವರನ ಉತ್ಸವ ಪ್ರಾರಂಭವಾಗಬೇಕಾದರೆ ಬಂದೇ ನವಾಜದ ಮುಸಲ್ಮಾನ ಗುರುಗಳು ಬರಬೇಕು. ಬಂದೇ ನವಾಜ ಉರುಸು ಪ್ರಾರಂಭವಾಗಬೇಕಾದರೆ, ಶರಣ ಬಸವೇಶ್ವರನ ಪ್ರತಿನಿಧಿ ಹಾಜರಿರಬೇಕೆಂಬ ರಿವಾಜು ಈಗಲೂ ಅಸ್ತಿತ್ವದಲ್ಲಿದೆ. ಆ ಕಾರಣದಿಂದಲೇ ಗುಲ್ಬರ್ಗ ನಗರದಲ್ಲಿ ಮುಸಲ್ಮಾನರ ಜನಸಂಖ್ಯೆ ಹೆಚ್ಚಿಗಿದ್ದರೂ ಕೂಡಾ ಮತೀಯ ಗಲಭೆಗಳು ನಡೆಯುವುದು ಅತಿ ವಿರಳ. ಇತ್ತೀಚೆಗಷ್ಟೆ ಬಿಜೆಪಿಯ ಹಿಂದು ಪಂಥವಾದಿಗಳು ಮತ್ತು ಜಮಾಯತೇ ಇಸ್ಲಾಮೀ ಪಂಥವಾದಿಗಳಿಂದಾಗಿ ಕೋಮು ಗಲಭೆ ನಡೆಯಿತಾದರೂ ಅದು ಬೇರೆ ಕಡೆಯಲ್ಲಿಯಂತೆ ವ್ಯಾಪಕವಾಗಿ ಹಬ್ಬದಿರಲು ಶತಕಗಳಿಂದ ಬೆಳೆದು ಬಂದಿರುವ ಕೋಮು ಸೌಹಾರ್ದತೆಯ ಮೂಲ ಮನೋಭಾವವೇ ಮುಖ್ಯ ಕಾರಣ. ಇಂಥ ಹಿನ್ನೆಲೆ ಇರುವ ಗುಲ್ಬರ್ಗದಲ್ಲಿ ೧೫ನೇಯ ಸಮ್ಮೇಳನ ನಡೆಯುತ್ತಿದೆ.

ಪ್ರಸ್ತುತ ಪರಿಸ್ಥಿತಿ

ಕರ್ನಾಟಕದಲ್ಲಿ ಕಾಂಗ್ರೆಸ್ ಸೋತು ಜನತಾದಳ ಅಧಿಕಾರಕ್ಕೆ ಬಂದಿದೆ ನಿಜ. ಆದರೆ ಕಾಂಗ್ರೆಸ್ ಪ್ರಭಾವವೇನೂ ನಿರ್ಲಕ್ಷಿಸುವಷ್ಟು ಕಡಿಮೆಯಾಗಿಲ್ಲ, ಬಿಜೆಪಿ ತನ್ನ ಬಲ ಹೆಚ್ಚಿಸಿಕೊಂಡಿದೆ. ಮಾತ್ರವಲ್ಲ ವಿಧಾನಸಭೆಯಲ್ಲಿ ವಿರೋಧ ಪಕ್ಷದ ಸ್ಥಾನ ಹೊಂದಿ ರಾಜ್ಯದ ರಾಜಕೀಯದಲ್ಲಿ ಹೆಚ್ಚಿನ ಕೈವಾಡ ನಡೆಸುವ ಸಾಧ್ಯತೆಗಳಿವೆ. ದಲಿತರ ಹೆಸರಿನಲ್ಲಿ ಹಲವಾರು ಶಕ್ತಿಗಳು ಎದ್ದಿವೆ. ಜನತಾದಳ ಅಧಿಕಾರಕ್ಕೆ ಬಂದಿದ್ದರೂ ಕೂಡಾ ರಾಜ್ಯದಲ್ಲಿ ಈ ಶಕ್ತಿಗಳನ್ನೆಲ್ಲಾ ಎದುರಿಸಿ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಭ್ರಷ್ಟಾಚಾರವಿಲ್ಲದ ಜನಪರ ಆಡಳಿತೆಯನ್ನು ನಡೆಸುವ ಮೂಲಕ ಯಾವ ರೀತಿ ಸಹಕಾರದ ಹಸ್ತ ನೀಡುತ್ತಿದೆಂಬುದನ್ನು ಕಾದು ನೋಡಬೇಕಾಗಿದೆ.

ಎಡ ಆಂದೋಲನ ದುರ್ಬಲವಾಗಿರುವ ನಮ್ಮ ರಾಜ್ಯದಲ್ಲಿ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಗೊಳಿಸುವ ಆ ಮೂಲಕ ಕೇಂದ್ರ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಹಾಗೆಯೇ ರಾಜ್ಯದ ಜನತಾದಳದ ಜನವಿರೋಧಿ ನೀತಿಗಳ ವಿರುದ್ಧ ಹೋರಾಡುವ ಮುಖ್ಯ ಜವಾಬ್ದಾರಿಯನ್ನು ಸಿಪಿಐ (ಎಂ) ಪಕ್ಷ ಮತ್ತು ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳು ಹೊರಬೇಕಾಗುತ್ತದೆ. ಸಿಪಿಐ(ಎಂ) ಪಕ್ಷ ಸ್ವತಂತ್ರವಾಗಿಯೂ, ಇತರ ಎಡ, ಪ್ರಜಾಪ್ರಭುತ್ವ ಶಕ್ತಿಗಳೊಡನೆ ಸೇರಿ ಜಂಟೀ ಹೋರಾಟಗಳನ್ನು ನಡೆಸಬೇಕಾದೀತು.

ರಾಜ್ಯದಲ್ಲಿ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ರಾಜ್ಯದ ಜನತೆ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಿಗೆ ಗಮನ ಹರಿಸುವ ಅವುಗಳಿಗಾಗಿ ಹೋರಾಟಗಳನ್ನು ಸಂಘಟಿಸುವ ಜವಾಬ್ದಾರಿ ಸಿಪಿಐ(ಎಂ) ಮೇಲೆ ಬಿದ್ದಿದೆ. ನೀರಾವರಿ ಸಮಸ್ಯೆಗಳು, ಬರಗಾಲ, ನೆರೆಹಾವಳಿ ಪರಿಹಾರಗಳು, ಕೈಗಾರಿಕೆಗಳ ಸಮಸ್ಯೆ, ನಿರುದ್ಯೋಗ, ಶಿಕ್ಷಣದ ಪ್ರಶ್ನೆಗಳು, ಅಭಿವೃದ್ಧಿ ಕೆಲಸಗಳು ಹೀಗೆ ಹಲವಾರು ಸಮಸ್ಯೆಗಳಿಗಾಗಿ ಸ್ಪಂದಿಸಬೇಕಾಗಿದೆ. ಹಾಗಾಗಬೇಕಾದರೆ ಪಕ್ಷ ಇನ್ನೂ ದೊಡ್ಡದಾಗಿ ಬೆಳೆದು ಬರಬೇಕು. ಸಾಮೂಹಿಕ ಸಂಘಟನೆಗಳು ವಿಸ್ತಾರಗೊಳ್ಳಬೇಕು. ನಿರ್ದಿಷ್ಟ ಸಮಸ್ಯೆಗಳತ್ತ ಗಮನ ಹರಿಸಿ ಹೋರಾಟ ರೂಪಿಸಬೇಕು. ಆ ಮೂಲಕ ಪಕ್ಷ ಪ್ರಬಲವಾಗಿ ಬೆಳೆಯಬೇಕು. ಈ ಎಲ್ಲಾ ಸಮಸ್ಯೆಗಳ ಕುರಿತು ಗುಲ್ಬರ್ಗದಲ್ಲಿ ಸೇರುವ ಪಕ್ಷದ 15ನೆ ರಾಜ್ಯ ಸಮ್ಮೇಳನ ನಿರ್ಣಯಗಳನ್ನು ಕೈಗೊಳ್ಳಬೇಕಾಗಿದೆ, ಕಾರ್ಯಾಚರಣೆ ಯಾವ ರೀತಿ ಮುಂದೆ ಹೋಗಬೇಕೆಂಬುದನ್ನು ನಿರ್ಧರಿಸಬೇಕಾಗಿದೆ.

ಈ ಹೊಸ ಜವಾಬ್ದಾರಿಯನ್ನು ಹೊತ್ತು ಸರಿಯಾದ ಮಾರ್ಗದರ್ಶನ ನೀಡುವ ಜವಾಬ್ದಾರಿಯನ್ನು ಗುಲ್ಬರ್ಗಾ ಸಮ್ಮೇಳನ ನಿರ್ವಹಿಸುವುದೆಂದೂ ಆ ಮೂಲಕ ಹೆಚ್ಚಿನ ಉತ್ಸಾಹದಿಂದ ಕಾರ್ಯಪ್ರವೃತ್ತರಾಗಲು ಪ್ರತಿನಿಧಿಗಳಿಗೆ, ಪಕ್ಷಕ್ಕೆ ಪ್ರೋತ್ಸಾಹ ನೀಡುತ್ತದೆಂದೂ ಆಶಿಸೋಣ. ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಯಲ್ಲಿ ಹೊಸ ಅಧ್ಯಾಯ ಬರೆಯುವಲ್ಲಿ ಗುಲ್ಬರ್ಗಾ ಸಮ್ಮೇಳನ ಸಹಾಯವಾಗಲೆಂದೂ ಆಶಿಸೋಣ.

-ಎಸ್.ಕೆ. ಉಪಾಧ್ಯಾಯ